14 July 2026 Tuesday
SINCE 1957
ಬೆಳಗಿನ ಪ್ರಾದೇಶಿಕ ದಿನಪತ್ರಿಕೆ
# ವರ್ತಮಾನ
ಸಂಪಾದಕ: ಕೆ.ಎನ್.ರವಿ
ಭವಿಷ್ಯದ ಮುನ್ನುಡಿ
info.varthaman@gmail.com
9742504916 ಮೈಸೂರು ಮಂಡ್ಯ ಬೆಂಗಳೂರು ಹಾಸನ ಚಾಮರಾಜನಗರ ರಾಮನಗರ ಬೆಂಗಳೂರು ಗ್ರಾಮಾಂತರ ಕೊಡಗು ಕಾರ್ಯನಿರ್ವಾಹಕ ಸಂಪಾದಕ – ಕೆ.ಆರ್.ಮಿಹಿರ್ ಆಕಾಶ್
VARTHAMAN Volume: 69 Issue: 225 Pages: 06 KA/SK/MYS/1098/2023-2025 R.N.I. No.3577/1957 www.varthaman.in Price-3

**ಭಾವನಾಂತರಂಗ**

ಎಲ್ಲರಿಗೂ ನೀವು ಅರ್ಥ ಆಗಬೇಕೆಂದೇನೂ ಇಲ್ಲ! ತಕ್ಕಡಿ ಕೇವಲ ತೂಕವನ್ನು ಹೇಳುತ್ತದೆ, ಹೊರತು ತನ್ನ ಗುಣಮಟ್ಟವನ್ನಲ್ಲ!

-ಸ್ನೇಹಾ ಆನಂದ್


ಹಂಪಾಪುರ ಕೆರೆ ಒತ್ತುವರಿ ತೆರವುಗೊಳಸದೆ ಮಣ್ಣು ಲೂಟಿ ಪುಟ ಸಂ. 2

ಶೀಘ್ರ ನ್ಯಾಯ ಲೋಕ್ ಅದಾಲತ್ ಪ್ರಮುಖ ಉದ್ದೇಶ ಪುಟ ಸಂ. 3

ಆಷಾಢ: ಚಾಮುಂಡಿ ಬೆಟ್ಟದ ಮೆಟ್ಟಿಲು ಸ್ವಚ್ಛಗೊಳಿಸಿದ ಯುವಕರು ಪುಟ ಸಂ. 4

# ಕಂಬಳಕ್ಕೆ ಭರ್ಜರಿ ಸಿದ್ಧತೆ

## ಸಾರ್ವಜನಿಕರ ತೀವ್ರ ವಿರೋಧ ನಡುವೆಯೂ ಹಠಕ್ಕೆಬಿದ್ದ ಸರ್ಕಾರ

**ಮೈಸೂರು:** ಮೈಸೂರು ದಸರಾ ಮಹೋತ್ಸವದಲ್ಲಿ ಕಂಬಳ ಆಯೋಜನೆಗೆ ಸ್ಥಳೀಯ ಜನಪ್ರತಿನಿಧಿಗಳು, ಸಂಘಸಂಸ್ಥೆಗಳು ಮತ್ತು ಸಾರ್ವಜನಿಕರಿಂದ ತೀವ್ರ ವಿರೋಧ ವ್ಯಕ್ತವಾಗಿದೆ. ಆದರೂ ಸರ್ಕಾರ ಹಠಕ್ಕೆ ಬಿದ್ದು ಕಂಬಳ ನಡೆಸಲು ಮುಂದಾಗಿದೆ.

ನಗರದಲ್ಲಿ ದಸರಾ ಅಂಗವಾಗಿ ಎರಡು ದಿನಗಳ ಕಂಬಳ ಆಯೋಜಿಸಲು ಸರ್ಕಾರ ಸಿದ್ಧತೆಗೆ ಮುಂದಾಗಿದೆ. ನಗರದ ಹೊರವಲಯದ ಕಂಬಳಕ್ಕಾಗಿ ನಿಗದಿಪಡಿಸಲಾದ ಜಾಗದಲ್ಲಿ ಭರದ ಸಿದ್ಧತೆಗಳು ಆರಂಭವಾಗಿವೆ. ಜನರ ತೀವ್ರ ವಿರೋಧವನ್ನು ಕ್ಯಾರೇ ಎನ್ನದೆ ಸಿದ್ಧತೆ ನಡೆಯುತ್ತಿದೆ.

ನಗರದ ಹೊರವಲಯದ ಸಾತಗಳ್ಳಿ ಬಳಿ ಇರುವ 20 ಎಕರೆ ಜಾಗದಲ್ಲಿ ಮಣ್ಣನ್ನು ಸಮತಟ್ಟು ಮಾಡುವ ಕಾರ್ಯ ಈಗಾಗಲೇ ಶುರುವಾಗಿದೆ. 10ಕ್ಕೂ ಹೆಚ್ಚು ಜೆಸಿಬಿ ಯಂತ್ರಗಳನ್ನು ಬಳಸಿ ಇಡೀ ಜಾಗವನ್ನು ಸಮತಟ್ಟು ಮಾಡಲಾಗುತ್ತಿದೆ. ಇದು ಜಿಲ್ಲೆಯ ಪರಿಸರ ಪ್ರೇಮಿಗಳ ತೀವ್ರ ಆಕ್ರೋಶಕ್ಕೆ ಕಾರಣವಾಗಿದೆ. ದಸರಾ ಸಿದ್ಧತೆಗೂ ಮುನ್ನವೇ ಸರ್ಕಾರ ವಿವಾದವನ್ನು ಮೈಮೇಲೆ ಎಳೆದುಕೊಳ್ಳಲು ಮುಂದಾಗಿದೆ ಎಂದು ಸಾರ್ವಜನಿಕರು ತೀವ್ರ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ನಾಡಹಬ್ಬ ದಸರಾದಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಕಂಬಳ ನಡೆಸುವ ಅವಶ್ಯಕತೆ ಏನು? ಅಲ್ಲದೆ, ಬರಗಾಲದ ಸ್ಥಿತಿಯಲ್ಲಿ ಕಂಬಳ ನಡೆಸಲು ಅಗತ್ಯವಿರುವ ಅಗಾಧ ಪ್ರಮಾಣದ ನೀರನ್ನು ಪೋಲು ಮಾಡಲು ಮುಂದಾಗಿರುವುದು ಸಹ ಜನರ ಪುಟ 2ಕ್ಕೆ

### ಜೀವವೈವಿಧ್ಯದ ಕೆರೆಗೆ ಕಂಟಕ: ನೂರಾರು ಮರಗಳಿಗೆ ಕೊಡಲಿ

**ಮೈಸೂರು:** ಕಂಬಳ ನಡೆಸಲು ಗುರುತಿಸಲಾಗಿರುವ ಸಾತಗಳ್ಳಿಯ ಈ 20 ಎಕರೆ ಪ್ರದೇಶವು ದಟ್ಟವಾದ ಹಸಿರಿನಿಂದ ಕೂಡಿದೆ. ಈ ಭಾಗದಲ್ಲಿ ವಿವಿಧ ಜಾತಿಯ 150ಕ್ಕೂ ಅಧಿಕ ಬೃಹತ್ ಗಾತ್ರದ ಮರಗಳಿವೆ. ಇಡೀ ಪ್ರದೇಶವನ್ನು ಆವರಿಸಿಕೊಂಡಿವೆ. ಆದರೆ ಕಂಬಳದ ಕರೆಯನ್ನು ನಿರ್ಮಿಸುವ ಸಲುವಾಗಿ ಈ ಎಲ್ಲಾ ಮರಗಳನ್ನು ಕಡಿಯಲು ಸಿದ್ಧತೆ ನಡೆದಿರುವುದು ಪರಿಸರ ಪ್ರೇಮಿಗಳ ಆಕ್ರೋಶಕ್ಕೆ ಕಾರಣವಾಗಿದೆ.

ಈ ಜಾಗದಲ್ಲಿರುವ ಮರಗಳನ್ನು ಕಡಿಯುವ ಮೂಲಕ ಪರಿಸರಕ್ಕೆ ಮತ್ತೊಂದು ದೊಡ್ಡ ಪೆಟ್ಟು ಬಿದ್ದಿದೆ. ಇಲ್ಲಿ ಸುಮಾರು 6 ಎಕರೆಗೂ ಹೆಚ್ಚು ಪುಟ 2ಕ್ಕೆ



### ಕಂಬಳ ನಡೆಸಲು ಸಿಎಂ ತೀರ್ಮಾನ: ಯತೀಂದ್ರ



ಕಲಬುರ್ಗಿ: ಮೈಸೂರು ದಸರಾದಲ್ಲಿ ಕಂಬಳ ನಡೆಸಬೇಕು ಎಂದು ಮುಖ್ಯ ಮಂತ್ರಿ ಡಿ.ಕೆ.ಶಿವಕುಮಾರ್ ತೀರ್ಮಾನ ಮಾಡಿದ್ದಾರೆ. ಅದರಂತೆ ಕಂಬಳ ನಡೆ ಯಲಿದೆ. ಕಂಬಳ ನಮ್ಮ ರಾಜ್ಯದ ಒಂದು ಭಾಗದ ಸಂಸ್ಕೃತಿ. ಕರ್ನಾಟಕದ ಯಾವುದೇ ಮೂಲೆಯಲ್ಲಿ ಸಂಸ್ಕೃತಿ, ಪುಟ 2ಕ್ಕೆ

## ಕುಡಿಯುವ ನೀರಿಗೆ ಆದ್ಯತೆ

**ಆನಂತರ ಬೆಳೆಗಳಿಗೆ ನೀರು: ಸಚಿವ ಯತೀಂದ್ರ**

**ಕಲಬುರಗಿ:** ಬರ ಪರಿಸ್ಥಿತಿ ದೀರ್ಘಕಾಲ ಮುಂದುವರಿಯುವ ಸಾಧ್ಯತೆ ಇದೆ ಎನ್ನಲಾಗಿದೆ. ಹೀಗಾಗಿ ಜಲಾಶಯಗಳಲ್ಲಿನ ನೀರಿನ



ಮಟ್ಟ ನೋಡಿಕೊಂಡು ಮೊದಲಿಗೆ ಕುಡಿ ಯುವ ನೀರಿಗೆ ಹಾಗೂ ನಂತರ ಬೆಳೆಗಳಿಗೆ ನೀರು ಕೊಡಲು ಅಧಿಕಾರಿಗಳಿಗೆ ಸೂಚಿಸಲಾಗಿದೆ ಎಂದು ನಗರಾಭಿವೃದ್ಧಿ ಸಚಿವ ಯತೀಂದ್ರ ಸಿದ್ದರಾಮಯ್ಯ ಹೇಳಿದರು. ನಗರದಲ್ಲಿ ಸೋಮವಾರ ಮಧ್ಯಮಗಳೊಂದಿಗೆ ಪುಟ 2ಕ್ಕೆ

## ವಚನಾನಂದ ಶ್ರೀಗೆ ಜಾಮೀನು

**ದಾವಣಗೆರೆ:** ಹರಿಹರ ಪೀಠದ ವಚನಾನಂದ ಸ್ವಾಮೀಜಿಗೆ ಪೋಕ್ಸೋ ಪ್ರಕರಣದಲ್ಲಿ ವಿಶೇಷ ನ್ಯಾಯಾಲಯ ಜಾಮೀನು ಮಂಜೂರು ಮಾಡಿದೆ.

ಮಠದ ಅಪ್ರಾಪ್ತ ಮಕ್ಕಳ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ ಆರೋಪದಡಿ ವಚನಾನಂದ ಸ್ವಾಮೀಜಿ ವಿರುದ್ಧ ಪೋಕ್ಸೋ ಕಾಯ್ದೆಯಡಿ ಪ್ರಕರಣ ದಾಖಲಾಗಿತ್ತು. ಗದಗ ಜಿಲ್ಲೆಯ ಲಕ್ಷ್ಮೇಶ್ವರ ಪೊಲೀಸ್ ಠಾಣೆಯಲ್ಲಿ ಝೀರೋ ಎಫ್ಐಆರ್ ದಾಖಲಾಗಿತ್ತು. ಬಳಿಕ ತನಿಖೆಗಾಗಿ ಪ್ರಕರಣವನ್ನು ಹರಿಹರ ಗ್ರಾಮಾಂತರ ಪೊಲೀಸ್ ಠಾಣೆಗೆ ವರ್ಗಾಯಿಸಲಾಗಿತ್ತು.

ಪ್ರಕರಣ ದಾಖಲಾಗುವ ಮುನ್ನವೇ ವಚನಾನಂದ ಸ್ವಾಮೀಜಿ ನಿರೀಕ್ಷಣಾ ಜಾಮೀನು ಪಡೆದಿದ್ದರು. ಆದರೆ ಆ ಜಾಮೀನನ್ನು ರದ್ದುಪಡಿಸುವಂತೆ ಸಂತ್ರಸ್ತ ಪುಟ 2ಕ್ಕೆ

## 3–4 ದಿನದಲ್ಲಿ 'ದೆಹಲಿ ಯಾತ್ರೆ'

**ಅಧಿವೇಶನಕ್ಕೂ ಮೊದಲು ಸಂಪುಟ ವಿಸ್ತರಣೆ: ಸಿಎಂ ಡಿಕೆಶಿ ಸುಳಿವು**

**ಬೆಂಗಳೂರು:** ಇನ್ನು 3–4 ದಿನಗಳಲ್ಲಿ ನಮ್ಮ ಭೇಟಿಗೆ ಕಾಂಗ್ರೆಸ್ ಹೈಕಮಾಂಡ್ ನಾಯಕರು ಸಮಯ ಕೊಡಲಿದ್ದಾರೆ. ಅವರಿಂದ ಕರೆ ಬಂದ ತಕ್ಷಣವೇ ದೆಹಲಿಗೆ ತೆರಳುವೆ ಎಂದು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ತಿಳಿಸಿದರು.

ಬೆಂಗಳೂರಿನಲ್ಲಿ ಸಂಪುಟ ವಿಸ್ತರಣೆ ಕುರಿತು ಸುದ್ದಿಗಾರರ ಜೊತೆ ಸೋಮವಾರ ಮಾತನಾಡಿದ ಅವರು,



ಆ.6ರಂದು ಅಧಿವೇಶನ ಕರೆಯಲು ನಿರ್ಧರಿಸಲಾಗಿದೆ. ವರಿಷ್ಠರು ನಿಗದಿ ಮಾಡುವ ಸಮಯಕ್ಕೆ ಒಂದು ದಿನ ಮೊದಲೇ ದೆಹಲಿಗೆ ತೆರಳಿ ಈ ಬಗ್ಗೆ ಚರ್ಚಿಸುವೆ ಎಂದು ಹೇಳಿದರು.

ಸಿದ್ದರಾಮಯ್ಯ ಅವರ ರಾಜೀನಾಮೆ ಬಳಿಕ ಶಿವಕುಮಾರ್ ಅವರು ಮುಖ್ಯಮಂತ್ರಿಯಾಗಿ ಜೂನ್ 3ರಂದು ಪ್ರಮಾಣವಚನ ಸ್ವೀಕರಿಸಿದ್ದರು. ಅಂದು ಅವರ ಜತೆ 13 ಶಾಸಕರು ಸಚಿವರಾಗಿ ಪ್ರಮಾಣ ವಚನ ಸ್ವೀಕರಿಸಿದ್ದರು. ಹೊಸ ಸರ್ಕಾರ ಅಸ್ತಿತ್ವಕ್ಕೆ ಬಂದು ಒಂದೂವರೆ ತಿಂಗಳಾಗುತ್ತಾ ಬಂದರೂ ಪೂರ್ಣ ಪ್ರಮಾಣದಲ್ಲಿ ಸಂಪುಟ ವಿಸ್ತರಣೆ ಸಾಧ್ಯವಾಗಿಲ್ಲ.

ಹಿರಿಯ, ಕಿರಿಯ ಶಾಸಕರು, ಸಿದ್ದರಾಮಯ್ಯ ಸಂಪುಟದಲ್ಲಿ ಸಚಿವರಾಗಿ ಕೆಲಸ ಮಾಡಿರುವರು ಈಗ ಅವಕಾಶ ಸಿಗದೆ ನಿರಂತರ ಒತ್ತಡ ಹಾಕುತ್ತಿರುವುದು ಮುಖ್ಯಮಂತ್ರಿಯನ್ನು ಇಕ್ಕಟ್ಟಿಗೆ ಸಿಲುಕಿಸಿದೆ.

ಮೂರು, ನಾಲ್ಕು ಬಾರಿ ಶಾಸಕರಾದವರು, ಪಕ್ಷಕ್ಕಾಗಿ ಹಿಂದಿನಿಂದಲೂ ದುಡಿದವರು, ಇದೇ ಮೊದಲ ಬಾರಿ ಆಯ್ಕೆಯಾದವರು, ವಿಧಾನ ಪರಿಷತ್ ಸದಸ್ಯರು, ಶಾಸಕಿಯರು ಜಿಲ್ಲಾವಾರು, ಪುಟ 2ಕ್ಕೆ



## ಸರ್ವೇಗೆ ಬಂದ ಅಧಿಕಾರಿಗಳಿಗೆ ರೈತ ಮಹಿಳೆಯರ ಪೊರಕೆ ಏಟು!

**ರಾಮನಗರ:** ರೈತರ ವಿರೋಧದ ನಡುವೆಯೂ ಬಿಡದಿ ತಾಲ್ಲೂಕಿನ ಮಂಡಲಹಳ್ಳಿ ಗ್ರಾಮದಲ್ಲಿ ಜೆಎಂಸಿ ಸರ್ವೇಗೆ ಮುಂದಾದ ಜಿಬಿಡಿಎ ಅಧಿಕಾರಿಗಳಿಗೆ ರೈತ ಮಹಿಳೆಯರು ಪೊರಕೆ ಏಟು ನೀಡಿದ್ದಾರೆ.

ಯಾವುದೇ ಕಾರಣಕ್ಕೂ ಜೆಎಂಸಿ ಸರ್ವೇ ನಡೆ ಸದಂತೆ ಮಂಡಲಹಳ್ಳಿ ಗ್ರಾಮದ ರೈತರು ಒತ್ತಾಯಿ ಸಿದರು. ಬಲವಂತವಾಗಿ ಸರ್ವೇ ಕಾರ್ಯ ನಡೆಸಿ ದರೆ ಅಧಿಕಾರಿಗಳಿಗೆ ಪೊರಕೆ ಏಟು ಕೊಡುವು ದಾಗಿ ಎಚ್ಚರಿಕೆ ನೀಡಿದರು.

ಆದರೂ ಸರ್ವೇಗೆ ಮುಂದಾದ ಅಧಿಕಾರಿಗಳಿಗೆ ರೈತ ಮಹಿಳೆಯರು ಪೊರಕೆ ಏಟು ಕೊಟ್ಟಿದ್ದಾರೆ.

ಜೆಎಂಸಿ ಸರ್ವೇ ಮಾಡಲು ಅಧಿಕಾರಿಗಳು ಗ್ರಾಮಕ್ಕೆ ಬಂದಿದ್ದರು. ಆದರೆ ರೈತರು ಯಾವುದೇ ಕಾರಣಕ್ಕೂ ಸರ್ವೇ ಮಾಡಲು ಅನುಮತಿ ನೀಡಲಿಲ್ಲ. ಅಧಿಕಾರಿಗಳು ಎಷ್ಟೇ ಮನವಿ ಮಾಡಿದರೂ ರೈತರು ಕೇಳಲಿಲ್ಲ. ರೈತರು ಸರ್ವೇಗೆ ಬಂದ ಅಧಿಕಾರಿಗಳ ಕಾರನ್ನು ಸುತ್ತುವರಿದರು. ಪೊರಕೆಯಿಂದ ಹೊಡೆದು ಆಕ್ರೋಶ ವ್ಯಕ್ತಪಡಿಸಿದರು. ಪುಟ 2ಕ್ಕೆ

ವನ್ಯಜೀವಿ ಹಾಗೂ ಪತ್ರಿಕಾ ಛಾಯಾಗ್ರಾಹಕರಾದ ಎಸ್ ಆರ್ ಮಧುಸೂದನ ರವರಿಗೆ ಸೆಕೆಂಡ್ ಎಲ್‌ಪಿಎಸ್ ಹಾಗೂ ಸೆಕೆಂಡ್ ಆಲ್ಟಾಮಿರಾ ನ್ಯಾಷನಲ್ ಸಲಾನ್ ಫೋಟೋಗ್ರಫಿ ಸ್ಪರ್ಧೆ 2026 ರಲ್ಲಿ ಫೋಟೋ ಜರ್ನಲಿಸಂ ವಿಭಾಗದಲ್ಲಿ ಶಾರ್ಟ್ ಡೆಡ್ ಛಾಯಾ ಚಿತ್ರಕ್ಕೆ ಎಲ್ ಪಿ ಎಸ್ ಚಿನ್ನದ ಪದಕ ಹಾಗೂ ವನ್ಯಜೀವಿ ವಿಭಾಗದಲ್ಲಿ ಪ್ಯಾರ ಡೈಸ್ ಫ್ಲೈಕ್ಯಾಚರ್ ಚಿತ್ರಕ್ಕೆ ಜೆಎಸ್‌ಪಿ ಚಿನ್ನದ ಪದಕ ಗಳಿಸಿದ್ದಾರೆ.



| ಜಲಾಶಯಗಳ ನೀರಿನ ಮಟ್ಟ | |
|---|---|
| **ಕೆ ಆರ್ ಎಸ್** | |
| ಗರಿಷ್ಠ ಮಟ್ಟ | 124.80 ಅಡಿ |
| ಇಂದಿನ ಮಟ್ಟ | 92.38 ಅಡಿ |
| ಒಳಹರಿವು | 4975 ಕ್ಯುಸೆಕ್ |
| ಹೊರ ಹರಿವು | 623 ಕ್ಯುಸೆಕ್ |
| **ಕಬಿನಿ ಜಲಾಶಯ** | |
| ಗರಿಷ್ಠ ಮಟ್ಟ | 2284 ಅಡಿ |
| ಇಂದಿನ ಮಟ್ಟ | 2270.06 ಅಡಿ |
| ಒಳಹರಿವು | 3166 ಕ್ಯುಸೆಕ್ |
| ಹೊರ ಹರಿವು | 500 ಕ್ಯುಸೆಕ್ |
| **ಹಾರಂಗಿ ಜಲಾಶಯ** | |
| ಗರಿಷ್ಠ ಮಟ್ಟ | 2859 ಅಡಿ |
| ಇಂದಿನ ಮಟ್ಟ | 2846.66 ಅಡಿ |
| ಒಳಹರಿವು | 2036 ಕ್ಯುಸೆಕ್ |
| ಹೊರ ಹರಿವು | 180 ಕ್ಯುಸೆಕ್ |
| **ಹೇಮಾವತಿ ಜಲಾಶಯ** | |
| ಗರಿಷ್ಠ ಮಟ್ಟ | 2922 ಅಡಿ |
| ಇಂದಿನ ಮಟ್ಟ. | 2903.52 ಅಡಿ |
| ಒಳಹರಿವು | 2960 ಕ್ಯುಸೆಕ್ |
| ಹೊರಹರಿವು | 300 ಕ್ಯುಸೆಕ್ |

## ಕೆಪಿಎಸ್‌ಸಿ ಅಧ್ಯಕ್ಷಗೆ 'ಗೇಟ್‌ಪಾಸ್'

**ಶಿವಶಂಕರಪ್ಪ ಅಮಾನತು ಮಾಡಿ ರಾಜ್ಯಪಾಲರ ಆದೇಶ**

**ಬೆಂಗಳೂರು:** ಅಧಿಕಾರ ದುರುಪಯೋಗದ ಆರೋಪದಲ್ಲಿ ಕರ್ನಾಟಕ ಲೋಕಸೇವಾ ಆಯೋಗದ (ಕೆಪಿಎಸ್‌ಸಿ) ಅಧ್ಯಕ್ಷ ಶಿವಶಂಕರಪ್ಪ ಸಾಹುಕಾರ ಅವರನ್ನು ಕೂಡಲೇ ಜಾರಿಗೆ ಬರುವಂತೆ ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ಅಮಾನತುಗೊಳಿಸಿ ಆದೇಶ ಹೊರಡಿಸಿದ್ದಾರೆ.

ಶಿವಶಂಕರಪ್ಪ ಸಾಹುಕಾರ ತನ್ನ ಇಬ್ಬರು ಪುತ್ರಿಯರಿಗೆ ಕೈಗಾರಿಕಾ ವಿಸ್ತರಣಾಧಿಕಾರಿಯಾಗಿ ನೇಮಕವಾಗಲು ಅಧಿಕಾರ ದುರುಪಯೋಗ ಮಾಡಿಕೊಂಡಿದ್ದರು. ಅಲ್ಲದೆ, ಸುಳ್ಳು ಆದಾಯ ಪ್ರಮಾಣಪತ್ರ ಪಡೆದಿದ್ದರು ಎಂಬ ಆರೋಪದ ಹಿನ್ನೆಲೆಯಲ್ಲಿ ಅಮಾನತು ಮಾಡಲಾಗಿದೆ.

ಕರ್ನಾಟಕ ಲೋಕಸೇವಾ ಆಯೋಗದ ಅಧ್ಯಕ್ಷರಾದ ಶಿವಶಂಕರಪ್ಪ ಎಸ್. ಸಾಹುಕಾರ ತಮ್ಮ ಅಧಿಕಾರವನ್ನು ದುರುಪಯೋಗಪಡಿಸಿಕೊಂಡಿರುವ ಗಂಭೀರ ಆರೋಪ ಕೇಳಿಬಂದಿದೆ. ತಮ್ಮ ಪುತ್ರಿಗೆ ಸರ್ಕಾರಿ ಹುದ್ದೆ ಕೊಡುವ ಸಲುವಾಗಿ ಕುಟುಂಬದ ವಾರ್ಷಿಕ ಆದಾಯ ಪ್ರಮಾಣಪತ್ರದಲ್ಲಿ ಸುಳ್ಳು ಮಾಹಿತಿ ಹಾಕಲು ಸಹಕರಿಸಿದ್ದಾರೆ ಎಂಬುದು ಮೇಲ್ನೋಟಕ್ಕೆ ಸಾಬೀತಾಗಿದೆ.

ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆಯ 50 ಕೈಗಾರಿಕಾ ವಿಸ್ತರಣಾಧಿಕಾರಿ ಹುದ್ದೆಗಳಿಗೆ 2024ರ ಮಾರ್ಚ್ 15ರಂದು ಅಧಿಸೂಚನೆ ಹೊರಡಿಸಲಾಗಿತ್ತು. ಈ ಹುದ್ದೆಗಾಗಿ ಅಧ್ಯಕ್ಷರ ಪುತ್ರಿ ಸುಮಾ ಎಸ್.ಸಾಹುಕಾರ್ 3ಬಿ ಮೀಸಲಾತಿ ಅಡಿಯಲ್ಲಿ ಅರ್ಜಿ ಸಲ್ಲಿಸಿದ್ದರು. 1:3 ಅನುಪಾತದ ಅರ್ಹತಾ ಪಟ್ಟಿಯಲ್ಲಿ ಸ್ಥಾನ ಪಡೆದಿದ್ದ ಅವರು ಫೆಬ್ರವರಿ 19ರಂದು ಮೂಲ ದಾಖಲೆಗಳ ಪರಿಶೀಲನೆಗೆ ಹಾಜರಾಗಿದ್ದರು. ದಾಖಲೆಗಳ ಪರಿಶೀಲನೆ ವೇಳೆ, ಪುಟ 2ಕ್ಕೆ



### ಹಿರಿಯ ಸದಸ್ಯರಿಗೆ ಹಂಗಾಮಿ ಅಧ್ಯಕ್ಷತೆ

ಶಿವಶಂಕರಪ್ಪ ಸಾಹುಕರ ವಿರುದ್ಧ ತನಿಖೆಗೆ ರಾಜ್ಯಪಾಲರು ಶಿಫಾರಸು ಮಾಡಿದ್ದಾರೆ. ಈ ಬಗ್ಗೆ ಸುಪ್ರೀಂ ಕೋರ್ಟಿಗೆ ಉಲ್ಲೇಖಿಸಲು ರಾಷ್ಟ್ರಪತಿ ಅವರಿಗೆ ರಾಜ್ಯಪಾಲರು ಶಿಫಾರಸು ಮಾಡಿದ್ದಾರೆ. ಮುಂದಿನ ಆದೇಶದವರೆಗೆ ಕೆಪಿಎಸ್‌ಸಿ ಹಿರಿಯ ಸದಸ್ಯರು ಹಂಗಾಮಿ ಅಧ್ಯಕ್ಷರಾಗಿ ಕಾರ್ಯ ನಿರ್ವಹಿಸುವಂತೆ ಆದೇಶದಲ್ಲಿ ತಿಳಿಸಲಾಗಿದೆ.

## ತಿಮರೋಡಿಗೆ 'ಸುಪ್ರೀಂ' ತರಾಟೆ: ಗಡಿಪಾರು ಪ್ರಶ್ನಿಸಿದ್ದ ಅರ್ಜಿ ವಜಾ

**ನವದೆಹಲಿ:** ಗಡಿಪಾರು ಆದೇಶವನ್ನು ಪ್ರಶ್ನಿಸಿ ಮಹೇಶ್ ಶೆಟ್ಟಿ ತಿಮರೋಡಿ ಸಲ್ಲಿಸಿದ್ದ ಅರ್ಜಿಯನ್ನು ಸುಪ್ರೀಂ ಕೋರ್ಟ್ ವಜಾ ಮಾಡಿದೆ. ಕಾನೂನು ಪ್ರಕಾರ ಸೂಕ್ತ ಸಕ್ಷಮ ಪ್ರಾಧಿಕಾರವನ್ನೇ ಸಂಪರ್ಕಿಸುವಂತೆ ನಿರ್ದೇಶಿಸಿದೆ.

ಪ್ರಕರಣದ ವಿಚಾರಣೆ ನಡೆಸಿದ ನ್ಯಾ.ಸಂಜಯ್ ಕುಮಾರ್ ನೇತೃತ್ವದ ದ್ವಿ ಸದಸ್ಯ ಪೀಠ ಮಹೇಶ್ ಶೆಟ್ಟಿ ಸಲ್ಲಿಸಿದ್ದ ಅರ್ಜಿಯನ್ನು ಹೈಕೋರ್ಟ್ ಈಗಾಗಲೇ ವಜಾಗೊಳಿಸಿರುವುದನ್ನು ಪ್ರಸ್ತಾಪಿಸಿತು. ಲಭ್ಯವಿರುವ ಶಾಸನಬದ್ಧ ಪರಿಹಾರಗಳನ್ನು ಬಳಸಿಕೊಳ್ಳುವ ಬದಲು ನೇರವಾಗಿ ಸುಪ್ರೀಂ ಕೋರ್ಟ್ಗೆ ಅರ್ಜಿ ಸಲ್ಲಿಸಿರುವುದರ ಕುರಿತು ನ್ಯಾಯಪೀಠ ಪ್ರಶ್ನಿಸಿತು.

ಮಹೇಶ್ ಶೆಟ್ಟಿ ಪರ ವಾದ ಮಂಡಿಸಿದ ವಕೀಲರು, ಈ ಗಡಿಪಾರು ಪ್ರಕರಣವನ್ನು ಸೌಜನ್ಯ ಪ್ರಕರಣಕ್ಕೆ ಸಂಯೋಜಿಸಲು ಯತ್ನಿಸಿದರು ಹಾಗೂ ಸ್ಥಳೀಯ ದೇವಸ್ಥಾನಕ್ಕೆ ಸಂಬಂಧಿಸಿದ ವ್ಯಕ್ತಿಗಳು ತಮ್ಮನ್ನು ಗುರಿಯಾಗಿಸಿಕೊಂಡಿದ್ದಾರೆ ಎಂದು ವಾದಿಸಿದರು. ಆದರೆ ಸುಪ್ರೀಂ ಕೋರ್ಟ್ ಈ ವಾದವನ್ನು ತಿರಸ್ಕರಿಸಿತು. ಅಸಂಬಂಧಿತ ವಿಷಯಗಳನ್ನು ಬಳಸಿ ಸಾರ್ವಜನಿಕ ಭಾವನೆಗಳನ್ನು ಕೆರಳಿಸುವುದು ಅಥವಾ ದುರ್ಬಳಕೆ ಮಾಡಿಕೊಳ್ಳುವುದು ಸರಿ



ಯಲ್ಲ ಎಂದು ತರಾಟೆಗೆ ತೆಗೆದುಕೊಂಡಿತು.

ಅರ್ಜಿದಾರರಿಗೆ ಯಾವುದೇ ರೀತಿಯ ಪರಿಹಾರ ನೀಡಲು ನಿರಾಕರಿಸಿದ ಸುಪ್ರೀಂ ಕೋರ್ಟ್, ಅರ್ಜಿಯನ್ನು ವಜಾಗೊಳಿಸಿತು. ಇದೇ ವೇಳೆ ಊಹಾತ್ಮಕ ವಾದಗಳನ್ನು ಮಂಡಿಸುವುದರ ವಿರುದ್ಧ ವಕೀಲರಿಗೆ ಕಟ್ಟುನಿಟ್ಟಿನ ಎಚ್ಚರಿಕೆ ನೀಡಿದ ನ್ಯಾಯಪೀಠ, ನ್ಯಾಯಾಲಯದಲ್ಲಿ ಜೂಜಾಟವಾಡಬೇಡಿ. ಅಂತಹ ಅವಕಾಶಗಳಿಗೆ ಆಸ್ಪದವಿಲ್ಲ ಎಂದು ತೀವ್ರ ಆಕ್ಷೇಪ ವ್ಯಕ್ತಪಡಿಸಿತು.

## ಬ್ರಹ್ಮಚಾರಿಗಳಿಗೇಕೆ ಮಕ್ಕಳ ಚಿಂತೆ!?

**ಆರ್‌ಎಸ್‌ಎಸ್ ವಿಚಾರಕ್ಕೆ ಸಚಿವ ಪ್ರಿಯಾಂಕ್ ಲೇವಡಿ**

**ಬೆಂಗಳೂರು:** ಆರ್‌ಎಸ್‌ಎಸ್ ನವರು ಬ್ರಹ್ಮಚಾರಿಗಳಲ್ಲವೇ? ಆದರೂ ಅವರಿಗೆ ಮಕ್ಕಳನ್ನು ಹುಟ್ಟಿಸುವ ಬಗ್ಗೆ ಚಿಂತೆ ಏಕೆ ಎಂದು ಗೃಹ ಸಚಿವ ಪ್ರಿಯಾಂಕ್ ಖರ್ಗೆ ಲೇವಡಿ ಮಾಡಿದರು.

ಬೆಂಗಳೂರಿನಲ್ಲಿ ಸುದ್ದಿಗಾರರ ಜೊತೆ ಮಾತನಾಡಿದ ಅವರು, ಜನಸಂಖ್ಯೆ ನಿಯಂತ್ರಣದ ಬಗ್ಗೆ ಆರ್‌ಎಸ್‌ಎಸ್ ಅವರು ಮಾತಾಡ್ತಾರೆ. ಅವರು ಬ್ರಹ್ಮಚಾರಿಗಳು ಅಲ್ಲವೇ? ಆದರೂ 3–4 ಮಕ್ಕಳು ಹುಟ್ಟಿಸಿ ಧರ್ಮ ರಕ್ಷಣೆ, ಗೋರಕ್ಷಣೆಗೆ ಬಿಡಿ ಅಂತ ಹೇಳ್ತಾರೆ. ಆರ್‌ಎಸ್‌ಎಸ್ ನೀತಿಯಲ್ಲಿ ಸಾಕಷ್ಟು ಗೊಂದಲ ಇದೆ. ಅವರಿಗೆ ಅವರ ಸಂಸ್ಥೆ ಏನು ಮಾಡ್ತಿದೆ? ಅವರಿಗೆ ಸಂವಿಧಾನ ಏನಿದೆ ಅಂತ ಗೊತ್ತೇ ಇಲ್ಲ ಎಂದು ಟೀಕಿಸಿದರು.

ನಮ್ಮ ದೇಶದಲ್ಲಿ ವಿದೇಶಾಂಗ ಸಚಿವರು ಇದ್ದಾರೋ ಇಲ್ಲವೋ? ಅಸಲು ನಮಗೊಂದು ವಿದೇಶಾಂಗ ನೀತಿ ಇದೆಯೋ ಇಲ್ಲವೋ ಎಂಬ ಅನುಮಾನ ಕಾಡುತ್ತಿದೆ. ಕಳೆದ ಬಾರಿ ಅಮೆರಿಕ–ಇರಾನ್ ಸಂಘರ್ಷದ ವೇಳೆ ಭಾರತ ಎಷ್ಟು ತೊಂದರೆ ಅನುಭವಿಸಿತು ಎಂಬುದು ಎಲ್ಲರಿಗೂ ಗೊತ್ತಿದೆ. ಜಾಗತಿಕ ಮಾರುಕಟ್ಟೆಯಲ್ಲಿ ಕಚ್ಚಾ ತೈಲ ಬೆಲೆ



100 ಡಾಲರ್ ಇದ್ದಾಗ ಇಲ್ಲಿ ಇಂಧನ ಬೆಲೆ ಏರಿಸಿದವರು, ಅದು 40 ಡಾಲರ್‌ಗೆ ಕುಸಿದಾಗ ಬೆಲೆ ಇಳಿಸಲಿಲ್ಲ ಎಂದು ಆಕ್ರೋಶ ಹೊರಹಾಕಿದರು.

ಪಾಕಿಸ್ತಾನ ಜೊತೆ ಸಂಬಂಧ ಬೆಳೆಸಬೇಕು ಎಂಬುದು ಆರ್‌ಎಸ್‌ಎಸ್‌ನ ಅಭಿಪ್ರಾಯ. ಹಾಗದರೆ ವಿದೇಶಾಂಗ ನೀತಿಯನ್ನು ನರೇಂದ್ರ ಮೋದಿ ಆರ್‌ಎಸ್‌ಎಸ್‌ಗೆ ಕೊಟ್ಟಿದ್ದಾರೆಯೇ? ಎಂದು ಗೃಹ ಸಚಿವ ಪ್ರಿಯಾಂಕ್ ಖರ್ಗೆ ಪ್ರಶ್ನಿಸಿದರು.

ರಾಮಮಂದಿರ ದೇಣಿಗೆ ಅಕ್ರಮದಲ್ಲಿ ಆರ್‌ಎಸ್‌ಎಸ್‌ನಿಂದ ವಿಷಾದ ವ್ಯಕ್ತಪಡಿಸಿದೆ. ಹಾಗಾದರೆ ಅವರು ತಪ್ಪು ಒಪ್ಪಿಕೊಂಡು ಕ್ಷಮೆ ಕೇಳಬೇಕು ಎಂದು ಆಗ್ರಹಿಸಿದರು.

## ದೇಗುಲಗಳಿಗೆ ಕ್ಯಾಮೆರಾ ಕಣ್ಗಾವಲು

**ಆಸ್ತಿ ರಕ್ಷಣೆಗೆ ಎಸ್‌ಒಪಿ ಜಾರಿ ಮಾಡಿ ಸರ್ಕಾರದ ಆದೇಶ**

**ಬೆಂಗಳೂರು:** ಮುಜರಾಯಿ ವ್ಯಾಪ್ತಿಯ ದೇವಾಲಯಗಳಲ್ಲಿ ದೇಣಿಗೆಗಳ ಭದ್ರತೆ, ಪಾರದರ್ಶಕತೆ ಮತ್ತು ಹೊಣೆಗಾರಿಕೆ ಖಚಿತಪಡಿಸಿಕೊಳ್ಳಲು ರಾಜ್ಯ ಸರ್ಕಾರ ನಿಯಮಗಳನ್ನು (ಎಸ್‌ಒಪಿ) ಪ್ರಕಟಿಸಿದೆ.

ಸಿಸಿಟಿವಿ ಅಥವಾ ವೆಬ್ ಕ್ಯಾಮೆರಾಗಳನ್ನು ಅಳವಡಿಸುವುದನ್ನು ಕಡ್ಡಾಯಗೊಳಿಸಲಾಗಿದೆ. ದೇಣಿಗೆಗಳಿಗಾಗಿ ಕ್ಯೂಆರ್ ಕೋಡ್ ಮೂಲಕ ಡಿಜಿಟಲ್ ಪಾವತಿ ವ್ಯವಸ್ಥೆಗಳನ್ನು ಉತ್ತೇಜಿಸುತ್ತದೆ.

ರಾಜ್ಯದ ಧಾರ್ಮಿಕ ದತ್ತಿ ಇಲಾಖೆಯ ವ್ಯಾಪ್ತಿಯಲ್ಲಿರುವ ದೇವಾಲಯಗಳಲ್ಲಿ ಹುಂಡಿ ಎಣಿಕೆ ಮತ್ತು ಖಾತೆಗಳ ನಿರ್ವಹಣೆಯ ಸಮಯದಲ್ಲಿ ನಗದು ಮತ್ತು ಬೆಲೆಬಾಳುವ ವಸ್ತುಗಳ ಕಳ್ಳತನ ಮತ್ತು ದುರುಪಯೋಗದ ಪ್ರಕರಣಗಳನ್ನು ಸಹ ಗಮನಿಸಲಾಗಿದೆ ಎಂದು ಅದು ಹೇಳಿದೆ.



ರಾಜ್ಯದ ದೇವಾಲಯಗಳಿಗೆ ಸೇರಿದ ಚರ ಆಸ್ತಿಗಳ ರಕ್ಷಣೆಗೆ ತಡೆಗಟ್ಟುವ ಕ್ರಮಗಳನ್ನು ತೆಗೆದುಕೊಳ್ಳುವ ಉದ್ದೇಶದಿಂದ, ಸಂಬಂಧಪಟ್ಟ ಅಧಿಕಾರಿಗಳು ಮುನ್ನೆಚ್ಚರಿಕೆ ಕ್ರಮಗಳನ್ನು ಜಾರಿಗೊಳಿಸಬೇಕು. ದೇವಾಲಯದ ಆವರಣದಲ್ಲಿ ಸೂಕ್ತ ಸ್ಥಳಗಳನ್ನು ಗುರುತಿಸುವುದು, ಸಾರ್ವಜನಿಕರಿಗೆ ಸ್ಪಷ್ಟವಾಗಿ ಗೋಚರಿಸುವ ಸ್ಥಳಗಳಲ್ಲಿ ಹುಂಡಿಗಳನ್ನು ಪುಟ 2ಕ್ಕೆ

### ಧಾರ್ಮಿಕ ಪ್ರವಾಸೋದ್ಯಮ ಅಭಿವೃದ್ಧಿ: ಕ್ರಮಕ್ಕೆ ಸೂಚನೆ

**ಬೆಂಗಳೂರು:** ರಾಜ್ಯದ ಮುಜರಾಯಿ ದೇವಾಲಯಗಳನ್ನು ಪ್ರವಾಸಿ ತಾಣಗಳನ್ನಾಗಿ ಆಕರ್ಷಿಸಲು ಹಾಗೂ ಧಾರ್ಮಿಕ ಪ್ರವಾಸೋದ್ಯಮಕ್ಕೆ ಉತ್ತೇಜನ ನೀಡಲು ಕಂದಾಯ ಇಲಾಖೆ ಮಹತ್ವದ ಹೆಜ್ಜೆ ಇಟ್ಟಿದೆ.

ಜಿಲ್ಲಾವಾರು ಮತ್ತು ಅಂತರ್ ಜಿಲ್ಲಾವಾರು ಪ್ರವಾಸಿ ಸರ್ಕ್ಯೂಟ್‌ಗಳನ್ನು ರೂಪಿಸಿ ದೇವಸ್ಥಾನಗಳಲ್ಲಿ ಮೂಲಸೌಕರ್ಯಗಳನ್ನು ವೃದ್ಧಿಸಲು ಸರ್ಕಾರ ಆದೇಶ ಹೊರಡಿಸಿದೆ.

ಕಂದಾಯ ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿ ರಾಜೇಂದರ್ ಪುಟ 2ಕ್ಕೆ

## ಮೊದಲ ಪುಟದಿಂದ

### ಕೆಪಿಎಸ್‌ಸಿ ಅಧ್ಯಕ್ಷಗೆ 'ಗೇಟ್‌ಪಾಸ್'

ಅವರು ಸಲ್ಲಿಸಿದ್ದ 2020ರ ಮಾರ್ಚ್ 4ರ ಜಾತಿ ಮತ್ತು ಆದಾಯ ಪ್ರಮಾಣಪತ್ರದಲ್ಲಿ ಕುಟುಂಬದ ವಾರ್ಷಿಕ ಆದಾಯ ಕೇವಲ 40 ಸಾವಿರ ಎಂದು ಉಲ್ಲೇಖಿಸಿರುವುದು ಅಧಿಕಾರಿಗಳ ಗಮನಕ್ಕೆ ಬಂದಿದೆ.

ಶಿವಶಂಕರಪ್ಪ ಸಾಹುಕಾರ್ ಅವರು 2019 ರಿಂದಲೇ ಆಯೋಗದ ಸದಸ್ಯರಾಗಿ ಕಾರ್ಯನಿರ್ವಹಿಸುತ್ತಿದ್ದರು. ಆಯೋಗದಿಂದ ವೇತನ ಪಡೆಯುತ್ತಿದ್ದಾರೆ. ಹೀಗಿರುವಾಗ ಅವರ ಆದಾಯ ಕೇವಲ 40 ಸಾವಿರ ಎನ್ನುವುದು ಶುದ್ಧ ಸುಳ್ಳು ಎಂಬುದು ಈ ಮೂಲಕ ಪತ್ತೆ ಆಗಿತ್ತು ಹೀಗಾಗಿ ಕೆಪಿಎಸ್ ಸಿ ಸಮಗ್ರತೆ ಮತ್ತು ವಿಶ್ವಾಸಾರ್ಹತೆಯನ್ನು ರಕ್ಷಿಸುವ ಜೊತೆಗೆ ನ್ಯಾಯಯುತ, ನಿಷ್ಪಕ್ಷಪಾತ ಮತ್ತು ಪ್ರಭಾವ ರಹಿತ ತನಿಖೆಯನ್ನು ಖಚಿತಪಡಿಸಲು ರಾಷ್ಟ್ರಪತಿಗಳಿಂದ ಮುಂದಿನ ಆದೇಶ ಬರುವವರೆಗೆ ರಾಜ್ಯಪಾಲರು ಶಿವಶಂಕರಪ್ಪ ಸಾಹುಕಾರ ಅವರನ್ನು ಕರ್ನಾಟಕ ಲೋಕ ಸೇವಾ ಆಯೋಗದ ಅಧ್ಯಕ್ಷ ಸ್ಥಾನದಿಂದ ತಕ್ಷಣದಿಂದ ಜಾರಿಗೆ ಬರುವಂತೆ ಅಮಾನತುಗೊಳಿಸಲಾಗಿದೆ ಎಂದು ಆದೇಶಿಸಿದ್ದಾರೆ.ಮುಂದಿನ ಆದೇಶದ ವರಗೆ ಆಯೋಗದ ಹಿರಿಯ ಸದಸ್ಯರು ಆಯೋಗದ ಹಂಗಾಮಿ ಅಧ್ಯಕ್ಷರಾಗಿ ಕಾರ್ಯನಿರ್ವಹಿಸುವಂತೆ ರಾಜ್ಯಪಾಲರು ಆದೇಶಿಸಿದ್ದಾರೆ ಎಂದು ರಾಜ್ಯಪಾಲರ ವಿಶೇಷ ಕಾರ್ಯದರ್ಶಿ ತಿಳಿಸಿದ್ದಾರೆ.

### ಕುಡಿಯುವ ನೀರಿಗೆ ಆದ್ಯತೆ

ಮಾತನಾಡಿದ ಅವರು, ಇಡೀ ರಾಜ್ಯದಲ್ಲಿ ಮಳೆ ಕೊರತೆಯಾಗಿದೆ. ಎಲ್ಲಾ ಕಡೆ ಬರ ಪರಿಸ್ಥಿತಿ ಆವರಿಸಿದೆ. ಈಗಾಗಲೇ ಸಭೆಗಳನ್ನು ಮಾಡಿ ನೀರಿನ ಸಮಸ್ಯೆ ಆಲಿಸಲಾಗಿದೆ. ಬರ ನಿರ್ವಹಣೆಗೆ ಏನು ಕ್ರಮ ಕೈಗೊಳ್ಳಬೇಕು ಎಂಬುದನ್ನು ತೀರ್ಮಾನಿಸಿದ್ದೇವೆ ಎಂದರು. ಸಚಿವ ಸಂಪುಟ ವಿಸ್ತರಣೆ ಯಾವಾಗ ಎಂಬುದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಹಾಗೂ ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಸೇರಿದಂತೆ ಕಾಂಗ್ರೆಸ್ ನಾಯಕರು ತೀರ್ಮಾನಿಸುತ್ತಾರೆ. ಹೈಕಮಾಂಡ್ ಯಾವಾಗ ಕರೆಯುತ್ತಾರೋ ಆವಾಗ ರಾಜ್ಯ ನಾಯಕರು ಹೋಗಿ ತೀರ್ಮಾನ ಮಾಡ್ತಾರೆ ಎಂದು ಯತೀಂದ್ರ ಹೇಳಿದರು.

### ವಚನಾನಂದ ಶ್ರೀಗೆ ಜಾಮೀನು

ಬಾಲಕನ ತಾಯಿ ಕರ್ನಾಟಕ ಹೈಕೋರ್ಟ್ಗೆ ಅರ್ಜಿ ಸಲ್ಲಿಸಿದ್ದರು. ಜೂ. 25ರಂದು ಅರ್ಜಿ ವಿಚಾರಣೆ ನಡೆಸಿದ್ದ ಹೈಕೋರ್ಟ್ ವಚನಾನಂದ ಸ್ವಾಮೀಜಿಯ ನಿರೀಕ್ಷಣಾ ಜಾಮೀನನ್ನು ರದ್ದುಪಡಿಸಿತ್ತು. ರೆಗ್ಯುಲರ್ ಜಾಮೀನು ಪಡೆಯಲು ಮೂರು ವಾರಗಳ ಕಾಲಾವಕಾಶ ನೀಡಿತ್ತು. ಅದರಂತೆ ವಚನಾನಂದ ಸ್ವಾಮೀಜಿ ದಾವಣಗೆರೆ ಜಿಲ್ಲಾ ಪೋಕ್ಸೋ ವಿಶೇಷ ನ್ಯಾಯಾಲಯಕ್ಕೆ ಜೂ.27ರಂದು ಅರ್ಜಿ ಸಲ್ಲಿಸಿದ್ದರು. ಈ ಅರ್ಜಿಯನ್ನು ವಿಚಾರಣೆ ನಡೆಸಿದ ನ್ಯಾಯಾಲಯ ಜಾಮೀನು ಮಂಜೂರು ಮಾಡಿದೆ.

### ನೂರಾರು ಮರಗಳಿಗೆ ಕೊಡಲಿ

ವಿಸ್ತೀರ್ಣ ಹೊಂದಿರುವ ಬೃಹತ್ ಕೆರೆ ಇದೆ. ಮಳೆಯಾದಾಗಲೆಲ್ಲಾ ಸಮೃದ್ಧವಾಗಿ ನೀರು ತುಂಬಿಕೊಳ್ಳುತ್ತಿದ್ದ ಈ ಕೆರೆ ಹಲವಾರು ಅಪರೂಪದ ಪಕ್ಷಿ ಪ್ರಬೇಧಗಳ ಆವಾಸಸ್ಥಾನವಾಗಿತ್ತು. ಈಗ ಕೆರೆಯನ್ನು ಮುಚ್ಚುವುದರಿಂದ ಮುಂದೆ ಮಳೆಯ ನೀರು ನಗರ ಪ್ರದೇಶಕ್ಕೆ ನುಗ್ಗುವ ಆತಂಕವಿದೆ. ಆದರೆ ಈಗ ಕಂಬಳದ ಮೈದಾನ ನಿರ್ಮಿಸುವ ಸಲುವಾಗಿ ಈ ಜೀವಂತ ಕೆರೆಯನ್ನು ಮಣ್ಣು ಹಾಕಿ ಸಂಪೂರ್ಣವಾಗಿ ಮುಚ್ಚಲಾಗುತ್ತಿದೆ ಎಂದು ಪರಿಸರ ಪ್ರೇಮಿಗಳು ಆತಂಕ ವ್ಯಕ್ತಪಡಿಸಿದ್ದಾರೆ.

### ಅಭಿವೃದ್ಧಿ: ಕ್ರಮಕ್ಕೆ ಸೂಚನೆ

ಕುಮಾರ್ ಕಟಾರಿಯಾ ಅಧಿಕೃತ ಸುತ್ತೋಲೆ ಹೊರಡಿಸಿದ್ದಾರೆ. ಜಿಲ್ಲಾಧಿಕಾರಿಗಳು ಹಾಗೂ ಪ್ರಾದೇಶಿಕ ಆಯುಕ್ತರು ಈ ಪ್ರಗತಿಯನ್ನು ನಿಯಮಿತವಾಗಿ ಪರಿಶೀಲಿಸುವಂತೆ ಸೂಚಿಸಿದ್ದಾರೆ. ಪ್ರವಾಸೋದ್ಯಮ ಇಲಾಖೆ ಸಹಯೋಗದೊಂದಿಗೆ ಧಾರ್ಮಿಕ ದತ್ತಿ ಇಲಾಖೆ ದೇವಾಲಯಗಲ್ಲಿ ಪ್ರವಾಸೋದ್ಯಮಕ್ಕೆ ಉತ್ತೇಜನ ನೀಡಲು ದೇವಾಲಯಗಳನ್ನು ಅಭಿವೃದ್ಧಿಪಡಿಸುವ ಈ ಯೋಜನೆಯ ಪ್ರಗತಿಯನ್ನು ಎಲ್ಲಾ ಜಿಲ್ಲಾಧಿಕಾರಿ ಹಾಗೂ ಪ್ರಾದೇಶಿಕ ಆಯುಕ್ತರು ಪರಿಶೀಲಿಸಬೇಕೆಂದು ಸೂಚಿಸಿದೆ.

### 3–4 ದಿನದಲ್ಲಿ 'ದೆಹಲಿ ಯಾತ್ರೆ'

ಜಾತಿವಾರು ಲೆಕ್ಕಾಚಾರದಲ್ಲಿ ಸಚಿವ ಸ್ಥಾನ ನೀಡುವಂತೆ ಒತ್ತಡ ತಂತ್ರ ಅನುಸರಿಸುತ್ತಿದ್ದಾರೆ. ನಾಯಕತ್ವ ಬದಲಾವಣೆಯ ಸನ್ನಿವೇಶದಲ್ಲಿ ತಮ್ಮ ಪರ ನಿಂತವರು, ಮುಖ್ಯಮಂತ್ರಿ ಸ್ಥಾನ ನೀಡುವಂತೆ ಬಹಿರಂಗವಾಗಿ ಹೇಳಿಕೆ ಕೊಟ್ಟವರು, ದೆಹಲಿಗೆ ತೆರಳಿ ತಮ್ಮ ಪರ ಹೈಕಮಾಂಡ್ ಮೇಲೆ ಒತ್ತಡ ಹಾಕಿದ ಕೆಲವರಿಗಾದರೂ ಸಂಪುಟದಲ್ಲಿ ಅವಕಾಶ ನೀಡಲು ಶಿವಕುಮಾರ್ ಕಸರತ್ತು ನಡೆಸಿದ್ದಾರೆ.

ಮತ್ತೊಂದೆಡೆ ಸಿದ್ದರಾಮಯ್ಯ ಬೆಂಬಲಿಗ ಶಾಸಕರು ತಮ್ಮನ್ನು ಸಂಪುಟಕ್ಕೆ ತೆಗೆದಕೊಳ್ಳಲು ಶಿಫಾರಸು ಮಾಡುವಂತೆ ಅವರ ಮೇಲೆ ನಿರಂತರ ಒತ್ತಡ ಹಾಕುತ್ತಿದ್ದಾರೆ. ಸಿದ್ದರಾಮಯ್ಯ ಸಂಪುಟದಲ್ಲಿ ಸಚಿವರಾಗಿದ್ದು, ಈಗ ಅವಕಾಶ ವಂಚಿತರಾದ ಮಾಜಿಗಳು, ಆಪ್ತ ಶಾಸಕರ ದಂಡು ನಿತ್ಯವೂ ಅವರನ್ನು ಭೇಟಿ ಮಾಡುತ್ತಿದ್ದಾರೆ.

### ಕಂಬಳ ಸಿಎಂ ತೀರ್ಮಾನ

ಕ್ರೀಡೆ, ಆಚರಣೆಗಳನ್ನು ಪರಿಚಯಿಸುವುದರಿಂದ ಒಳ್ಳೆಯದೇ ಆಗುತ್ತದೆ. ಅದನ್ನು ಎಲ್ಲರಿಗೂ ತೋರಿಸುವುದರಲ್ಲಿ ತಪ್ಪೇನಿದೆ? ಎಂದು ಸಚಿವ ಯತೀಂದ್ರ ಸಿದ್ದರಾಮಯ್ಯ ಪ್ರಶ್ನಿಸಿದ್ದಾರೆ.

### ಕಂಬಳಕ್ಕೆ ಭರ್ಜರಿ ಸಿದ್ಧತೆ

ವಿರೋಧಕ್ಕೆ ಕಾರಣವಾಗಿದೆ. ಜನರಿಗೆ ಕುಡಿಯುವ ನೀರಿಗೆ ಬರ ಬಂದಿರುವ ಸಂದರ್ಭದಲ್ಲಿ 10 ಕೋಟಿಗೂ ಹೆಚ್ಚು ಹಣ ವೆಚ್ಚ ಮಾಡಿ ಕಂಬಳ ನಡೆಸಬೇಕಾಗಿರುವ ಅಗತ್ಯವೇನು ಎಂದು ಸಾರ್ವಜನಿಕರು ಪ್ರಶ್ನಿಸಿದ್ದಾರೆ. ಕಂಬಳ ಪ್ರದರ್ಶನಕ್ಕೆ ರಾಜಮನೆತನ, ಜನಪ್ರತಿನಿಧಿಗಳು ಹಾಗೂ ಪರಿಸರವಾದಿಗಳಿಂದ ಎಷ್ಟೇ ತೀವ್ರ ವಿರೋಧ ವ್ಯಕ್ತವಾಗುತ್ತಿದ್ದರೂ, ರಾಜ್ಯ ಸರ್ಕಾರ ಯಾವುದಕ್ಕೂ ತಲೆಕೆಡಿಸಿಕೊಳ್ಳದೇ ಕಂಬಳ ನಡೆಸಲು ಸಿದ್ಧತೆ ಕೈಗೊಂಡಿದೆ.

### ಗಡಿಪಾರು ಪ್ರಶ್ನಿಸಿದ್ದ ಅರ್ಜಿ ವಜಾ

ಅಪರಾಧ ಹಿನ್ನೆಲೆಯುಳ್ಳ ಕಾರಣಕ್ಕೆ ಮತ್ತು ನಿರಂತರವಾಗಿ ಸಮಾಜದ ಸ್ವಾಸ್ಥ್ಯ ಕೆಡಿಸಿದ ಆರೋಪದ ಮೇಲೆ ಮಹೇಶ್ ಶೆಟ್ಟಿ ತಿಮರೋಡಿಯನ್ನು ದಕ್ಷಿಣ ಕನ್ನಡ ಜಿಲ್ಲೆಯಿಂದ ರಾಯಚೂರು ಜಿಲ್ಲೆಯ ಮಾನ್ವಿ ತಾಲೂಕಿಗೆ ಗಡಿಪಾರು ಮಾಡಿ ಪುತ್ತೂರು ಉಪ ವಿಭಾಗಾಧಿಕಾರಿ ಆದೇಶ ಹೊರಡಿಸಿದ್ದರು.

## ರಾಷ್ಟ್ರ ಮಟ್ಟದ ಪ್ರಶಸ್ತಿ ಪ್ರದಾನ



ಚಾಮರಾಜನಗರ, ರಾಯಚೂರು ಬೆಳಕು ಸಾಹಿತ್ಯ, ಶೈಕ್ಷಣಿಕ, ಸಾಂಸ್ಕೃತಿಕ ಟ್ರಸ್ಟ್ ವತಿಯಿಂದ ಕೊಡಲ್ಪಡುವ ರಾಷ್ಟ್ರಮಟ್ಟದ ಪ್ರಶಸ್ತಿಯನ್ನು ಬಂಡಿಗೆರೆ ಗ್ರಾಮದ ಜಿ.ಪಂ.ಮಾಜಿ ಅಧ್ಯಕ್ಷೆ ಕಾವೇರಿ ಶಿವಕುಮಾರ್ ಅವರಿಗೆ ಕಿತ್ತೂರು ರಾಣಿ ಚೆನ್ನಮ್ಮ ಪ್ರಶಸ್ತಿ, ಗುಂಡ್ಲುಪೇಟೆ ತಾಲೂಕಿನ ತೊಂಡವಾಡಿಯ ಡಾ. ಪುಟ್ಟರಾಜು ಅವರಿಗೆ ರಾಷ್ಟ ಮಟ್ಟದ ಶಿಕ್ಷಕ ರತ್ನ ಪ್ರಶಸ್ತಿ, ಕೊಳ್ಳೇಗಾಲದ ಲೋಕೇಶ್ ಅವರಿಗೆ ರಾಷ್ಟ ಮಟ್ಟದ ಕಾಯಕ ಕಣ್ಮಣಿ ಪ್ರಶಸ್ತಿ, ಯಳಂದೂರು ತಾಲೂಕಿನ ಗಣಿಗನೂರು ಡಿ. ಸುರೇಶ್ ಗೆ ರಾಷ್ಟ ಮಟ್ಟದ ಜಾನಪದ ಕಣ್ಮಣಿ ಪ್ರಶಸ್ತಿ, ಗುಂಡ್ಲುಪೇಟೆ ತಾಲೂಕಿನ ಕರಕಲಮಾದಳ್ಳಿ ಬಸವರಾಜ್ ತಂಬೂರಿ ಕಲಾವಿದರಿಗೆ ರಾಷ್ಟ ಮಟ್ಟದ ಜಾನಪದ ಕೋಗಿಲೆ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಹುಬ್ಬಳ್ಳಿ ಜಿಲ್ಲೆಯಲ್ಲಿ ರಾಯಚೂರು ಬೆಳಕು ಸಾಹಿತ್ಯ, ಶೈಕ್ಷಣಿಕ, ಸಾಂಸ್ಕೃತಿಕ ಟ್ರಸ್ಟ್ ವತಿಯಿಂದ ನಡೆದ ಸಮಾರಂಭದಲ್ಲಿ ಬೆಳಕು ಸಂಸ್ಥೆಯ ರಾಜ್ಯ ಅಧ್ಯಕ್ಷ ರಾದ ಅಣ್ಣಪ್ಪ ಮೇಟಿ ಗೌಡ ಹಾಗೂ ಗಣ್ಯರು ಪ್ರಶಸ್ತಿ ಪ್ರದಾನ ಮಾಡಿದರು. ರಾಯಚೂರು ಬೆಳಕು ಸಾಹಿತ್ಯ, ಶೈಕ್ಷಣಿಕ, ಸಾಂಸ್ಕೃತಿಕ ಟ್ರಸ್ಟ್ ಅಧ್ಯಕ್ಷ ಅಣ್ಣಪ್ಪ ಮೇಟಿ ಗೌಡರು, ಪ್ರಶಸ್ತಿ ವಿಜೇತರಿಗೆಚಾಮರಾಜನಗರ ಬೆಳಕು ಸಂಸ್ಥೆಯ ಜಿಲ್ಲಾ ಅಧ್ಯಕ್ಷ ಜ. ಸುರೇಶ್ ನಾಗ್ ಹರದನಹಳ್ಳಿ ಅಭಿನಂದಿಸಿದ್ದಾರೆ.

## ಸವಿತಾಗೆ ಅಭಿನಂದಿಸಿದ ಕೈಗಾರಿಕಾ ಸಂಸ್ಥೆ

ಮೈಸೂರು: ಮೈಸೂರು ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆಯ ಪದಾಧಿಕಾರಿಗಳು ಮಹಾನಗರಪಾಲಿಕೆ ನೂತನ ಆಯುಕ್ತರಾದ ಎಂ.ಕೆ.ಸವಿತಾರನ್ನು ಸನ್ಮಾನಿಸಿದರು.

ಈ ಸಂದರ್ಭದಲ್ಲಿ ಮೈಸೂರು ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆ ಅಧ್ಯಕ್ಷ ಡಾ.ಕೆ.ಬಿ.ಲಿಂಗರಾಜು ಮಾತನಾಡಿ, ನಗರದ ಮೂಲ ಸೌಕರ್ಯ ಅಭಿವೃದ್ಧಿ, ಸ್ವಚ್ಛತೆ, ಸಂಚಾರ ವ್ಯವಸ್ಥೆ, ದಸರಾ ನಾಡಹಬ್ಬದ ಆಚರಣೆ, ವ್ಯಾಪಾರ, ಉದ್ಯಮಗಳಿಗೆ ಅನುಕೂಲಕರ ಆಡಳಿತ ಒದಗಿಸುವ ಮಹಾನಗರಪಾಲಿಕೆಯ ಎಲ್ಲಾ ನಿರ್ಧಾರಗಳಿಗೆ ತಮ್ಮ ಸಂಸ್ಥೆಯ ಸಂಪೂರ್ಣ ಸಹಕಾರವನ್ನು ನೀಡಲು ಬಹಳ ಸಂತೋಷಕರವಾಗಿದೆ ಎಂದು ತಿಳಿಸಿದರು.

ಉಪಾಧ್ಯಕ್ಷ ಆರ್.ಆನಂದ್, ಖಜಾಂಚಿ ಆರ್. ಅಶೋಕ್, ಗೌರವ ಜಂಟಿ ಕಾರ್ಯದರ್ಶಿ ವಿನೋದ್ ಜೈನ್, ಕಾರ್ಯಕಾರಿ ಸಮಿತಿ ಸದಸ್ಯರಾದ ಶ್ಯಾಮಸುಂದರ್, ಎಂ.ಸಿ.ಬನ್ಸಾಲಿ, ಕೆ.ರಮೇಶ್ ಮತ್ತು ಮಹಿಳಾ ವಿಭಾಗದ ಜಂಟಿ ಕಾರ್ಯದರ್ಶಿ ಶಶಿಕಲ, ಅಶೋಕ್, ಜಯಶ್ರೀ ಸಚ್ಚಿದನಾಂದ ಮೂರ್ತಿ ಇತರರು ಉಪಸ್ಥಿತರಿದ್ದರು.



# ಕೆರೆ ಒತ್ತುವರಿ ತೆರವುಗೊಳಿಸದೆ ಮಣ್ಣು ಲೂಟಿ

## ಹಂಪಾಪುರ: ಅಧಿಕಾರಿಗಳ ಶಾಮೀಲು, ರೈತರ ಆರೋಪ । ಮಣ್ಣು ಮಾಫಿಯಾದ ನಂಟು

ಕೊಳ್ಳೇಗಾಲ: ತಾಲ್ಲೂಕಿನ ಹಂಪಾಪುರ ಕೆರೆಯ ಏರಿಯನ್ನು (ಬಂಡು) ಪಕ್ಕದ ಜಮೀನಿನವರು ಅಕ್ರಮವಾಗಿ ಒತ್ತುವರಿ ಮಾಡಿಕೊಂಡು ರಾಜಾರೋಷವಾಗಿ ತೆಂಗಿನ ತೋಟ ನಿರ್ಮಿಸಿಕೊಂಡಿದ್ದರೂ, ಅದನ್ನು ತೆರವುಗೊಳಿಸಲು ಹಿಂದೇಟು ಹಾಕುತ್ತಿರುವ ನೀರಾವರಿ ಇಲಾಖೆಯ ಅಧಿಕಾರಿಗಳು ಮಣ್ಣು ಲೂಟಿ ಮಾಡುವುದರಲ್ಲಿ ನಿರತರಾಗಿದ್ದಾರೆ ಎಂದು ರೈತರು ಗಂಭೀರ ಆರೋಪ ಮಾಡಿದ್ದಾರೆ.

ತಾಲ್ಲೂಕಿನ ಹಂಪಾಪುರ, ಪಾಳ್ಯ, ತೇರಂಬಳ್ಳಿ, ದೊಡ್ಡ ರಂಗನಾಥ ಹಾಗೂ ಸರಗೂರು ಕೆರೆ ಸೇರಿದಂತೆ ಒಟ್ಟು 6 ಕೆರೆಗಳ ಅಭಿವೃದ್ಧಿಗೆ ಸರ್ಕಾರ 32 ಕೋಟಿ ರೂ. ಅನುದಾನ ಬಿಡುಗಡೆ ಮಾಡಿದೆ. ಕಬಿನಿ ಇಲಾಖೆ ವ್ಯಾಪ್ತಿಗೆ ಒಳಪಡುವ ಈ ಕೆರೆಗಳ ಅಭಿವೃದ್ಧಿ ಕಾಮಗಾರಿಯ ನಿರ್ವಹಣೆಯನ್ನು ಅಮೃತ ಕನ್ಸ್ಟ್ರಕ್ಷನ್ ಸಂಸ್ಥೆಗೆ ನೀಡಲಾಗಿದ್ದು, ಉಸ್ತುವಾರಿಯನ್ನು ಕಬಿನಿ ಇಲಾಖೆಯ ಕಾಮಗೆರೆ ಉಪವಿಭಾಗದ ಸಹಾಯಕ ಕಾರ್ಯಪಾಲಕ ಅಭಿಯಂತರ ರಾಮಕೃಷ್ಣ ಅವರಿಗೆ ವಹಿಸಲಾಗಿದೆ. ಕ್ರಿಯಾಯೋಜನೆಯ ಪ್ರಕಾರ ಹೂಳು ತೆಗೆದು, ಕೆರೆಯ ಏರಿಯನ್ನು ಎತ್ತರಿಸಿ ಸಮತಟ್ಟು ಮಾಡುವುದು ಹಾಗೂ ಉಳಿದ ಮಣ್ಣನ್ನು ರೈತರ ಜಮೀನುಗಳಿಗೆ ಉಚಿತವಾಗಿ ನೀಡುವುದು ಕಾಮಗಾರಿಯ ಉದ್ದೇಶವಾಗಿದೆ. ಆದರೆ ಇಲ್ಲಿ ರೈತರ ಹೆಸರಿನಲ್ಲಿ ಅಧಿಕಾರಿಗಳು ಹಾಗೂ ಮಣ್ಣು ದಂದೆಕೋರರು ಶಾಮೀಲಾಗಿ ಮಣ್ಣು ಲೂಟಿ ಮಾಡುತ್ತಿದ್ದಾರೆ ಎಂದು ಸಾರ್ವಜನಿಕರು ದೂರಿದ್ದಾರೆ.

### ರೈತರ ಬದಲಿಗೆ ವಾಣಿಜ್ಯ ಉದ್ದೇಶಕ್ಕೆ ಕೆರೆ ಮಣ್ಣು ಸಾಗಾಟ

ಉಚಿತವಾಗಿ ರೈತರ ಜಮೀನುಗಳಿಗೆ ಸೇರಬೇಕಾಗಿದ್ದ ಹಂಪಾಪುರ ಕೆರೆಯ ಮಣ್ಣು, ಕಳೆದ ಒಂದೆರಡು ತಿಂಗಳಿನಿಂದ ನಿರಂತರವಾಗಿ ಟಿಪ್ಪರ್‌ಗಳ ಮೂಲಕ ವಾಣಿಜ್ಯ ಉದ್ದೇಶದ ಜಮೀನುಗಳನ್ನು ಸೇರುತ್ತಿದೆ. ಕೃಷಿ ಉದ್ದೇಶಕ್ಕಾಗಿ ಯಾವೊಬ್ಬ ರೈತನ ಜಮೀನಿಗೂ ಮಣ್ಣು ಸಾಗಾಟವಾಗಿಲ್ಲ. ಏಕೆಂದರೆ ಈ ವೇಳೆ ಬಹುತೇಕ ರೈತರು ಮುಂಗಾರು (ಖಾರೀಫ್) ಬೆಳೆ ಬೆಳೆದಿದ್ದಾರೆ. ಇದರ ಲಾಭ ಪಡೆದ ಅಧಿಕಾರಿಗಳು ಮಣ್ಣು ಮಾಫಿಯಾದವರೊಂದಿಗೆ ಸೇರಿ, ಪಟ್ಟಣ ಹಾಗೂ ಸುತ್ತಮುತ್ತಲಿನ ಖಾಲಿ ನಿವೇಶನಗಳು ಮತ್ತು ನೂತನವಾಗಿ ನಿರ್ಮಾಣವಾಗಿರುವ ಬೈಪಾಸ್ ಹೆದ್ದಾರಿಯ ಬದಿಗಳಲ್ಲಿರುವ ಜಮೀನುಗಳಿಗೆ ಯಥೇಚ್ಛವಾಗಿ ಮಣ್ಣನ್ನು ಸಾಗಿಸುತ್ತಿದ್ದಾರೆ. ರೈತರ ಜಮೀನುಗಳಿಗೆ ಕೇವಲ ಅರ್ಧ ಅಥವಾ ಒಂದು ಅಡಿ ಮಣ್ಣು ಹಾಕಬೇಕಿದ್ದರೆ, ವಾಣಿಜ್ಯ ಉದ್ದೇಶದ ಜಮೀನುಗಳಿಗೆ ಬರೋಬ್ಬರಿ 4 ರಿಂದ 5 ಅಡಿಗಳವರೆಗೆ ಮಣ್ಣು ಸುರಿದು ಎತ್ತರಿಸಲಾಗುತ್ತಿದೆ. ಪ್ರತಿದಿನ ಸುಮಾರು 10 ರಿಂದ 15 ದೊಡ್ಡ ಟಿಪ್ಪರ್‌ಗಳು ಹಾಗೂ ಟ್ರ್ಯಾಕ್ಟರ್‌ಗಳ ಮೂಲಕ ಲಕ್ಷಾಂತರ ಲೋಡ್ ಮಣ್ಣು ಲೂಟಿಯಾಗುತ್ತಿದ್ದು, ಹಂಪಾಪುರ ಕೆರೆಯು ಹೆದ್ದಾರಿಗೆ ಅಂಟಿಕೊಂಡಿರುವುದರಿಂದ ಸಾಗಾಟ ಮತ್ತಷ್ಟು ಸುಲಭವಾಗಿದೆ. ಇದು "ಕುರಿ ಕಾಯಲು ತೋಳವನ್ನು ನೇಮಿಸಿದಂತಾಗಿದೆ" ಎಂದು ರೈತರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

### ಉಪವಿಭಾಗದ ನಿಯೋಜನೆಯಲ್ಲಿಯೂ ಲೋಪ ಮತ್ತು ಹಿಂದಿನ ಅಕ್ರಮ

ಒಟ್ಟು 9 ಕೆರೆಗಳ ಅಭಿವೃದ್ಧಿಗೆ 42 ಕೋಟಿ ರೂ. ಅನುದಾನ ಬಿಡುಗಡೆಯಾಗಿತ್ತು. ಈ ಪೈಕಿ 10 ಕೋಟಿ ರೂ.ಗಳನ್ನು ಸಣ್ಣ ನೀರಾವರಿ ಇಲಾಖೆಯ ಮೂಲಕ ಚಿಕ್ಕರಂಗನಾಥ, ಕೊಂಗಳಗೆರೆ ಹಾಗೂ ತಟ್ಟೆಕೆರೆಗಳ ಅಭಿವೃದ್ಧಿಗೆ ಮೀಸಲಿಡಲಾಗಿತ್ತು. ಆದರೆ, 3 ಕೋಟಿ ರೂ. ಬಳಕೆಯಾಗುವಷ್ಟರಲ್ಲಿ ಕಾಮಗಾರಿಯಲ್ಲಿ ಅಕ್ರಮ ನಡೆದಿರುವುದು ಸಾಬೀತಾಗಿ ಪ್ರಕರಣವನ್ನು ಲೋಕಾಯುಕ್ತಕ್ಕೆ ವಹಿಸಿ ಕಾಮಗಾರಿ ಸ್ಥಗಿತಗೊಳಿಸಲಾಗಿದೆ. ಉಳಿದ 32 ಕೋಟಿ ರೂ.ಗಳಲ್ಲಿ ಹಂಪಾಪುರ ಸೇರಿದಂತೆ 6 ಕೆರೆಗಳ ಅಭಿವೃದ್ಧಿ ಕೈಗೊಳ್ಳಲಾಗಿದೆ. ನಿಯಮದ ಪ್ರಕಾರ ಹಂಪಾಪುರ ಕೆರೆಯು 'ನಂಬರ್ 5 ರ ಉಪವಿಭಾಗ'ದ ವ್ಯಾಪ್ತಿಗೆ ಸೇರುತ್ತದೆ. ಆದರೆ, ಇದರ ಉಸ್ತುವಾರಿಯನ್ನು ಗುಂಡಲ್ ಜಲಾಶಯ ವ್ಯಾಪ್ತಿಗೆ ಸೇರುವ 'ಕಾಮಗೆರೆ ಉಪವಿಭಾಗ'ದ ಅಧಿಕಾರಿಗೆ ವಹಿಸಿರುವುದು ಹಲವು ಅನುಮಾನಗಳಿಗೆ ಎಡೆಮಾಡಿಕೊಟ್ಟಿದೆ.



### ಒತ್ತುವರಿ ತೆರವುಗೊಳಿಸದೆ ಅಧಿಕಾರಿಗಳ ಜಾಣಕುರುಡು

**ತಾಲ್ಲೂಕಿನ ಹಂಪಾಪುರ ಕೆರೆಯು ಸರ್ವೆ ನಂಬರ್ 157 ರಲ್ಲಿ 136.90 ಎಕರೆ ವಿಸ್ತೀರ್ಣವನ್ನು ಹೊಂದಿರುವ ಬಹುದೊಡ್ಡ ಕೆರೆಯಾಗಿದೆ. ಜುಲೈ 31, 2023 ರಂದು ಜಿಲ್ಲಾಧಿಕಾರಿಗಳ ಆದೇಶದಂತೆ, ಭೂಮಾಪಕರು ಹಾಗೂ ರಾಜಸ್ವ ನಿರೀಕ್ಷಕರು ಜಂಟಿ ಕಾರ್ಯಾಚರಣೆ ನಡೆಸಿ ಕೆರೆಯ ಹದ್ದುಬಸ್ತು ಗುರುತಿಸಿ ಸಂಬಂಧಪಟ್ಟ ಇಲಾಖೆಗೆ ಹಸ್ತಾಂತರಿಸಿದ್ದರು. ಹಸ್ತಾಂತರ ಪಡೆದ ಇಲಾಖೆಯೇ ಕೆರೆಯ ಗಡಿ ಸಂರಕ್ಷಣೆ ಮತ್ತು ಒತ್ತುವರಿ ತೆರವಿಗೆ ನೇರ ಹೊಣೆಗಾರಿಕೆ ವಹಿಸಬೇಕೆಂಬ ಷರತ್ತನ್ನೂ ವಿಧಿಸಲಾಗಿತ್ತು. ಆದಾಗ್ಯೂ, ಕೆರೆಯ ದಕ್ಷಿಣ ಭಾಗದ ಅಂಚಿನಲ್ಲಿರುವ ಹತ್ತಾರು ಎಕರೆ ಪ್ರದೇಶ ಹಾಗೂ ಕೆರೆಯ ಏರಿಯನ್ನು ಪಕ್ಕದ ಜಮೀನಿನವರು ಒತ್ತುವರಿ ಮಾಡಿಕೊಂಡು ತೆಂಗು ಮತ್ತಿತರ ಮರಗಳನ್ನು ಬೆಳೆಸಿದ್ದಾರೆ. ಇಲಾಖೆಯ ಆಸ್ತಿಯನ್ನು ರಕ್ಷಣೆ ಮಾಡಬೇಕಾದ ಅಧಿಕಾರಿಗಳು, ಒತ್ತುವರಿದಾರರೊಂದಿಗೆ ಶಾಮೀಲಾಗಿ ಒತ್ತುವರಿಯನ್ನು ತೆರವುಗೊಳಿಸದೆಯೇ ಕಾಮಗಾರಿ ನಡೆಸುತ್ತಾ ಜಾಣಕುರುಡು ಪ್ರದರ್ಶಿಸುತ್ತಿದ್ದಾರೆ.**

### ತನಿಖೆ ಹಾಗೂ ಒತ್ತುವರಿ ತೆರವಿಗೆ ಆಗ್ರಹ

ಸರ್ಕಾರ ಕೆರೆಗಳ ಅಭಿವೃದ್ಧಿಗೆ ಮುಂದಾಗಿರುವುದು ಈ ಭಾಗದ ರೈತರ ದಶಕಗಳ ಕನಸಾಗಿತ್ತು. ಆದರೆ, ಒತ್ತುವರಿ ತೆರವುಗೊಳಿಸದೆ ಕಾಮಗಾರಿ ನಡೆಸುತ್ತಿರುವುದು ಮತ್ತು ಕೃಷಿಗೆ ಬಳಸಬೇಕಾದ ಮಣ್ಣನ್ನು ಪರಭಾರೆ ಮಾಡುತ್ತಿರುವುದು ತೀವ್ರ ಅಸಮಾಧಾನಕ್ಕೆ ಕಾರಣವಾಗಿದೆ. ಕಣ್ಣೆದುರೇ ಇಲಾಖೆಯ ಆಸ್ತಿ ಒತ್ತುವರಿಯಾಗಿದ್ದರೂ ಕ್ರಮ ಕೈಗೊಳ್ಳದ ಅಧಿಕಾರಿಗಳು ರೈತರ ಹಿತವನ್ನು ಹೇಗೆ ಕಾಯುತ್ತಾರೆ ಎಂದು ಸಾರ್ವಜನಿಕರು ಪ್ರಶ್ನಿಸಿದ್ದಾರೆ. ಕೂಡಲೇ ಜಿಲ್ಲಾಡಳಿತವು ಈ ಬಗ್ಗೆ ಗಮನಹರಿಸಿ ಸೂಕ್ತ ತನಿಖೆ ನಡೆಸಬೇಕು. ಕೆರೆಯ ಮಣ್ಣು ರೈತರ ಜಮೀನು ಸೇರಿದ್ದೆಯೋ ಅಥವಾ ವಾಣಿಜ್ಯ ನಿವೇಶನಗಳ ಪಾಲಾಗಿದೆಯೋ ಎಂಬುದನ್ನು ಪತ್ತೆಹಚ್ಚಿ ತಪ್ಪಿತಸ್ಥರ ವಿರುದ್ಧ ನಿರ್ದಾಕ್ಷಿಣ್ಯ ಕ್ರಮ ಕೈಗೊಳ್ಳಬೇಕು ಹಾಗೂ ಅಕ್ರಮ ಒತ್ತುವರಿಯನ್ನು ತಕ್ಷಣವೇ ತೆರವುಗೊಳಿಸಬೇಕು ಎಂದು ರೈತರು ಮತ್ತು ಸಾರ್ವಜನಿಕರು ಒತ್ತಾಯಿಸಿದ್ದಾರೆ.

## ಮೊದಲ ಪುಟದಿಂದ

### ದೇಗುಲಗಳಿಗೆ ಕ್ಯಾಮೆರಾ ಕಣ್ಗಾವಲು

ಸ್ಥಾಪಿಸುವುದು ಮತ್ತು ಸಾಕ್ಷ್ಯ ಭದ್ರತೆಯನ್ನು ಒದಗಿಸುವಂತೆ ಆದೇಶಿಸಲಾಗಿದೆ. ಅಯೋಧ್ಯೆಯ ರಾಮಮಂದಿರದಲ್ಲಿ ದೇಣಿಗೆಗಳ ದುರುಪಯೋಗದ ನಂತರ, ಮುಖ್ಯಮಂತ್ರಿ ಡಿ.ಕೆ ಶಿವಕುಮಾರ್ ಅವರು ರಾಜ್ಯಾದ್ಯಂತ ಮುಜರಾಯಿ ಇಲಾಖೆಯ ದೇವಾಲಯಗಳಲ್ಲಿ ಸಿಸಿಟಿವಿ ಕ್ಯಾಮೆರಾಗಳನ್ನು ಅಳವಡಿಸಲು ಅಧಿಕಾರಿಗಳಿಗೆ ನಿರ್ದೇಶನ ನೀಡಿದ ಹಿನ್ನೆಲೆಯಲ್ಲಿ ಪ್ರಮಾಣಿತ ಕಾರ್ಯಾಚರಣಾ ಕಾರ್ಯವಿಧಾನಗಳನ್ನು ಹೊರಡಿಸಲಾಗಿದೆ.

### ಸರ್ವೇಗೆ ಬಂದ ಅಧಿಕಾರಿಗಳಿಗೆ ರೈತ ಮಹಿಳೆಯರ ಪೊರಕೆ ಏಟು!

ಸ್ಥಳದಲ್ಲಿ ಪೊಲೀಸರು ಇದ್ದರೂ ರೈತರ ಆಕ್ರೋಶ ತಡೆಯಲು ಸಾಧ್ಯವಾಗಲಿಲ್ಲ. ಪೊಲೀಸರನ್ನು ಲೆಕ್ಕಿಸದೇ ರೈತರು ಅಧಿಕಾರಿಗಳ ಕಾರಿಗೆ ಮುತ್ತಿಗೆ ಹಾಕಿ ಪೊರಕೆಯಲ್ಲಿ ಹೊಡೆದು ಆಕ್ರೋಶ ವ್ಯಕ್ತಪಡಿಸಿದ್ದಾರೆ. ಘಟನೆ ಬೆನ್ನಲ್ಲೇ ಸ್ಥಳಕ್ಕೆ ಭೇಟಿ ನೀಡಿದ್ದ ಎಸ್ಪಿ ಶ್ರೀನಿವಾಸ ಗೌಡ ಅವರು ರೈತರ ಜೊತೆಗೆ ಮಾತುಕತೆ ನಡೆಸಿದ್ದಾರೆ. ಅಧಿಕಾರಿಗಳ ಕರ್ತವ್ಯಕ್ಕೆ ಅಡ್ಡಿ ಮಾಡಬೇಡಿ. ಅಧಿಕಾರಿಗಳ ಮೇಲೆ ಹಲ್ಲೆ ಮಾಡಿದರೆ ನಾವು ಸುಮ್ಮನೆ ಕೂರಲು ಆಗಲ್ಲ. ಕಾನೂನು ಕೈಗೆತ್ತಿಕೊಳ್ಳುವ ಕೆಲಸ ಮಾಡಬೇಡಿ ಎಂದು ರೈತರಿಗೆ ಮನವಿ ಮಾಡಿದರು.

## ಮತದಾರರ ಪಟ್ಟಿ ಭಯ ಬೇಡ, ಜಾಗೃತಿಯಿರಲಿ

**ಮೈಸೂರು:** ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆ ಅರ್ಜಿ ಭರ್ತಿ ಮಾಡಲು ಭಯಬೇಡ, ಜಾಗೃತಿಯಿರಲಿ ಎಂದು ಕಾರ್ಯನಿರ್ವಾಹಕ ಅಧಿಕಾರಿ ಡಿ.ಬಿ.ಸುನಿಲ್ ಕುಮಾರ್ ತಿಳಿಸಿದರು.

ಸೋಮವಾರ ತಾಲ್ಲೂಕು ಪಂಚಾಯಿತಿ ತಾಲ್ಲೂಕು ಸ್ವೀಪ್ ಸಮಿತಿವತಿಯಿಂದ ತಾಲ್ಲೂಕು ಪಂಚಾಯಿತಿ ಆವರಣದಲ್ಲಿ ಆಯೋಜಿಸಿದ್ದ ಸ್ವ-ಸಹಾಯ ಸಂಘದ ಸದಸ್ಯರಿಂದ ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆ ಜಾಗೃತಿ ಜಾಥಕ್ಕೆ ಚಾಲನೆ ನೀಡಿ ಮಾತನಾಡಿದರು. ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣ ಅರ್ಜಿ ಭರ್ತಿ ಸಂಬಂಧ ಅನೇಕರಲ್ಲಿ ಗೊಂದಲವುಂಟಾಗಿ ಭಯಪಟ್ಟಿದ್ದಾರೆ. ಆ ಭಯವನ್ನು ಹೋಗಲಾಡಿಸುವ ಉದ್ದೇಶದಿಂದ ಸ್ವ-ಸಹಾಯ ಸಂಘದ ಮಹಿಳೆಯರಿಗೆ ವಿಶೇಷವಾಗಿ ಈ ದಿನ ತರಬೇತಿ ನೀಡಲಾಗಿದೆ. ಮಹಿಳೆಯರು ಮಾಹಿತಿ ಪಡೆದುಕೊಂಡರೆ ಇಡೀ ಕುಟುಂಬವೇ ಮತದಾರರ ಪಟ್ಟಿಯಿಂದ ಹೊರಗುಳಿಯುವುದರಿಂದ ತಪ್ಪುತ್ತದೆ ಎಂದರು. ತಹಶೀಲ್ದಾರ್ ನಿಸರ್ಗ ಪ್ರಿಯ ಮಾತನಾಡಿ, ಎಸ್ ಐ ಆರ್ ಸಂಬಂಧಿಸಿದಂತೆ ಸಂಪೂರ್ಣವಾಗಿ ತಿಳಿದುಕೊಳ್ಳುವ ಮೂಲಕ ನಿಮ್ಮ ಸ್ವ-ಸಹಾಯ ಸಂಘದ ಸದಸ್ಯರಿಗೂ ಹಾಗೂ ನಿಮ್ಮ ಸುತ್ತಮುತ್ತಲಿನ ಜನರಿಗೂ ಈ ಕುರಿತು ಜಾಗೃತಿ ಮೂಡಿಸಿ ಎಂದು ಸಲಹೆ ನೀಡಿದರು.

ಬೆಟ್ಟದಪುರ ಸರ್ಕಾರಿ ಪದವಿ ಕಾಲೇಜು ಪ್ರಾಧ್ಯಾಪಕ ಶಾಕೀರ್ ಮಾತನಾಡಿದರು. ಜಾಥಾದಲ್ಲಿ ಎನ್‌ಆರ್ ಎಲ್ ಎಂ ವಲಯ ಮೇಲ್ವಿಚಾರಕಿ ರೋಸಿ, ಐಇಸಿ ಸಂಯೋಜಕ ರವಿಕುಮಾರ್ ಇತರರು ಭಾಗವಹಿಸಿದ್ದರು.





ಮೈಸೂರಿನ ನೂತನ ಜಿಲ್ಲಾಧಿಕಾರಿ ಕಚೇರಿ ಎದುರಿನ ದಿ ಕೃಷ್ಣ ಲಾ ಅಸೋಸಿಯೇಷನ್ ನೂತನ ಕಚೇರಿಯನ್ನು ಆದಿಚುಂಚನಗಿರಿ ಶಾಖಾ ಮಠದ ಶ್ರೀ ಸೋಮೇಶ್ವರನಾಥ ಸ್ವಾಮೀಜಿ ಉದ್ಘಾಟಿಸಿದರು. ಮೈಸೂರು ಜಿಲ್ಲಾ ವಕೀಲರ ಸಂಘದ ಅಧ್ಯಕ್ಷ ಎಸ್.ಲೋಕೇಶ್, ಪ್ರಧಾನ ಕಾರ್ಯದರ್ಶಿ ಎಂ.ಸುಧೀರ್, ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಮಾಜಿ ಅಧ್ಯಕ್ಷ ಎಸ್.ಟಿ.ರವಿಕುಮಾರ್, ಹಂಚ್ಯಾ ಗ್ರಾಮ ಪಂಚಾಯಿತಿ ಮಾಜಿ ಸದಸ್ಯ ಎಚ್.ಡಿ.ಚೆನ್ನಯ್ಯ ಶುಭ ಹಾರೈಸಿದರು. ಕಚೇರಿಯ ಮುಖ್ಯಸ್ಥ ವಕೀಲ ಕೃಷ್ಣೇಗೌಡ ಇನ್ನಿತರರು ಉಪಸ್ಥಿತರಿದ್ದರು.

### ಮಾನವ ಅಭಿವೃದ್ಧಿ ವರದಿ ಸಿದ್ಧತೆ

## ಜಿಲ್ಲಾ ಮಟ್ಟದ ಮೇಲ್ವಿಚಾರಣಾ ಸಮಿತಿ ಸಭೆ

ಮಡಿಕೇರಿ:-ಜಿಲ್ಲಾಧಿಕಾರಿ ಎಸ್.ಜೆ.ಸೋಮಶೇಖರ್ ಅವರ ಅಧ್ಯಕ್ಷತೆಯಲ್ಲಿ ಕೊಡಗು ಜಿಲ್ಲಾ ಮಾನವ ಅಭಿವೃದ್ಧಿ ವರದಿ–2025 ಹಾಗೂ ಸಮಗ್ರ ಮತ್ತು ಸುಸ್ಥಿರ ಜಿಲ್ಲಾ ಅಭಿವೃದ್ಧಿ ಯೋಜನೆ–2031 ರ ವರದಿಗಳನ್ನು ಸಿದ್ದಪಡಿಸುವ ಸಂಬಂಧ ಜಿಲ್ಲಾ ಮಟ್ಟದ ಮೇಲ್ವಿಚಾರಣಾ ಸಮಿತಿ ಸಭೆಯಲ್ಲಿ ಸೋಮವಾರ ಸುಧೀರ್ಘ ಚರ್ಚೆ ನಡೆಯಿತು.

ಮೊದಲಿಗೆ ಸಭೆಯಲ್ಲಿ ಜಿಲ್ಲಾಧಿಕಾರಿ ಅವರು ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಕೊಡಗು ಜಿಲ್ಲಾ ಪಂಚಾಯತ್ ಮಡಿಕೇರಿ ರವರಿಗೆ, ಎಲ್ಲಾ ಜಿಲ್ಲಾ ಮಟ್ಟದ ಅಧಿಕಾರಿಗಳಿಗೆ ಹಾಗೂ ತಾಂತ್ರಿಕ ಬೆಂಬಲ ಸಂಸ್ಥೆಯ ಸಂಯೋಜಕರು, ಸಹ ಸಂಯೋಜಕರಿಗೆ ನವೀನ್ ಎ.ಬಿ.ಯೋಜನಾ ಅಂದಾಜು ಮತ್ತು ಮೌಲ್ಯ ಮಾಪನಾಧಿಕಾರಿ ಅವರು ಸ್ವಾಗತ ಕೋರಿದರು. ಜಿ.ಪಂ.ಸಿಇಒ ಆನಂದ್ ಪ್ರಕಾಶ್ ಮೀನಾ ಅವರು ಮಾತನಾಡಿ ಯೋಜನಾ ಇಲಾಖೆಯ ನಿರ್ದೇಶನದಂತೆ ಈ ಬಾರಿ ಜಿಲ್ಲಾ ಯೋಜನಾ ಸಮಿತಿ ವತಿಯಿಂದ ಪ್ರಮುಖವಾಗಿ ಡಿಎಚ್‌ಡಿಆರ್–2025 ಹಾಗೂ ಐಎಸ್‌ಡಿಡಿಪಿ–2031ರ ವರದಿಗಳನ್ನು ಸಿದ್ದಪಡಿ ಸಲು ಕ್ರಮವಹಿಸಲಾಗುತ್ತಿದೆ. ಈ ಸಂಬಂಧ ಈಗಾಗಲೇ ರಾಜ್ಯ ಮಟ್ಟದ ಸಂಪನ್ಮೂಲ ವ್ಯಕ್ತಿಗಳಿಂದ ಜಿಲ್ಲಾ ಮಟ್ಟದಲ್ಲಿ ತರಬೇತಿ ಕಾರ್ಯಗಾರ ಹಮ್ಮಿಕೊಂಡು ನಿಖರ ಹಾಗೂ ನಿರ್ದಿಷ್ಟವಾದ ದತ್ತಾಂಶಗಳನ್ನು ಒದಗಿಸುವ ಕುರಿತು ತರಬೇತಿ ನೀಡಲಾಗಿದೆ ಎಂದರು.



ಈ ವರದಿಗಳ ತಯಾರಿಕೆಗೆ ಸರ್ಕಾರದ ಆದೇಶದಂತೆ ಮೈಸೂರು ವಿಶ್ವವಿದ್ಯಾನಿಲಯದ ಅರ್ಥಶಾಸ್ತ್ರ ಮತ್ತು ಸಹಕಾರ ಅಧ್ಯಯನ ವಿಭಾಗದ ಅಧ್ಯಕ್ಷರು ಹಾಗೂ ಪ್ರಾಧ್ಯಾಪಕರಾದ ನವೀತ್ ತಿಮ್ಮಯ್ಯ ಅವರ ತಂಡ ಹಾಗೂ ಮೈಸೂರಿನ ಸಂಸ್ಥೆಗಳನ್ನು ತಾಂತ್ರಿಕ ಬೆಂಬಲ ಸಂಸ್ಥೆಗಳಾಗಿ ಆಯ್ಕೆ ಮಾಡಲಾಗಿದೆ. ಈ ಸಂಸ್ಥೆಯವರು ಸಹ ಈಗಾಗಲೇ ತಾಲ್ಲೂಕು ಮಟ್ಟದಲ್ಲಿ ತಾಲ್ಲೂಕು ಮಟ್ಟದ ಅಧಿಕಾರಿಗಳಿಗೆ ತರಬೇತಿ ನೀಡಿರುತ್ತಾರೆ. ಮುಂದುವರೆದು ದತ್ತಾಂಶಗಳನ್ನು ಸಮರ್ಪಕವಾಗಿ ಒದಗಿಸುವ ಕುರಿತು ಈಗಾಗಲೇ ಹಲವಾರು ಬಾರಿ ಜಿಲ್ಲಾ ಮಟ್ಟದ ವಲಯವಾರು ಉಪ ಸಮಿತಿ ಸಭೆ ನಡೆಸಿ ಇಲಾಖಾಧಿಕಾರಿಗಳಿಗೆ ಮಾಹಿತಿ ನೀಡಲಾಗಿದೆ ಎಂದು ತಿಳಿಸಿದರು.

ಜಿಲ್ಲಾಧಿಕಾರಿ ಎಸ್.ಜೆ. ಸೋಮಶೇಖರ್ ಅವರು ಮಾತನಾಡಿ ಎಲ್ಲಾ ಜಿಲ್ಲಾ ಮಟ್ಟದ ಅಧಿಕಾರಿಗಳು ಸಮರ್ಪಕ ದತ್ತಾಂಶಗಳನ್ನು ಒದಗಿಸಬೇಕು. ಜಿಲ್ಲೆಯ ನೈಜ ಚಿತ್ರಣವನ್ನು ಒಳಗೊಂಡಂತೆ ವರದಿಗಳನ್ನು ಸಿದ್ದಪಡಿಸಬೇಕು. ಕೊಡಗು ಜಿಲ್ಲೆಯಲ್ಲಿ ಕಂಡುಬರುವ ವಿವಿಧ ಸಮಸ್ಯೆಗಳು ಹಾಗೂ ಸವಾಲುಗಳು ಹಾಗೂ ಪರಿಹಾರೋಪಾಯಗಳನ್ನು ಒಳಗೊಂಡಂತೆ ವಾಸ್ತವಿಕ ವರದಿಯನ್ನು ಸಿದ್ದಪಡಿಸುವಂತೆ ತಾಂತ್ರಿಕ ಬೆಂಬಲ ಸಂಸ್ಥೆಗಳ ಸಂಯೋಜಕರಿಗೆ ಸೂಚಿಸಿದರು.

ಸಭೆಯಲ್ಲಿ ಜಿ.ಪಂ.ಮುಖ್ಯ ಯೋಜನಾಧಿಕಾರಿ ಅಬ್ದುಲ್ ನಭಿ, ಟಿ.ಎನ್. ಯೋಜನಾ ನಿರ್ದೇಶಕರಾದ ಜೀವನ್ ಕುಮಾರ್, ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆ ಜಂಟಿ ನಿರ್ದೇಶಕರಾದ ಶಾಂತಗೌಡ ಗುಣಕಿ, ಲೀಡ್ ಬ್ಯಾಂಕ್ ಮ್ಯಾನೇಜರ್ ಗಂಗಾಧರ ನಾಯ್ಕ್, ವಿವಿಧ ಇಲಾಖೆಗಳ ಜಿಲ್ಲಾ ಮಟ್ಟದ ಅಧಿಕಾರಿಗಳು ಹಾಗೂ ತಾಲ್ಲೂಕು ಪಂಚಾಯಿತಿ ಕಾರ್ಯ ನಿರ್ವಹಣಾಧಿಕಾರಿಗಳು ಭಾಗವಹಿಸಿದ್ದರು.

## ಜು.19ಕ್ಕೆ ರಾಷ್ಟ್ರೀಯ ಭೋವಿ ಜನೋತ್ಸವ, ಪ್ರತಿಭಾ ಪುರಸ್ಕಾರ



ಮೈಸೂರು: ಚಿತ್ರದುರ್ಗದ ಭೋವಿ ಗುರುಪೀಠದಲ್ಲಿ ಜು. 19 ರಂದು ಬೆಳಗ್ಗೆ 11ಕ್ಕೆ ರಾಷ್ಟ್ರೀಯ ಭೋವಿ ಜನೋತ್ಸವ, ಪ್ರತಿಭಾ ಪುರಸ್ಕಾರ, ಸಮುದಾಯದ ಬೇಡಿಕೆಗಳ ಮಂಡನೆ ನಡೆಯಲಿದೆ ಎಂದು ಶಿವಯೋಗಿ ಸಿದ್ದರಾಮೇಶ್ವರ ಭೋವಿ ಹಿತರಕ್ಷಣಾ ಸಮಿತಿ ಗೌರವಾಧ್ಯಕ್ಷ ಜಿ.ವಿ.ಸೀತಾರಾಮು ತಿಳಿಸಿದರು.

ನಗರದಲ್ಲಿ ಸುದ್ದಿಗಾರರೊಡನೆ ಮಾತನಾಡಿ, ಸಿಎಂ ಸಿದ್ದರಾಮಯ್ಯ ಉದ್ಘಾಟಿಸುವರು, ಈ ವೇಳೆ ಎಸ್‌ಎಸ್‌ಎಲ್‌ಸಿ, ದ್ವಿತೀಯ ಪಿಯುಸಿ ಪರೀಕ್ಷೆಗಳಲ್ಲಿ ಶೇ. 80 ಕ್ಕಿಂತ ಹೆಚ್ಚು ಅಂಕ ಪಡೆದ ಸಮುದಾಯದ ವಿದ್ಯಾರ್ಥಿಗಳನ್ನು ಪುರಸ್ಕರಿಸಲಾಗುವುದು. ಒಳಮೀಸಲಾತಿ ವಿಷಯ, ಪಾರಂಪರಿಕ ಕಲ್ಲು ಗಣಿಗಾರಿಕೆ ಸಮಸ್ಯೆ, ಗಣಿಗಾರಿಕೆ ಮಂಜೂರಾತಿ ವಿಷಯಗಳನ್ನು ಸರ್ಕಾರದ ಗಮನಕ್ಕೆ ತರಲಾಗುವುದೆಂದರು. ಈ ನಿಟ್ಟಿನಲ್ಲಿ ತಾವು ಮೈಸೂರು ಭಾಗದ ಸಮುದಾಯದ ಜನರಲ್ಲಿ ಜಾಗೃತಿ ಮೂಡಿಸಿ, ಸಮಾವೇಶದಲ್ಲಿ ಪಾಲ್ಗೊಳ್ಳುವಂತೆ ಮನವರಿಕೆ ಮಾಡಿಕೊಡುತ್ತಿರುವುದಾಗಿ ವಿವರಿಸಿದರು. ಎಸ್. ವಿಜಯಕುಮಾರ್, ಟಿ. ಕೃಷ್ಣ, ಬಸವರಾಜು, ರಾಮಸ್ವಾಮಿ, ದಾಸ್, ಮಾದಣ್ಣ, ರಾಜಪ್ಪ ಇದ್ದರು.

## ಡಾ.ರಾಜೇಶ್ ನಾಯಕಗೆ ನಾಡಪ್ರಭು ಕೆಂಪೇಗೌಡ ರಾಷ್ಟ್ರೀಯ ಪ್ರಶಸ್ತಿ



ಗುಂಡ್ಲುಪೇಟೆ: ಸಾಮಾಜಿಕ ಸೇವೆ ಕ್ಷೇತ್ರದಲ್ಲಿ ಸಲ್ಲಿಸಿರುವ ವಿಶಿಷ್ಟ ಸೇವೆಯನ್ನು ಗುರುತಿಸಿ, ಚಾಮರಾಜನಗರ ಜಿಲ್ಲೆಯ ಗುಂಡ್ಲುಪೇಟೆ ಪಟ್ಟಣದ ಡಾ. ರಾಜೇಶ್ ನಾಯಕ ಅವರಿಗೆ ಪ್ರತಿಷ್ಠಿತ 'ನಾಡಪ್ರಭು ಕೆಂಪೇಗೌಡ ರಾಷ್ಟ್ರೀಯ ಪ್ರಶಸ್ತಿ' ಪ್ರದಾನ ಮಾಡಿ ಗೌರವಿಸಲಾಯಿತು.

ಬೆಂಗಳೂರು ಗಂಧದ ಗುಡಿ ಕನ್ನಡ ಸಂಘ ಹಾಗೂ ಧಾರವಾಡದ ಚೇತನ ಪ್ರತಿಷ್ಠಾನದ ಸಂಯುಕ್ತಾಶ್ರಯದಲ್ಲಿ, ನವಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಕಲೆ, ಸಾಹಿತ್ಯ ಮತ್ತು ಸಾಂಸ್ಕೃತಿಕ ಪರಿಷತ್ತು (ರಿ), ಬೆಂಗಳೂರು ಸಹಯೋಗದೊಂದಿಗೆ ನೆಲಮಂಗಲದ ಡಾ. ಬಿ.ಆರ್. ಅಂಬೇಡ್ಕರ್ ಭವನದಲ್ಲಿ ಆಯೋಜಿಸಿದ್ದ 'ಕನ್ನಡ ನುಡಿ ಸಮ್ಮೇಳನ' ದಲ್ಲಿ ಪ್ರಶಸ್ತಿ ಪ್ರದಾನ ಸಮಾರಂಭ ನಡೆಯಿತು. ಸಾಮಾಜಿಕ ಸೇವಾ ಕ್ಷೇತ್ರದಲ್ಲಿ ನೀಡಿರುವ ಗಣನೀಯ ಕೊಡುಗೆಯನ್ನು ಪರಿಗಣಿಸಿ ಡಾ. ರಾಜೇಶ್ ನಾಯಕ ಅವರಿಗೆ ಪ್ರಶಸ್ತಿ ನೀಡಿ ಸನ್ಮಾನಿಸಲಾಯಿತು ಈ ಸಂದರ್ಭದಲ್ಲಿ ವಿವಿಧ ಗಣ್ಯರು, ಸಂಘಟನೆಯ ಪದಾಧಿಕಾರಿಗಳು ಹಾಗೂ ಕನ್ನಡಾಭಿಮಾನಿಗಳು ಉಪಸ್ಥಿತರಿದ್ದರು.

## ಕೆಎಸ್‌ಆರ್‌ಟಿಸಿ ಬಸ್ ಟಿಕೆಟ್ ಕೌಂಟರ್ ಉದ್ಘಾಟನೆ

ಗುಂಡ್ಲುಪೇಟೆ: ತಾಲೂಕಿನ ಪ್ರಸಿದ್ಧ ಗೋಪಾಲಸ್ವಾಮಿ ಬೆಟ್ಟದ ತಪ್ಪಲಿನಲ್ಲಿ ಭಕ್ತರ ಅನುಕೂಲಕ್ಕಾಗಿ ಸುಮಾರು 20 ಲಕ್ಷ ವೆಚ್ಚದಲ್ಲಿ ನಿರ್ಮಿಸಲಾದ ಕೆಎಸ್‌ಆರ್‌ಟಿಸಿ ಬಸ್ ಟಿಕೆಟ್ ಕೌಂಟರ್ ಅನ್ನು ಶಾಸಕ ಎಚ್.ಎಂ. ಗಣೇಶ್ ಪ್ರಸಾದ್ ಉದ್ಘಾಟಿಸಿದರು.

ಬಳಿಕ ಮಾತನಾಡಿದ ಅವರು, ಭಕ್ತರು ಬಿಸಿಲು ಹಾಗೂ ಮಳೆಯಲ್ಲಿ ನಿಂತು ಟಿಕೆಟ್ ಪಡೆಯುವ ತೊಂದರೆಯನ್ನು ತಪ್ಪಿಸುವ ಉದ್ದೇಶದಿಂದ ಈ ಕೌಂಟರ್ ನಿರ್ಮಿಸಲಾಗಿದೆ. ಹಿಂದಿನ ಜಿಲ್ಲಾಧಿಕಾರಿ ಶಿಲ್ಪಾ ನಾಗ್ ಅವರು ಈ ಅಗತ್ಯವನ್ನು ಗಮನಕ್ಕೆ ತಂದಿದ್ದು, ಅದರಂತೆ 'ಇದೀಗ ಭಕ್ತರಿಗೆ ಅನುಕೂಲವಾಗುವ ವ್ಯವಸ್ಥೆ ಕಲ್ಪಿಸಲಾಗಿದೆ ಎಂದು ಹೇಳಿದರು.

ಗೋಪಾಲಸ್ವಾಮಿ ಬೆಟ್ಟಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ಭಕ್ತರು ಆಗಮಿಸುವ ಹಿನ್ನೆಲೆಯಲ್ಲಿ ಹಂತ ಹಂತವಾಗಿ ಮೂಲಭೂತ ಸೌಲಭ್ಯಗಳನ್ನು ಅಭಿವೃದ್ಧಿಪಡಿಸಲಾಗುವುದು. ಮುಂದಿನ ದಿನಗಳಲ್ಲಿ ಕಾಂಕ್ರೀಟ್ ರಸ್ತೆ ನಿರ್ಮಾಣಕ್ಕೂ ಕ್ರಮ ಕೈಗೊಳ್ಳಲಾಗುವುದು. ಅಗತ್ಯ ಹೆಚ್ಚುವರಿ ಅನುದಾನವನ್ನು ಮುಖ್ಯಮಂತ್ರಿ ಅವರ ವಿಶೇಷ ಅನುದಾನದಿಂದ ತರಲು ಪ್ರಯತ್ನಿಸಲಾಗುವುದು ಎಂದು ತಿಳಿಸಿದರು.

ಬೆಟ್ಟದ ಪ್ರಧಾನ ಅರ್ಚಕ ಗೋಪಾಲಕೃಷ್ಣ ಭಟ್ ಮಾತನಾಡಿ, ಬಹಳ ದಿನಗಳಿಂದ ಟಿಕೆಟ್ ಕೌಂಟರ್ ಅಗತ್ಯವಿದ್ದು, ಹಿಂದಿನ ಜಿಲ್ಲಾಧಿಕಾರಿ ಶಿಲ್ಪಾ ನಾಗ್ ಅವರ ಸಹಕಾರ ಹಾಗೂ ಶಾಸಕರ ಸ್ಪಂದನೆಯಿಂದ ಕಾಮಗಾರಿ ಪೂರ್ಣಗೊಂಡಿದೆ. ಮುಂದಿನ ದಿನಗಳಲ್ಲಿ ಕುಡಿಯುವ ನೀರು ಸೇರಿದಂತೆ ಇನ್ನಷ್ಟು ಮೂಲಭೂತ ಸೌಲಭ್ಯಗಳನ್ನು ಕಲ್ಪಿಸಬೇಕು ಎಂದು ಮನವಿ ಮಾಡಿದರು. ಕಾರ್ಯಕ್ರಮದಲ್ಲಿ ಮಾಜಿ ಕಾಡಾ ಅಧ್ಯಕ್ಷ ನಂಜಪ್ಪ, ಚಾಮುಲ್ ನಿರ್ದೇಶಕ ನಂಜುಂಡ ಪ್ರಸಾದ್, ಡಿಸಿಎಫ್ ನಂದೀಶ್, ಎಸಿಎಫ್ ಶುಭಂ ಸಿಂಗ್, ಎಸಿಎಫ್ ಸುರೇಶ್, ವಲಯ ಅರಣ್ಯಾಧಿಕಾರಿ ಸತೀಶ್, ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷ ರವಿ, ಕೆಎಸ್‌ಆರ್‌ಟಿಸಿ ಅಧಿಕಾರಿ ಕುಮಾರ್ ನಾಯಕ ಟಿಎಪಿಸಿಎಂಎಸ್ ಅಧ್ಯಕ್ಷ ಮಡಿವಾಳಪ್ಪ, ಪುರಸಭೆ ಮಾಜಿ ಉಪಾಧ್ಯಕ್ಷ ರಾಜಶೇಖರ್. ಕೆ ಆರ್ ಡಿ ಎಲ್ ಇಇ ತಿಪ್ಪೇರುದ್ರ ಎಇಇ ಪ್ರಸನ್ನಕುಮಾರ್. ಗೋಪಾಲಪುರ ಲೋಕೇಶ್. ಮಣಿ ಮಡಹಳ್ಳಿ, ಪ್ರಮೋದ್ ಸೇರಿದಂತೆ ಹಲವರು ಉಪಸ್ಥಿತರಿದ್ದರು.



## ಮತದಾರರ ಕೇಂದ್ರದ ಸ್ಥಳ ಪರಿಶೀಲನೆ



ಮೈಸೂರು: ರಾಜ್ಯ ಸ್ವೀಪ್ ನೋಡಲ್ ಅಧಿಕಾರಿ ಪಿ.ಎಸ್.ವಸ್ತ್ರದ್ ನರಸಿಂಹರಾಜ ವಿಧಾನಸಭಾ ಕ್ಷೇತ್ರದ ವಲಯ ಕಚೇರಿ೯ರ ವ್ಯಾಪ್ತಿಯ ವಾರ್ಡ್ ಸಂಖ್ಯೆ39ರ ಎಂಸಿಸಿ ಕಾಲೋನಿಯಲ್ಲಿ ಮತಗಟ್ಟೆ ಸಂಖ್ಯೆ 144, 145, 146 ಹಾಗೂ 147ರ ಮತದಾರರ ಅನುಕೂಲಕ್ಕಾಗಿ ವಿಶೇಷ ತೀವ್ರ ಪರಿಷ್ಕರಣೆ ಕಾರ್ಯಕ್ರಮದ ಅಂಗವಾಗಿ ಸ್ಥಾಪಿಸಲಾಗಿರುವ ಮತದಾರರ ಸೌಲಭ್ಯ ಕೇಂದ್ರಕ್ಕೆ ಭೇಟಿ ನೀಡಿ ಸ್ಥಳ ಪರಿಶೀಲನೆ ನಡೆಸಿದರು.

ಈ ಸಂದರ್ಭದಲ್ಲಿ ಕೇಂದ್ರದಲ್ಲಿ ಸಾರ್ವಜನಿಕರಿಗೆ ಕಲ್ಪಿಸಲಾಗಿರುವ ಸೌಲಭ್ಯ, ಅರ್ಜಿಗಳ ಸ್ವೀಕಾರ, ದಾಖಲೆಗಳ ಪರಿಶೀಲನೆ ಹಾಗೂ ಎಸ್ ಐಆರ್ ಕಾರ್ಯದ ಪ್ರಗತಿಯನ್ನು ಅವಲೋಕಿಸಿದರು. ಮತದಾರರೊಂದಿಗೆ ನೇರವಾಗಿ ಸಂವಾದ ನಡೆಸಿ, ಕೇಂದ್ರದಲ್ಲಿ ದೊರೆಯುತ್ತಿರುವ ಸೇವೆಗಳ ಕುರಿತು ಮಾಹಿತಿ ಪಡೆದು ಅವರ ಅಭಿಪ್ರಾಯಗಳನ್ನು ಆಲಿಸಿದರು. ಅಲ್ಲದೆ, ಬಿಎಲ್ ಒ, ಬಿಎಲ್ ಒ ಸೂಪರ್ ವೈಸರ್ ಹಾಗೂ ಸಹಾಯಕ ಮತದಾರರ ನೋಂದಣಿ ಅಧಿಕಾರಿಗಳೊಂದಿಗೆ ಸಮಾಲೋಚನೆ ನಡೆಸಿ, ಎಸ್ ಐಆರ್ ಕಾರ್ಯವನ್ನು ಗುಣಮಟ್ಟದೊಂದಿಗೆ, ಪಾರದರ್ಶಕವಾಗಿ ಹಾಗೂ ನಿಗದಿತ ಅವಧಿಯೊಳಗೆ ಪೂರ್ಣಗೊಳಿಸುವಂತೆ ಅಗತ್ಯ ಮಾರ್ಗದರ್ಶನ ನೀಡಿದರು. ಈ ಸಂದರ್ಭದಲ್ಲಿ ನರಸಿಂಹರಾಜ ವಿಧಾನಸಭಾ ಕ್ಷೇತ್ರದ ಮತದಾರರ ನೋಂದಣಿ ಅಧಿಕಾರಿ ಸಿ.ವೆಂಕಟೇಶ್, ಎಇಆರ್ ಒ ಇತರರು ಉಪಸ್ಥಿತರಿದ್ದರು.

## ದಸರೆಗೆ ಮುನ್ನ ರಸ್ತೆಗುಂಡಿ ಮುಚ್ಚಿ



ಮೈಸೂರು: ರಾಜ್ಯ ಸರ್ಕಾರ ಈ ಬಾರಿ ಅದ್ದೂರಿ ದಸರಾ ಆಚರಣೆ ಮಾಡುವುದಾಗಿ ತಿಳಿಸಿದ್ದು, ನಗರದ ಹಲವಾರು ರಸ್ತೆಗಳಲ್ಲಿ ಸೆಸ್ಕಾಂನ ಕಾಮಗಾರಿಯಿಂದ ನಗರದ ಹಲವೆಡೆ ಗುಂಡಿ ಬಿದ್ದಿದ್ದು ಅದನ್ನು ಸರಿಪಡಿಸುವ ಕೆಲಸವನ್ನು ಸರ್ಕಾರ ಮಾಡಬೇಕೆಂದು ಜೆಡಿಎಸ್ ನಗರಾಧ್ಯಕ್ಷ ಎಸ್.ಬಿ.ಎಂ. ಮಂಜು ಆಗ್ರಹಿಸಿದರು.

ನಗರದಲ್ಲಿ ಸುದ್ದಿಗಾರರೊಡನೆ ಮಾತನಾಡಿ, ನಗರದಲ್ಲಿ ಹಲವು ವರ್ಷಗಳಿಂದ ನಡೆಯುತ್ತಿರುವ ಕಾಮಗಾರಿ ಇನ್ನೂ ಪೂರ್ಣಗೊಂಡಿಲ್ಲ. ಇದರಿಂದಾಗಿ ರಸ್ತೆ ಹದಗೆಟ್ಟಿದ್ದು, ಶೀಘ್ರವಾಗಿ ಅವುಗಳನ್ನು ಪೂರ್ಣಗೊಳಿಸುವ ಕೆಲಸ ಆಗಬೇಕು. ಇಲ್ಲದಿದ್ದಲ್ಲಿ ದೇಶ ವಿದೇಶದಿಂದ ಆಗಮಿಸುವ ಪ್ರವಾಸಿಗರಿಗೆ ತಪ್ಪು ಸಂದೇಶ ನೀಡಿದಂತಾಗುತ್ತದೆ. ಈಗ ಪಾಲಿಕೆ ಆಯುಕ್ತರಾಗಿರುವ ಸವಿತಾರಿಗೆ ಪಾಲಿಕೆಯಲ್ಲಿನ ವ್ಯವಸ್ಥೆಯ ಪೂರ್ಣ ಅರಿವಿದೆ. ಹೀಗಾಗಿ ಈ ನಿಟ್ಟಿನಲ್ಲಿ ಕ್ರಮ ಕೈಗೊಳ್ಳಬೇಕು ಎಂದರು. 18 ವರ್ಷದೊಳಗಿನ ಟೈಪ್ 1 ಮಧುಮೇಹದಿಂದ ಬಳಲುತ್ತಿರುವ ಮಕ್ಕಳಿಗೆ ಉಚಿತವಾಗಿ ಇನ್ಸುಲಿನ್ ನೀಡುವುದಾಗಿ ಸರ್ಕಾರ ನೀಡಿದ್ದ ಭರವಸೆ ಈಡೇರಿಲ್ಲ. ಇದಲ್ಲದೆ ವೃದ್ಧಾಪ್ಯ ವೇತನ, ಅಂಗವಿಕಲರ ಮಾಸಾಶನ, ಮನಸ್ವಿನಿ ಮೊದಲಾದವನ್ನು ಕೂಡಲೇ ಸರ್ಕಾರ ಬಿಡುಗಡೆಗೊಳಿಸಬೇಕು. ಇಲ್ಲದಿದ್ದರೆ ತಾವು ಕೇವಲ ಭರವಸೆ ನೀಡಿದೆವು. ನಮ್ಮಿಂದ ನೀಡಲು ಸಾಧ್ಯವಾಗದು ಎಂದು ಒಪ್ಪಿಕೊಳ್ಳಲಿ ಎಂದರು.

ಇದಲ್ಲದೆ, ಕುಟುಂಬ ಯಾರಾದರೂ ಬ್ಯಾಂಕ್ ಸಾಲ ಪಡೆದು ಏನಾದರೂ ಉದ್ಯಮ ಪ್ರಾರಂಭಿಸಿ ತೆರಿಗೆ ಕಟ್ಟುತ್ತಿದ್ದರೆ ಅಂತಹವರ ಕುಟುಂಬದ ಹಿರಿಯರ ಬಿಪಿಎಲ್ ಪಡಿತರ ಚೀಟಿ ರದ್ದು ಮಾಡುವುದು ಎಷ್ಟು ಸರಿ, ಎಲ್ಲರೂ ತಮ್ಮ ತಂದೆ ತಾಯಿಯರನ್ನು ನೋಡಿಕೊಳ್ಳುತ್ತಾರೆ ಎಂಬ ನಂಬಿಕೆ ಸರಿಯಲ್ಲ. ಇದಲ್ಲದೆ, ಈಗಾಗಲೇ ದಸರಾಕ್ಕೆ ಮೊದಲಾದವು ಸೇರಿಕೊಂಡಿವೆ. ಈಗ ಕಂಬಳ ಸೇರ್ಪಡೆ ಮಾಡುವುದು ಸರಿಯಲ್ಲ ಎಂದು ಸಂಸದ ಯದುವೀರ್ ಹೇಳಿದ್ದಾರೆ. ಹೀಗಾಗಿ ಸರ್ಕಾರ ಮರು ಪರಿಶೀಲನೆ ಮಾಡಬೇಕೆಂದರು.

ಇದೇ ವೇಳೆ, ಸ್ಥಳೀಯ ಸಂಸ್ಥೆಗಳ ಚುನಾವಣೆ ನಡೆಸಲು ಸರ್ಕಾರಕ್ಕೆ ಏಕೆ ಅಂಜಿಕೆಯೋ ತಿಳಿಯದಾಗಿದೆ. ತಾವು ಸೋಲುತ್ತೇವೆಂಬ ಭಯ ಇರಬೇಕು. ಈಗಾಗಲೇ ಅನುದಾನಗಳು ವಾಪಸು ಹೋಗುತ್ತಿವೆ ಎಂದು ಆತಂಕ ವ್ಯಕ್ತಪಡಿಸಿದರು. ಜೆಡಿಎಸ್ ಮುಖಂಡರಾದ ಫಾಲ್ಕನ್ ಬೋರೇಗೌಡ, ರಿಜ್ವಾನ್ ಅರ್ಷದ್, ರಘುರಾಂ, ಚಂದ್ರಹಾಸ್, ಪ್ರಕಾಶ್, ಕೃಷ್ಣಾಚಾರಿ, ನಗರ ವಕ್ತಾರ ಎನ್.ರಾಮು ಇದ್ದರು.

# ರೂಪಾಯಿ ಮೌಲ್ಯ ವೃದ್ಧಿಗೆ ರಫ್ತು ಹೆಚ್ಚಳ

## ಸುರೇಶ್ ಕುಮಾರ್ ಜೈನ್ ಹೇಳಿಕೆ । ರಫ್ತು ನಿರ್ವಹಣಾ ತರಬೇತಿ

ಮೈಸೂರು: ಡಾಲರ್ ಎದುರು ಕುಸಿಯುತ್ತಿರುವ ಭಾರತೀಯ ರೂಪಾಯಿಯ ಮೌಲ್ಯವನ್ನು ವೃದ್ಧಿಸಲು ಆಮದು ಪ್ರಮಾಣವನ್ನು ತಗ್ಗಿಸಿ, ರಫ್ತು ಪ್ರಮಾಣವನ್ನು ಹೆಚ್ಚಿಸುವುದು ಅತ್ಯಗತ್ಯ ಎಂದು ಮೈಸೂರು ಕೈಗಾರಿಕೆಗಳ ಸಂಘದ ಪ್ರಧಾನ ಕಾರ್ಯದರ್ಶಿ ಸುರೇಶ್ ಕುಮಾರ್ ಜೈನ್ ಅಭಿಪ್ರಾಯಪಟ್ಟರು.

ನಗರದ ಹೋಟೆಲ್ ಪ್ರೆಸಿಡೆಂಟ್‌ನಲ್ಲಿ ಆಯೋಜಿಸಿದ್ದ ರಾಜ್ಯದ ರಫ್ತು ವಲಯವನ್ನು ವಿಸ್ತರಿಸುವ ಉದ್ದೇಶದ 'ರಫ್ತು ನಿರ್ವಹಣಾ ತರಬೇತಿ' ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

### ಸ್ಥಳೀಯ ಉತ್ಪನ್ನಗಳ ಬಳಕೆ ಮತ್ತು ಚೀನಾ ವಸ್ತುಗಳ ಬಗ್ಗೆ ಎಚ್ಚರ

ಚೀನಾದಿಂದ ಆಮದು ಮಾಡಿಕೊಳ್ಳುವ ಸೋಲಾರ್ ಪ್ಯಾನಲ್ ಸೇರಿದಂತೆ ಇನ್ನಿತರ ವಿದೇಶಿ ಉತ್ಪನ್ನಗಳಿಗೆ ಸರ್ಕಾರ ಸಬ್ಸಿಡಿ ನೀಡುತ್ತಿಲ್ಲ. ಹೀಗಾಗಿ ನಾವು ಸ್ಥಳೀಯವಾಗಿ ಉತ್ಪಾದಿಸುವ ಗುಣಮಟ್ಟದ ಪದಾರ್ಥಗಳನ್ನೇ ಖರೀದಿಸಬೇಕು ಮತ್ತು ನಮ್ಮ ದೇಶದಿಂದ ರಫ್ತು ಮಾಡುವತ್ತ ಹೆಚ್ಚಿನ ಗಮನ ಹರಿಸಬೇಕು. ವಿಶೇಷವಾಗಿ ಚೀನಾ ಉತ್ಪನ್ನಗಳ ಗುಣಮಟ್ಟ ಹಾಗೂ ವಿಶ್ವಾಸಾರ್ಹತೆಯ ಕೊರತೆಯ ಬಗ್ಗೆ ನಾವೆಲ್ಲರೂ ಜಾಗೃತರಾಗಬೇಕಿದೆ ಎಂದು ಎಚ್ಚರಿಸಿದರು.

### ಆರು ದಿನಗಳ ತರಬೇತಿ ಹಾಗೂ ಮೈಸೂರು ರಫ್ತು ಕೇಂದ್ರದ ಮಾಹಿತಿ

ಈ ರಫ್ತು ಅಭಿವೃದ್ಧಿ ಹಾಗೂ ತರಬೇತಿ ಕಾರ್ಯಕ್ರಮವು ನಿರಂತರವಾಗಿ ಆರು ದಿನಗಳ ಕಾಲ ನಡೆಯಲಿದ್ದು, ಜಾಗತಿಕ ಮಾರುಕಟ್ಟೆಯ ಸ್ಪರ್ಧೆಗೆ ತಕ್ಕಂತೆ ಗುಣಮಟ್ಟದ ಉತ್ಪನ್ನಗಳನ್ನು ಸರಿಯಾದ ಬೆಲೆಯಲ್ಲಿ ಹೇಗೆ ರಫ್ತು ಮಾಡಬೇಕು ಎಂಬುದರ ಕುರಿತು ಅಧಿಕಾರಿಗಳು ಉದ್ಯಮಿಗಳಿಗೆ ಸಂಪೂರ್ಣ ಮಾಹಿತಿ ನೀಡಲಿದ್ದಾರೆ. ರಫ್ತು ವಲಯಕ್ಕೆ ಉತ್ತೇಜನ ನೀಡಲು ಕೇಂದ್ರ ಸರ್ಕಾರದ 3 ಕೋಟಿ ರೂ. ಹಾಗೂ ರಾಜ್ಯ ಸರ್ಕಾರದ 1 ಕೋಟಿ ರೂ. ಅನುದಾನದೊಂದಿಗೆ ರಿಂಗ್ ರಸ್ತೆಯ ಶೇಷಾದ್ರಿಪುರಂ ಸಂಸ್ಥೆಯ ಪಕ್ಕದಲ್ಲಿಯೇ 'ಮೈಸೂರು ರಫ್ತು ಕೇಂದ್ರ' ತಲೆ ಎತ್ತುತ್ತಿದೆ. ಕರ್ನಾಟಕ ಸರ್ಕಾರದ ಕಾರ್ಯದರ್ಶಿಗಳು ಈಗಾಗಲೇ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದ್ದಾರೆ. ಯುದ್ಧದ ಕಾರಣಗಳಿಂದಾಗಿ ಸ್ಟೀಲ್, ಟೈಲ್ಸ್ ಮುಂತಾದ ಸಾಮಗ್ರಿಗಳ ಬೆಲೆ ಹೆಚ್ಚಾಗಿ ಕಾಮಗಾರಿ ಕೊಂಚ ತಡವಾಗಿದ್ದರೂ, ಶೀಘ್ರದಲ್ಲೇ ಇದು ಉದ್ಯಮಿಗಳ ಸೇವೆಗೆ ಮುಕ್ತವಾಗಲಿದೆ ಎಂದು ಅವರು ಮಾಹಿತಿ ನೀಡಿದರು. ಕಾರ್ಯಕ್ರಮದಲ್ಲಿ ವಿಟಿಪಿಸಿ ರಫ್ತು ಸೌಲಭ್ಯ ಕೇಂದ್ರದ ಉಪ ನಿರ್ದೇಶಕಿ ಎಲ್. ಮೇಘಲಾ, ಅರವಿಂದ್ ಭಟ್, ಉಮಾ ಸೇರಿದಂತೆ ಹಲವು ಗಣ್ಯರು ಹಾಗೂ ಉದ್ಯಮಿಗಳು ಉಪಸ್ಥಿತರಿದ್ದರು.





### ಇ-ಕಾಮರ್ಸ್ ಬಳಕೆ ಮತ್ತು ಗಣ್ಯರ ಉಪಸ್ಥಿತಿ

ಇ-ಕಾಮರ್ಸ್ ಜಾಲದ ಮೂಲಕ ವಿಶ್ವದ ಯಾವುದೇ ದೇಶಕ್ಕಾದರೂ ನಮ್ಮ ಉತ್ಪನ್ನಗಳನ್ನು ಸುಲಭವಾಗಿ ಮಾರಾಟ ಮಾಡುವ ಅವಕಾಶ ಲಭ್ಯವಿದೆ. ಆದ್ದರಿಂದ ನಮ್ಮ ಯುವ ಉದ್ಯಮಿಗಳು ನವೀನ ತಂತ್ರಜ್ಞಾನವನ್ನು ಅಳವಡಿಸಿಕೊಂಡು, 'ಮೇಡ್ ಇನ್ ಮೈಸೂರ್' ಮತ್ತು 'ಮೇಡ್ ಇನ್ ಕರ್ನಾಟಕ' ಎಂಬ ಹೆಸರಿನಲ್ಲಿ ಜಾಗತಿಕ ಮಟ್ಟವನ್ನು ತಲುಪುವ ದೃಢ ಸಂಕಲ್ಪ ಮಾಡಬೇಕು ಎಂದು ಅವರು ಕರೆ ನೀಡಿದರು.

### ಜಾಗತಿಕ ಮಟ್ಟದಲ್ಲಿ ಗುಣಮಟ್ಟದ ಪರಿಚಯ: ಡಾ. ಕೆ.ಬಿ. ಲಿಂಗರಾಜು

ಮೈಸೂರು ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆಯ ಅಧ್ಯಕ್ಷ ಡಾ. ಕೆ.ಬಿ. ಲಿಂಗರಾಜು ಅವರು ಮಾತನಾಡಿ, ರಫ್ತು ಮಾಡುವುದು ಎಂದರೆ ಕೇವಲ ವಿದೇಶಕ್ಕೆ ಸರಕುಗಳನ್ನು ಕಳುಹಿಸುವುದಲ್ಲ; ಅದು ನಮ್ಮ ದೇಶದ ಗುಣಮಟ್ಟ ಮತ್ತು ಸಾಮರ್ಥ್ಯವನ್ನು ಜಗತ್ತಿಗೆ ಪರಿಚಯಿಸುವ ಮಹತ್ವದ ಪ್ರಕ್ರಿಯೆಯಾಗಿದೆ. ಉತ್ಪನ್ನಗಳನ್ನು ಹೇಗೆ ತಯಾರಿಸಬೇಕು, ಹೇಗೆ ಸಾಗಾಣಿಕೆ ಮಾಡಬೇಕು ಮತ್ತು ನಿಗದಿತ ಸಮಯಕ್ಕೆ ಹೇಗೆ ತಲುಪಿಸಬೇಕು ಎಂಬ ಉದ್ದೇಶದಿಂದಲೇ ಈ ತರಬೇತಿ ನೀಡಲಾಗುತ್ತಿದೆ ಎಂದರು. ಮೈಸೂರು ಕೇವಲ ಸಾಂಸ್ಕೃತಿಕ ರಾಜಧಾನಿ ಮಾತ್ರವಲ್ಲದೆ, ಕೈಗಾರಿಕೆ, ಕೃಷಿ, ಆಹಾರ ಸಂಸ್ಕರಣೆ, ಮಾಹಿತಿ ತಂತ್ರಜ್ಞಾನ, ಜವಳಿ, ಅಗರಬತ್ತಿ, ಶ್ರೀಗಂಧದ ಉತ್ಪನ್ನಗಳು, ಜೇನುತುಪ್ಪ, ಕಾಫಿ, ಮಸಾಲೆ ಪದಾರ್ಥಗಳು, ಆಯುರ್ವೇದ ಹಾಗೂ ಇಂಜಿನಿಯರಿಂಗ್ ಕ್ಷೇತ್ರಗಳಲ್ಲಿ ಅತ್ಯುತ್ತಮ ರಫ್ತು ಅವಕಾಶಗಳನ್ನು ಹೊಂದಿದೆ ಎಂದು ವಿವರಿಸಿದರು.

## ಆರೋಗ್ಯಕರ ಚಿಂತನೆಗೆ ಸಾಹಿತ್ಯ ಆಯಾಮ




ಮೈಸೂರು: ಸಾಹಿತ್ಯ, ಓದು, ಬರವಣಿಗೆ, ಸಂಗೀತ ಹಾಗೂ ಇತರ ಸೃಜನಾತ್ಮಕ ಚಟುವಟಿಕೆಗಳು ವ್ಯಕ್ತಿಯಲ್ಲಿ ಆರೋಗ್ಯಕರ ಚಿಂತನೆಯನ್ನು ಬೆಳೆಸುವ ಮೂಲಕ ಉತ್ತಮ ಜೀವನಶೈಲಿಗೆ ಹೊಸ ಆಯಾಮವನ್ನು ನೀಡುತ್ತವೆ ಎಂದು ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆಯ ಸೂಪರಿಂಟೆಂಡೆಂಟ್ ಡಾ. ಸದಾನಂದ ಹೇಳಿದರು.

ಲೇಖಕ ಕಾಶಿಗೌ "ಚಿಂತನೆ ಬಿತ್ತನೆ ಬೆಳೆ" ಮತ್ತು "ಮತಿ ಬೆರಗು" ಕೃತಿಗಳನ್ನು ಲೋಕಾರ್ಪಣೆಗೊಳಿಸಿ ಮಾತನಾಡಿದರು. ಇಂದಿನ ಯಾಂತ್ರಿಕ ಹಾಗೂ ಒತ್ತಡಭರಿತ ಜೀವನದಲ್ಲಿ ಮನಸ್ಸಿನ ಆರೋಗ್ಯವನ್ನು ಕಾಪಾಡಿಕೊಳ್ಳುವುದು ಅತ್ಯಂತ ಅಗತ್ಯವಾಗಿದೆ. ಸಾಹಿತ್ಯದೊಂದಿಗೆ ನಿರಂತರ ಒಡನಾಟ ಬೆಳೆಸಿಕೊಳ್ಳುವುದು, ಪುಸ್ತಕಗಳನ್ನು ಓದುವುದು, ಬರವಣಿಗೆಯಲ್ಲಿ ತೊಡಗುವುದು, ಸಂಗೀತ ಮತ್ತು ಇತರ ಸೃಜನಾತ್ಮಕ ಚಟುವಟಿಕೆಗಳಲ್ಲಿ ಭಾಗವಹಿಸುವುದು ಮೆದುಳಿನ ಕಾರ್ಯಕ್ಷಮತೆಯನ್ನು ಉತ್ತೇಜಿಸುತ್ತದೆ. ಇವು ಏಕಾಗ್ರತೆ, ಸ್ಮರಣಶಕ್ತಿ ಮತ್ತು ಸೃಜನಶೀಲತೆಯನ್ನು ವೃದ್ಧಿಸುವುದರೊಂದಿಗೆ ಮಾನಸಿಕ ಒತ್ತಡವನ್ನು ತಗ್ಗಿಸಿ ಮನಸ್ಸಿನಲ್ಲಿ ಸಕಾರಾತ್ಮಕ ಚಿಂತನೆಗಳನ್ನು ಮೂಡಿಸುತ್ತವೆ ಎಂದು ಹೇಳಿದರು.

ಲೇಖಕ ಕಾಶಿಗೌ ಅವರ ಸಾಹಿತ್ಯ ಸೇವೆಯನ್ನು ಶ್ಲಾಘಿಸಿದ ಡಾ. ಸದಾನಂದ, "ಚಿಂತನೆ ಬಿತ್ತನೆ ಬೆಳೆ" ಮತ್ತು "ಮತಿ ಬೆರಗು" ಕೃತಿಗಳು ಓದುಗರಲ್ಲಿ ಉತ್ತಮ ವಿಚಾರಪ್ರಜ್ಞೆ, ಜೀವನಮೌಲ್ಯಗಳು ಮತ್ತು ಸೃಜನಾತ್ಮಕ ಮನೋಭಾವವನ್ನು ಬೆಳೆಸಿ ಸಮಾಜಕ್ಕೆ ಸಕಾರಾತ್ಮಕ ದಿಕ್ಕು ತೋರಿಸಲಿ ಎಂದು ಶುಭ ಹಾರೈಸಿದರು.

## ಒಕ್ಕಲಿಗರ ಸಂಘದ ಅಧ್ಯಕ್ಷರ ಆಯ್ಕೆ



ಚಾಮರಾಜನಗರ: ಜಿಲ್ಲೆಯ ಯಳಂದೂರು ತಾಲ್ಲೂಕು ಒಕ್ಕಲಿಗರ ಸಂಘದ ಅಧ್ಯಕ್ಷರಾಗಿ ವಡಗೆರೆ ಸಿ. ಯೋಗೇಂದ್ರ ಅವಿರೋಧವಾಗಿ ಆಯ್ಕೆಯಾದರು.

ಯಳಂದೂರಿನಲ್ಲಿ ನಡೆದ ತಾಲೂಕು ಒಕ್ಕಲಿಗರ ಸಮುದಾಯದ ಮುಖಂಡರ ಸಭೆಯಲ್ಲಿ ಯಳಂದೂರು ತಾಲೂಕು ಒಕ್ಕಲಿಗರ ಸಂಘದ ಗೌರವಾಧ್ಯಕ್ಷರಾಗಿ ಬಿ ವಿ ರಾಜೇಗೌಡ ಅಧ್ಯಕ್ಷರಾಗಿ ಯೋಗೇಂದ್ರಸಿ, ಕಾರ್ಯಾಧ್ಯಕ್ಷರಾಗಿ ಎ ಕುಮಾರ್, ಉಪಾಧ್ಯಕ್ಷರಾಗಿ ಚಿಕ್ಕಣ್ಣೇಗೌಡ, ಸುಂದರ ಆಯ್ಕೆಯಾಗಿದ್ದಾರೆ.

ಸಂಘದ ಕಾರ್ಯದರ್ಶಿಯಾಗಿ ಡಿ ಸಿ ಬಾಬು, ಸಹ ಕಾರ್ಯದರ್ಶಿಯಾಗಿ ರಘು, ಖಜಾಂಚಿಯಾಗಿ ರೇವಣ್ಣ, ಮಹಾಪೋಷಕರಾಗಿ ಪ್ರಕಾಶ್, ಪೋಷಕರಾಗಿ ಮಧು ನಿರ್ದೇಶಕರಾಗಿ ಅರವಿಂದೇಗೌಡ ರುದ್ರೇಗೌಡ ಆನಂದ್ ಪ್ರದೀಪ್ ರಾಜೇಶ್ ಸಂತೋಷ್, ಸತೀಶ್, ದಿವಾಕರ್, ಡಿ ಸಿ ಕುಮಾರ್, ಗೋವಿಂದೇಗೌಡ, ಸಚಿನ್ ಮಹದೇವಪ್ರಕಾಶ್, ಸಂತೋಷ್, ಪ್ರಕಾಶ್, ದೇಶಲಿಂಗ, ಸೋಮಣ್ಣ, ನಾಗೇಂದ್ರ ಆಯ್ಕೆಯಾಗಿದ್ದಾರೆ.

### ಕರ್ನಾಟಕ ಉಚ್ಚ ನ್ಯಾಯಾಲಯದ ನ್ಯಾಯಮೂರ್ತಿಗಳಾದ ಡಾ.ಕೆ.ಮನ್ಮಧರಾವ್ ಹೇಳಿಕೆ

# ಶೀಘ್ರ ನ್ಯಾಯ ಲೋಕ್ ಅದಾಲತ್ ಪ್ರಮುಖ ಉದ್ದೇಶ

ಚಾಮರಾಜನಗರ: ಕಕ್ಷಿದಾರರಿಗೆ ಶೀಘ್ರ ನ್ಯಾಯ ಒದಗಿಸುವುದು ಲೋಕ್ ಅದಾಲತ್‌ನ ಪ್ರಮುಖ ಉದ್ದೇಶವಾಗಿದೆ ಎಂದು ಕರ್ನಾಟಕದ ಉಚ್ಚ ನ್ಯಾಯಾಲಯದ ನ್ಯಾಯಮೂರ್ತಿಗಳು ಹಾಗೂ ಜಿಲ್ಲಾ ಆಡಳಿತಾತ್ಮಕ ನ್ಯಾಯಾಧೀಶ ಡಾ.ಕೆ.ಮನ್ಮಧರಾವ್ ಅವರು ತಿಳಿಸಿದರು.

ನಗರದ ಜಿಲ್ಲಾ ನ್ಯಾಯಾಲಯದ ಅವರಣದಲ್ಲಿಂದು ರಾಷ್ಟ್ರೀಯ ಹಾಗೂ ರಾಜ್ಯ ಕಾನೂನು ಸೇವಾ ಪ್ರಾಧಿಕಾರದ ನಿರ್ದೇಶನದನ್ವಯ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರ ಹಾಗೂ ಜಿಲ್ಲಾ ವಕೀಲರ ಸಂಘದ ಸಹಯೋಗದಲ್ಲಿ ಹಮ್ಮಿಕೊಳ್ಳಲಾಗಿದ್ದ ಈ ವರ್ಷದ 2ನೇ ಲೋಕ್ ಅದಾಲತ್ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು. ಸಿವಿಲ್, ಕ್ರಿಮಿನಲ್ ಪ್ರಕರಣಗಳು ಸೇರಿದಂತೆ ವ್ಯಾಜ್ಯಪೂರ್ವ ರಾಜಿಯೋಗ್ಯ ಪ್ರಕರಣಗಳನ್ನು ಗುರುತಿಸಿ ತ್ವರಿತವಾಗಿ ಇತ್ಯರ್ಥಪಡಿಸಲು ಲೋಕ್ ಅದಾಲತ್ ಉತ್ತಮ ವೇದಿಕೆಯಾಗಿದೆ. ಲೋಕ್ ಅದಾಲತ್‌ಗೆ ಕಕ್ಷಿದಾರರಿಂದ ಉತ್ತಮ ಸ್ಪಂದನೆ ವ್ಯಕ್ತವಾಗುತ್ತಿದ್ದು, ನಿರೀಕ್ಷೆಗಿಂತ ಹೆಚ್ಚಿನ ಪ್ರಕರಣಗಳು ಇತ್ಯರ್ಥವಾಗುತ್ತಿರುವುದು ಆಶಾದಾಯಕ ಸಂಗತಿಯಾಗಿದೆ. ಇದರಿಂದ ಉಭಯ ಕಕ್ಷಿದಾರರ ಸಮಯ, ಹಣ ಉಳಿತಾಯವಾಗಲಿದೆ. ಉಭಯ ಪಕ್ಷಾಕಾರರಲ್ಲಿ ಭಾಂಧವ್ಯ ವೃದ್ಧಿಯಾಗಲಿದೆ ಎಂದರು. ಲೋಕ್ ಅದಾಲತ್‌ನಲ್ಲಿ ಪ್ರಕರಣಗಳ ಶೀಘ್ರ ಇತ್ಯರ್ಥಕ್ಕೆ ವಕೀಲರು ತಮ್ಮ ದೈನಂದಿನ ಕಾರ್ಯಕಲಾಪಗಳ ಜೊತೆಗೆ ಉತ್ತಮ ಸಹಕಾರ ನೀಡುತ್ತಿದ್ದಾರೆ. ಎರಡು ಕಡೆಯ ಕಕ್ಷಿದಾರರಿಗೂ ಒಪ್ಪಿಗೆಯಾಗುವಂತೆ ಅವರ ಮನವೊಲಿಸುವಲ್ಲಿ ವಕೀಲರ ಪಾತ್ರ ಮುಖ್ಯವಾಗಿದೆ. ಸಾಕಷ್ಟು ವರ್ಷಗಳಿಂದ ಬಾಕಿ ಇರುವ ಪ್ರಕರಣಗಳು ಲೋಕ್ ಅದಾಲತ್‌ನಲ್ಲಿ ಇತ್ಯರ್ಥಪಡಿಸಲು ವಕೀಲರು ಕಾಳಜಿ ವಹಿಸುತ್ತಿದ್ದು, ಜಿಲ್ಲಾ ಕಾನೂನು ಸೇವಾ ಪ್ರಾಧಶಿಕಾರಕ್ಕೆ ವಕೀಲರ ಸಹಕಾರ ನಿರಂತರವಾಗಿ ಮುಂದುವರೆಯಲಿ ಎಂದು ಹಾರೈಸಿದರು.




ಜಿಲ್ಲಾ ಪ್ರದನ ಸೆಷೆನ್ಸ್ ನ್ಯಾಯಾದಿಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಅಧ್ಯಕ್ಷರಾದ ಜಿ. ಪ್ರಭಾವತಿ ಅವರು ಮಾತನಾಡಿ ರಾಷ್ಟ್ರೀಯ ಹಾಗೂ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದ ನಿರ್ದೇಶನದಂತೆ ಈ ವರ್ಷದ 2ನೇ ಲೋಕ್ ಅದಾಲತ್ ಕಾರ್ಯಕ್ರಮವನ್ನು ಇಂದು ಆಯೋಜಿಸಲಾಗಿದೆ. ಲೋಕ್ ಅದಾಲತ್‌ನಿಂದ ಈಗಾಗಲೇ ಸಾಕಷ್ಟು ಪ್ರಕರಣಗಳು ಇತ್ಯರ್ಥವಾಗಿದೆ. ಕಳೆದ ಬಾರಿಗಿಂತ ಈ ಬಾರಿ ಹೆಚ್ಚಿನ ಪ್ರಕರಣಗಳ ಇತ್ಯರ್ಥದ ಗುರಿ ಹೊಂದಲಾಗಿದೆ ಎಂದರು.

ಅದಾಲತ್ ಪೂರ್ವ ತಯಾರಿಗಾಗಿ ಜಿಲ್ಲಾ ನ್ಯಾಯಾಲಯದಲ್ಲಿ ತೆರೆಯಲಾಗಿರುವ ಮಧ್ಯಸ್ಥಿಕೆದಾರರ ಸಮನ್ವಯ ಕೇಂದ್ರದಲ್ಲಿ ಎರಡು ಕಡೆಯ ಕಕ್ಷಿದಾರರನ್ನು ಮನವೊಲಿಸಲಾಗಿದೆ. ಪ್ರಕರಣಗಳ ತ್ವರಿತ ಇತ್ಯರ್ಥದಿಂದ ನ್ಯಾಯಾಲಯಗಳ ಹೊರೆ ತಗ್ಗಲಿದೆ. ಪ್ರಕರಣಗಳ ಇತ್ಯರ್ಥದಲ್ಲಿ ವಕೀಲರದ್ದೂ ನಿರ್ಣಾಯಕ ಪಾತ್ರವಾಗಿದೆ. ಒಟ್ಟಾರೆ ಲೋಕ್ ಅದಾಲತ್ ಯಶಸ್ವಿಯಾಗಲಿ ಎಂದು ಜಿಲ್ಲಾ ನ್ಯಾಯಾಧೀಶರಾದ ಪ್ರಭಾವತಿ ಅವರು ತಿಳಿಸಿದರು. ಇದೇ ವೇಳೆ ಸಂತ್ರಸ್ತರಿಗೆ ಪರಿಹಾರದ ಚೆಕ್‌ಗಳನ್ನು ವಿತರಣೆ ಮಾಡಿದರು. ಹೆಚ್ಚುವರಿ ಜಿಲ್ಲಾ ಮತ್ತು ಸೆಷೆನ್ಸ್ ನ್ಯಾಯಾಧೀಶರಾದ ಎಸ್.ಜೆ. ಕೃಷ್ಣ, ಹಿರಿಯ ಸಿವಿಲ್ ನ್ಯಾಯಾದೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಎಂ. ಈಶ್ವರ, ಜಿಲ್ಲಾ ವಕೀಲರ ಸಂಘದ ಅಧ್ಯಕ್ಷರಾದ ರಾಮಸಮುದ್ರ ಪುಟ್ಟಸ್ವಾಮಿ, ಇತರರು ಉಪಸ್ಥಿತರಿದ್ದರು.

## ಇಂದು ವಿದ್ಯುತ್ ವ್ಯತ್ಯಯ

ಮಡಿಕೇರಿ:-ಮೂರ್ನಾಡು 33/11 ಕೆ.ವಿ ವಿದ್ಯುತ್ ವಿತರಣಾ ಉಪಕೇಂದ್ರದ ಕೇಂದ್ರದಿಂದ ಹೊರಹೊಮ್ಮುವ ಎಫ್3 ಮೂರ್ನಾಡು ಫೀಡರ್‌ನಲ್ಲಿ ಜುಲೈ, 14 ರಂದು ಬೆಳಗ್ಗೆ 10 ರಿಂದ ಸಂಜೆ 5 ಗಂಟೆಯವರೆಗೆ ಕೊಡಗು ವಿದ್ಯುತ್ ಜಾಲ ಬಲವರ್ಧನೆ ಹಾಗೂ ಮಳೆಗಾಲ ಮುಂಜಾಗ್ರತಾ ಕಾಮಗಾರಿ ಕೈಗೆತ್ತಿಕೊಳ್ಳುತ್ತಿರುವುದರಿಂದ ಈ ಮಾರ್ಗದಿಂದ ವಿದ್ಯುತ್ ಸರಬರಾಜಾಗುವ ಮೂರ್ನಾಡು ಟೌನ್, ಕಿಗ್ಗಾಲು, ಮುತ್ತಾರ್‌ಮುಡಿ, ಬೇತ್ರಿ ಹಾಗೂ ಸುತ್ತಮುತ್ತಲಿನ ಪ್ರದೇಶದಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ. ಸಾರ್ವಜನಿಕರು ಸಹಕರಿಸುವಂತೆ ಚಾವಿಸನಿನಿ ಕಾರ್ಯ ಮತ್ತು ಪಾಲನೆ ವಿಭಾಗದ ಕಾರ್ಯನಿರ್ವಾಹಕ ಎಂಜಿನಿಯರ್ ರಾಮಚಂದ್ರ ಅವರು ಕೋರಿದ್ದಾರೆ.

ಕರೆಂಟ್ ಇರಲ್ಲ

## ಹಿಮವದ್ ಗೋಪಾಲಸ್ವಾಮಿಗೆ ವಿಶೇಷ ಪೂಜೆ ಸಲ್ಲಿಸಿದ ಶಾಸಕ



ಗುಂಡ್ಲುಪೇಟೆ: ತಾಲ್ಲೂಕಿನ ಪ್ರಸಿದ್ಧ ಪುಣ್ಯಕ್ಷೇತ್ರ ಹಿಮವದ್ ಗೋಪಾಲಸ್ವಾಮಿ ದೇವಸ್ಥಾನಕ್ಕೆ ಶಾಸಕ ಎಚ್.ಎಂ. ಗಣೇಶ್ ಪ್ರಸಾದ್ ಭೇಟಿ ನೀಡಿ ವಿಶೇಷ ಪೂಜೆ ಸಲ್ಲಿಸಿದರು.

ಬಳಿಕ ಮಾತನಾಡಿದ ಅವರು, ತಾಲೂಕಿನಲ್ಲಿ ಮಳೆಯ ಕೊರತೆಯಿಂದ ಬರದ ಛಾಯೆ ಆವರಿಸಿದ್ದು, ಭಗವಂತನ ಕೃಪೆಯಿಂದ ಉತ್ತಮ ಮಳೆಯಾಗಿ ರೈತಾಪಿ ವರ್ಗ ನೆಮ್ಮದಿಯಿಂದ ಬದುಕುವಂತಾಗಲಿ ಹಾಗೂ ಕ್ಷೇತ್ರದ ಜನರಿಗೆ ಒಳಿತಾಗಲಿ ಎಂದು ಪ್ರಾರ್ಥಿಸಿರುವುದಾಗಿ ತಿಳಿಸಿದರು. ಈ ಸಂದರ್ಭದಲ್ಲಿ ದೇವಸ್ಥಾನದ ಪ್ರಧಾನ ಅರ್ಚಕ ಗೋಪಿ ಬುದ್ದಿ, ಚಾಮುಲ್ ನಿರ್ದೇಶಕ ನಂಜುಂಡಪ್ರಸಾದ್, ಮಾಜಿ ಕಾಡಾ ಅಧ್ಯಕ್ಷ ನಂಜಪ್ಪ, ರಾಜಶೇಖರ, ಟಿಎಪಿಸಿಎಂಎಸ್ ಅಧ್ಯಕ್ಷ ಮಡಿವಾಳಪ್ಪ, ಬಸವರಾಜು ಹಾಗೂ ಇತರರು ಉಪಸ್ಥಿತರಿದ್ದರು.

## ಉದ್ಯೋಗಿಗಳಿಂದ ರಕ್ತದಾನ



ಮೈಸೂರು: ಮೈಸೂರಿನ ಕೆಆರ್‌ಎಸ್ ರಸ್ತೆಯಲ್ಲಿರುವ ಮೈಸೂರು ಪಾಲಿಮರ್ಸ್ ಹಾಗೂ ರಬ್ಬರ್ ಪ್ರಾಡಕ್ಸ್ ಸಂಸ್ಥೆಯ 45ನೇ ವರ್ಷದ ಸಂಸ್ಥಾಪನ ದಿನಾಚರಣೆ ಅಂಗವಾಗಿ ಹಾಗೂ ಸಂಸ್ಥೆಯ ಸಂಸ್ಥಾಪಕ ಸಿ.ಡಿ.ನಾಗರಾಜನ್ ರ ಹುಟ್ಟುಹಬ್ಬದ ಹಿನ್ನೆಲೆಯಲ್ಲಿ 300ಕ್ಕೂ ಹೆಚ್ಚು ಸಿಬ್ಬಂದಿ ಸ್ವಯಂ ಪ್ರೇರಿತ ರಕ್ತದಾನ ಮಾಡುವ ಮೂಲಕ ಇತರರಿಗೆ ಮಾದರಿಯಾದರು.

ಸ್ವಯಂ ಪ್ರೇರಿತ ರಕ್ತದಾನ ಶಿಬಿರವನ್ನು ಉದ್ಘಾಟಿಸಿ ಮಾತನಾಡಿದ ಸಂಸ್ಥೆಯ ಸಂಸ್ಥಾಪಕ ಅಧ್ಯಕ್ಷ ಸಿ.ಡಿ.ನಾಗರಾಜನ್ ನಮ್ಮ ಸಂಸ್ಥೆಯಲ್ಲಿ ಕಾರ್ಮಿಕರು ಹಾಗೂ ಮಾಲೀಕರು ಎಂಬ ಭೇದಭಾವವಿಲ್ಲ. ಸಂಸ್ಥೆಯ ಏಳಿಗೆಗಾಗಿ ದುಡಿಯುವವರೆಲ್ಲರೂ ಇಲ್ಲಿ ಮಾಲೀಕರೇ ಈ ಸಂದರ್ಭದಲ್ಲಿ ರಕ್ತದಾನದ ಸಾಮಾಜಿಕ ಕಾರ್ಯದ ಮೂಲಕ ಸಿಬ್ಬಂದಿಗಳು ಸ್ವಯಂ ಪ್ರೇರಿತ ರಕ್ತದಾನ ಮಾಡಿರುವುದು ನಮಗೆ ಖುಷಿ ತಂದಿದೆ. ಈ ನಿಮ್ಮ ಸಾಮಾಜಿಕ ಕಾರ್ಯ ಹೀಗೆ ಮುಂದುವರೆಯಲಿ ಇನ್ನೊಬ್ಬರ ಜೀವಕ್ಕೆ ನೆರವಾಗುವ ಮೂಲಕ ಸಾರ್ಥಕತೆ ಜೀವನ ಹೀಗೆ ಮುಂದುವರೆಸಿ ಎಂದು ಹೇಳಿದರು

ನಂತರ ಮಾತನಾಡಿದ ಜೀವದಾರ ರಕ್ತ ನಿಧಿ ಕೇಂದ್ರದ ನಿರ್ದೇಶಕ ಗಿರೀಶ್, ನಗರದ ಪ್ರತಿಯೊಂದು ಕಾರ್ಖಾನೆಯ ಸಿಬ್ಬಂದಿಗಳು ಇಂತಹ ಸಂದರ್ಭದಲ್ಲಿ ಸ್ವಯಂ ಪ್ರೇರಿತ ರಕ್ತದಾನ ಮಾಡಿದರೆ ಪೂರ್ಣವಾಗಿ ರಕ್ತದ ಕೊರತೆಯನ್ನು ಸಂಪೂರ್ಣವಾಗಿ ನೀಗಿಸಬಹುದು. ರಕ್ತದಾನ ಮಾಡುವ ಮೂಲಕ ನಿಮ್ಮ ಆರೋಗ್ಯ ವೃದ್ಧಿಯನ್ನು ಹೆಚ್ಚಿಸಿಕೊಳ್ಳಬಹುದು ಎಂದು ತಿಳಿಸಿಕೊಟ್ಟರು. ನಿರ್ದೇಶಕಿ ಹೇಮಲತಾ, ಸಂಸ್ಥಾಪಕ ಹಾಗೂ ನಿರ್ದೇಶಕ ಎಸ್.ಆರ್.ಪಾರ್ಥ ಸಾರಥಿ, ನಿರ್ದೇಶಕರಾದ ಗೋದ ಪಾರ್ಥಸಾರಥಿ, ಸಿ.ಎಮ್.ಡಿ ಅರುಣ್ ಕೃಷ್ಣನ್, ಪೊನ್ನಪ್ಪನ್, ನಾಗಭೂಷಣ್ , ಶರಶ್ಚಂದ್ರ ಶೆಟ್ಟಿ ಹಾಜರಿದ್ದರು.

## ರಥಕಟ್ಟುವ ಕಾರ್ಯಕ್ಕೆ ಶಾಸಕರ ಚಾಲನೆ



ಚಾಮರಾಜನಗರ, ಆಷಾಢಮಾಸದ ಅಂಗವಾಗಿ ನಗರದಲ್ಲಿ ಕೆಂಪನಂಜಾಂಬ ಸಮೇತ ಚಾಮರಾಜೇಶ್ವರಸ್ವಾಮಿ ರಥೋತ್ಸವ ಜು.28ರಂದು ನಡೆಯಲಿದ್ದು, ಇದಕ್ಕೆ ಪೂರಕವಾಗಿ ಚಾಮರಾಜೇಶ್ವರಸ್ವಾಮಿ ರಥಕಟ್ಟುವ ಕಾರ್ಯಕ್ರಮಕ್ಕೆ ಶಾಸಕ ಸಿ.ಪುಟ್ಟರಂಗಶೆಟ್ಟಿ ರಥಕ್ಕೆ ಪೂಜೆಸಲ್ಲಿಸುವ ಮೂಲಕ ಚಾಲನೆ ನೀಡಿದರು.

ನವಧಾನ್ಯಗಳಿಗೆ ಪೂಜೆನೆರವೇರಿಸಿ ಮಂತ್ರಘೋಷಗಳೊಂದಿಗೆ ಧ್ವಜಸ್ತಂಭಕ್ಕೆ ಪೂಜೆಸಲ್ಲಿಸಿ ರಥಕ್ಕೆ ಏರಿಸಲಾಯಿತು. ಇದೇವೇಳೆ ಚಾಮರಾಜೇಶ್ವರಸ್ವಾಮಿ ರಥೋತ್ಸವ ಆಷಾಢಮಾಸದಲ್ಲಿ ನಡೆಯು ವ ಏಕೈಕ ರಥೋತ್ಸವ, ರಥೋತ್ಸವಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ಭಕ್ತಾದಿಗಳು ಭಾಗವಯಿಸುತ್ತಾರೆ, ನವವಧುವರರು ಜೊತೆಯಾಗಿ ಆಗಮಿಸಿ ರಥಕ್ಕೆ ಹಣ್ಣುಧವನ ಎಸೆದು, ದೇವರನ್ನು ಪ್ರಾರ್ಥಿಸುತ್ತಾರೆ. ತಮ್ಮ ಇಷ್ಟಾರ್ಥ ಪೂರೈಸಿಕೊಳ್ಳುವುದು ರಥೋತ್ಸವದ ವಿಶೇಷ. ಈವೇಳೆ-ವೆಂಕಟನಾಗಪ್ಪಶೆಟ್ಟಿ ಬಾಬು, ಮಲೆಮಹದೇಶ್ವರಬೆಟ್ಟ ಅಭಿವೃದ್ಧಿ ಪ್ರಾಧಿಕಾರದ ಸದಸ್ಯ ಮರಿಸ್ವಾಮಿ, ಚೂಡಾಸದಸ್ಯ ದ್ವಾರಕಿ, ರಾಜೇಂದ್ರ, ಕೆಡಿಪಿ ಸದಸ್ಯ ಶ್ರೀನಿವಾಸ್, ನಗರಸಭಾ ಮಾಜಿ ಅಧ್ಯಕ್ಷ ಸೋರೇಶ್ ನಾಯಕ, ಕನ್ನಡಪರಸಂಘಟನೆಗಳ ಮುಖಂಡರಾದ ಶಾ.ಮುರಳಿ, ಚಾರಂಶ್ರೀನಿವಾಸಗೌಡ, ಜಯಕುಮಾರ್, ಮಹೇಶ್, ಪಣ್ಯದಹುಂಡಿ ರಾಜು, ಪ್ರಧಾನ ಅರ್ಚಕ ದರ್ಶನ್, ಆನಂತ್‌ಪ್ರಸಾದ್, ದೇವಸ್ಥಾನದ ಆಡಳಿತಧಿಕಾರಿ ರಾಜಶೇಖರ್‌ಮೂರ್ತಿ, ಇತರರು ಭಾಗವಹಿಸಿದ್ದರು.

ಭೀಮನಬೀಡು ಗ್ರಾಮದಲ್ಲಿ ವಿಜೃಂಭಣೆ

## ಬಾಣಂತಿ ಮಾರಮ್ಮ ಜಾತ್ರಾ ಮಹೋತ್ಸವ

ಗುಂಡ್ಲುಪೇಟೆ.: ತಾಲೂಕಿನ ಭೀಮನಬೀಡು ಗ್ರಾಮದಲ್ಲಿ ಗ್ರಾಮ ದೇವತೆ ಬಾಣಂತಿ ಮಾರಮ್ಮನ ಜಾತ್ರಾ ಮಹೋತ್ಸವವು ವಿಜೃಂಭಣೆಯಿಂದ ಭಕ್ತಿಭಾವ ಹಾಗೂ ಸಂಭ್ರಮದಿಂದ ನಡೆಯಿತು.

ಜಾತ್ರೆಯ ಅಂಗವಾಗಿ ಕಳೆದ ಮೂರು ದಿನಗಳಿಂದ ಗ್ರಾಮದಲ್ಲಿ ಹಬ್ಬದ ವಾತಾವರಣ ನಿರ್ಮಾಣವಾಗಿದ್ದು, ವಿವಿಧ ಧಾರ್ಮಿಕ ಹಾಗೂ ಸಾಂಪ್ರದಾಯಿಕ ಕಾರ್ಯಕ್ರಮಗಳು ಭಕ್ತರ ಸಮ್ಮುಖದಲ್ಲಿ ನೆರವೇರಿದವು. ಗ್ರಾಮದ ಪ್ರಮುಖ ರಸ್ತೆಗಳಲ್ಲಿ ಮೆರವಣಿಗೆಯ ಮೂಲಕ ಮಾರಮ್ಮ

ದೇವಿಗೆ ವಿಶೇಷ ಪೂಜೆ, ಅಲಂಕಾರ, ಮಂಗಳಾರತಿ ಸೇರಿದಂತೆ ವಿವಿಧ ಧಾರ್ಮಿಕ ವಿಧಿವಿಧಾನಗಳನ್ನು ನಡೆಸಲಾಯಿತು. ಸುತ್ತಮುತ್ತಲಿನ ಗ್ರಾಮಗಳಿಂದ ಸಾವಿರಾರು ಭಕ್ತರು ಆಗಮಿಸಿ ದೇವಿಯ ದರ್ಶನ ಪಡೆದು ಹರಕೆ ಸಲ್ಲಿಸಿದರು. ಜಾತ್ರೆಯಲ್ಲಿ ಮಹಿಳೆಯರು, ಯುವಕರು ಹಾಗೂ ಗ್ರಾಮಸ್ಥರು ಉತ್ಸಾಹದಿಂದ ಪಾಲ್ಗೊಂಡು ಸಂಭ್ರಮ ಹೆಚ್ಚಿಸಿದರು. ಜಾತ್ರೆ ಹಿನ್ನೆಲೆಯಲ್ಲಿ ಗ್ರಾಮದಲ್ಲಿ ವಿದ್ಯುತ್ ದೀಪಾಲಂಕಾರ ಹಾಗೂ ವಿಶೇಷ ಅಲಂಕಾರ ಮಾಡಲಾಗಿದ್ದು, ಎಲ್ಲೆಡೆ ಹಬ್ಬದ ಕಳೆ ಕಂಡುಬಂತು. ಗ್ರಾಮಸ್ಥರ ಸಹಕಾರದೊಂದಿಗೆ ಜಾತ್ರಾ ಮಹೋತ್ಸವವು ಶಾಂತಿಯುತವಾಗಿ ಹಾಗೂ ವಿಜೃಂಭಣೆಯಿಂದ ನೆರವೇರಿತು.



# ಯೋಜನೆಗಳ ಅನುಷ್ಠಾನಕ್ಕೆ ಸೂಚನೆ

## 15 ಅಂಶಗಳ ಕಾರ್ಯಕ್ರಮ: ಪ್ರಗತಿ ಪರಿಶೀಲನಾ ಸಭೆ

ಮಡಿಕೇರಿ: ಸರ್ಕಾರದ ವಿವಿಧ ಇಲಾಖೆಗಳ ಮೂಲಕ ಅಲ್ಪಸಂಖ್ಯಾತರ ಅಭಿವೃದ್ಧಿಗೆ ನಿಗದಿಯಾಗಿರುವ 'ಪ್ರಧಾನಮಂತ್ರಿ ಅವರ 15 ಅಂಶಗಳ ಕಾರ್ಯಕ್ರಮ'ಗಳ ಪ್ರಗತಿ ಸಾಧಿಸುವಂತೆ ಜಿಲ್ಲಾಧಿಕಾರಿ ಎಸ್.ಜೆ. ಸೋಮಶೇಖರ್ ಅವರು ಅಧಿಕಾರಿಗಳಿಗೆ ಕಟ್ಟುನಿಟ್ಟಿನ ನಿರ್ದೇಶನ ನೀಡಿದ್ದಾರೆ. ನಗರದ ಜಿಲ್ಲಾಧಿಕಾರಿ ಕಚೇರಿಯ ಸಭಾಂಗಣದಲ್ಲಿ ಪ್ರಧಾನಮಂತ್ರಿ ಅವರ 15 ಅಂಶಗಳ ಕಾರ್ಯಕ್ರಮಗಳ ಕುರಿತು ಸೋಮವಾರ ನಡೆದ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಶಿಕ್ಷಣ, ಆರೋಗ್ಯ ಹಾಗೂ ಮೂಲ ಸೌಲಭ್ಯಗಳೂ ಸೇರಿದಂತೆ ವಿವಿಧ ಯೋಜನೆಗಳನ್ನು ಅರ್ಹ ಫಲಾನುಭವಿಗಳಿಗೆ ತಲುಪಿಸುವುದು ಅತ್ಯಗತ್ಯವಾಗಿದೆ. ಈ ನಿಟ್ಟಿನಲ್ಲಿ ಎಲ್ಲಾ ಇಲಾಖಾ ಅಧಿಕಾರಿಗಳು ಸಕಾಲದಲ್ಲಿ ಪ್ರಗತಿ ಸಾಧಿಸಬೇಕು ಎಂದು ಅವರು ಸೂಚಿಸಿದರು.

### ಶಿಕ್ಷಣ, ಮೂಲ ಸೌಲಭ್ಯಗಳಿಗೆ ಒತ್ತು

ಅಲ್ಪಸಂಖ್ಯಾತರಿಗಾಗಿ ಅಂಗನವಾಡಿ, ಶಾಲೆ ಹಾಗೂ ವಿದ್ಯಾರ್ಥಿ ನಿಲಯಗಳ ಅಭಿವೃದ್ಧಿಗೆ ವಿಶೇಷ ಗಮನಹರಿಸಬೇಕು ಹಾಗೂ ಅಗತ್ಯ ಮೂಲ ಸೌಲಭ್ಯಗಳನ್ನು ಕಲ್ಪಿಸಬೇಕು. ನಿವೇಶನ ಇಲ್ಲದಿದ್ದಲ್ಲಿ ಕೂಡಲೇ ಸಂಬಂಧಪಟ್ಟ ಇಲಾಖಾ ಅಧಿಕಾರಿಗಳು ಪ್ರಸ್ತಾವನೆ ಸಲ್ಲಿಸುವಂತೆ ಸೋಮಶೇಖರ್ ಅವರು ಸೂಚಿಸಿದರು. ಅಲ್ಪಸಂಖ್ಯಾತ ವಿದ್ಯಾರ್ಥಿ ನಿಲಯ ಹಾಗೂ ವಸತಿ ನಿಲಯಗಳಲ್ಲಿ ಗುಣಮಟ್ಟದ ಆಹಾರ ಪೂರೈಸಬೇಕು. ಶಾಲಾ-ಕಾಲೇಜುಗಳಿಗೆ ಹತ್ತಿರವಿರುವ ಸ್ಥಳಗಳಲ್ಲಿ ಬಾಡಿಗೆ ಕಟ್ಟಡಗಳನ್ನು ಗುರುತಿಸಿ ವಿದ್ಯಾರ್ಥಿ ನಿಲಯಗಳನ್ನು ಆರಂಭಿಸಲು ಅವಕಾಶ ಕಲ್ಪಿಸಲಾಗಿದ್ದು, ಇದರ ಬಗ್ಗೆ ಸೂಕ್ತ ಮಾಹಿತಿ ದೊರೆಯುವಂತಾಗಬೇಕು ಎಂದು ನಿರ್ದೇಶನ ನೀಡಿದರು. ಸಭೆಯಲ್ಲಿ ಎಮ್ಮೆಮಾಡುವಿನ ಸರ್ಕಾರಿ ಪ್ರೌಢಶಾಲೆಯ ಶೌಚಾಲಯ ಹಾಗೂ ಅಡುಗೆ ಕೋಣೆಯ ದುರಸ್ತಿಯ ಬಗ್ಗೆ ಸಮಿತಿ ಸದಸ್ಯರು ಅಸಮಾಧಾನ ವ್ಯಕ್ತಪಡಿಸಿದಾಗ, ಕೂಡಲೇ ಸಿಎಸ್‌ಆರ್ ನಿಧಿಯಿಂದ ಅನುದಾನ ಒದಗಿಸಿ



ಅಭಿವೃದ್ಧಿಪಡಿಸುವ ಭರವಸೆಯನ್ನು ಜಿಲ್ಲಾಧಿಕಾರಿಗಳು ನೀಡಿದರು. ಜೊತೆಗೆ ಹಾಕತ್ತೂರು ಶಾಲೆಯ ಕಟ್ಟಡ ಉಳಿಸಿಕೊಳ್ಳಲು ಹಾಗೂ ಕೊಡ್ಲಿಪೇಟೆ ವಸತಿ ಶಾಲೆಗಳ ಅಭಿವೃದ್ಧಿಗೂ ಕ್ರಮ ಕೈಗೊಳ್ಳಲು ಸೂಚಿಸಲಾಯಿತು.

### ಕೃಷಿ, ಉದ್ಯೋಗ ಮತ್ತು ಆರ್ಥಿಕ ಸಬಲೀಕರಣ

ಕೃಷಿ ಇಲಾಖೆಯಿಂದ ಒದಗಿಸಲಾಗುವ ಕೃಷಿ ಹೊಂಡಗಳ ಬಗ್ಗೆ ನಿಖರ ಮಾಹಿತಿ ನೀಡಬೇಕು ಹಾಗೂ ಅದರಲ್ಲಿ ಎಷ್ಟು ಮಂದಿ ಅಲ್ಪಸಂಖ್ಯಾತ ಫಲಾನುಭವಿಗಳಿದ್ದಾರೆ ಎಂಬ ಪಟ್ಟಿಯನ್ನು ಒದಗಿಸಬೇಕು ಎಂದು ಡಿಸಿ ಸೂಚಿಸಿದರು. ತೋಟಗಾರಿಕೆ ಇಲಾಖೆಯ ಮೂಲಕ ಹನಿ ನೀರಾವರಿ ಹಾಗೂ ತಾಳೆ ಬೆಳೆ ಯೋಜನೆಗಳ ಪ್ರೋತ್ಸಾಹದಾಯಕ ಕಾರ್ಯಕ್ರಮಗಳನ್ನು ಅರ್ಹರಿಗೆ ತಲುಪಿಸಬೇಕು. ಇದೇ ರೀತಿ ಪಶುಪಾಲನೆ ಹಾಗೂ ಮೀನುಗಾರಿಕೆ ಇಲಾಖೆಗಳ ಮೂಲಕವೂ ಅಗತ್ಯ ನೆರವು ನೀಡಬೇಕು ಎಂದು ತಿಳಿಸಿದರು. ಜಿಲ್ಲಾ ಮತ್ತು ತಾಲೂಕು ಮಟ್ಟದಲ್ಲಿ ಪರಿಣಾಮಕಾರಿಯಾಗಿ ಉದ್ಯೋಗ ಮೇಳಗಳನ್ನು ಏರ್ಪಡಿಸಿ ಯುವಕರಿಗೆ ಉದ್ಯೋಗ ಕಲ್ಪಿಸುವಂತೆ ಉದ್ಯೋಗ ವಿನಿಮಯ ಅಧಿಕಾರಿಗೆ ಜಿಲ್ಲಾಧಿಕಾರಿ ಸಲಹೆ ನೀಡಿದರು. ಇದಲ್ಲದೆ, ರಾಜ್ಯ ಸರ್ಕಾರ ಹಂತ ಹಂತವಾಗಿ 70 ಸಾವಿರ ಹುದ್ದೆಗಳನ್ನು ಭರ್ತಿ ಮಾಡಲು ಮುಂದಾಗಿದ್ದು, ಅಲ್ಪಸಂಖ್ಯಾತ ಯುವಕರಿಗೆ ಸ್ಪರ್ಧಾತ್ಮಕ ಪರೀಕ್ಷೆಗಳಿಗಾಗಿ ಸೂಕ್ತ ತರಬೇತಿ ಒದಗಿಸುವಂತೆ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಅಧಿಕಾರಿಗೆ ನಿರ್ದೇಶನ ನೀಡಿದರು. ಸಭೆಯಲ್ಲಿ ಲೀಡ್ ಬ್ಯಾಂಕ್ ವ್ಯವಸ್ಥಾಪಕ ಗಂಗಾಧರ ನಾಯಕ್, ಡಿಎಚ್‌ಒ ಡಾ. ಸತೀಶ್ ಕುಮಾರ್, ಹಿರಿಯ ಪೊಲೀಸ್ ಅಧಿಕಾರಿ ಐ.ಪಿ. ಮೇದಪ್ಪ, ಡಿಡಿಪಿಐ ಬಸವರಾಜು, ಅಲ್ಪಸಂಖ್ಯಾತರ ಕಲ್ಯಾಣಾಧಿಕಾರಿ ಸಚಿನ್, ವಕ್ಫ್ ಅಧಿಕಾರಿ ಇರ್ಫಾನ್ ಹಾಗೂ ಸಮಿತಿ ಸದಸ್ಯರಾದ ಹನೀಫ್, ಅಬ್ದುಲ್ ನಿಯಾಸ್, ಇಸ್ಮಾಯಿಲ್, ಖಾಲೀದ್ ಹಾಜಿ, ಸೂಫಿಯಾನ್ ಸೇರಿದಂತೆ ಹಲವು ಗಣ್ಯರು ಉಪಸ್ಥಿತರಿದ್ದರು.

### ಸಮನ್ವಯತೆ, ಬ್ಯಾಂಕ್ ಸೌಲಭ್ಯಗಳ ಸದ್ಬಳಕೆ

**ಸಣ್ಣ ಪುಟ್ಟ ವ್ಯಾಪಾರಸ್ಥರಿಗೆ ಅನುಕೂಲವಾಗಲು ಬ್ಯಾಂಕ್‌ಗಳ ಮೂಲಕ ಸಕಾಲದಲ್ಲಿ ಅಲ್ಪಸಂಖ್ಯಾತರಿಗೆ ಸಾಲ ಸೌಲಭ್ಯ ಕಲ್ಪಿಸಬೇಕು. ಅಲ್ಪಸಂಖ್ಯಾತರು ಸಹ ಇತರರಂತೆ ಬದುಕು ಕಟ್ಟಿಕೊಳ್ಳಲು ಸರ್ಕಾರದ ಕಾರ್ಯಕ್ರಮಗಳು ಸಹಕಾರಿಯಾಗಿದ್ದು, ವಿವಿಧ ಇಲಾಖೆಗಳ ಯೋಜನೆಗಳ ಬಗ್ಗೆ ಸಮಗ್ರ ಮಾಹಿತಿ ನೀಡಲು ಎಲ್ಲಾ ಇಲಾಖೆಗಳು ಒಗ್ಗೂಡಿ ಒಂದು ಮಾಹಿತಿ ಕೈಪಿಡಿ (ಕಿರುಪುಸ್ತಕ) ಹೊರತರಬೇಕು ಎಂದು ಜಿಲ್ಲಾಧಿಕಾರಿಗಳು ಸಲಹೆ ನೀಡಿದರು. ಜಿ.ಪಂ. ಸಿಇಒ ಆನಂದ್ ಪ್ರಕಾಶ್ ಮೀನಾ ಅವರು ಮಾತನಾಡಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ಶಾಲಾ ಶಿಕ್ಷಣ, ಅಲ್ಪಸಂಖ್ಯಾತರ ಕಲ್ಯಾಣ, ವಕ್ಫ್, ಕೌಶಲ್ಯಾಭಿವೃದ್ಧಿ, ನಗರಾಭಿವೃದ್ಧಿ, ಕೈಗಾರಿಕೆ ಸೇರಿದಂತೆ ಎಲ್ಲಾ ಇಲಾಖೆಗಳು ಕಾರ್ಯಕ್ರಮಗಳ ಪರಿಣಾಮಕಾರಿ ಅನುಷ್ಠಾನಕ್ಕೆ ಶ್ರಮಿಸಬೇಕು ಎಂದರು.**

## ಅಧಿಕಾರ ಇರಲಿ, ಇಲ್ಲದಿರಲಿ ಜನರೊಂದಿಗೆ ಸದಾ ಇರುತ್ತೇನೆ

### ಗೋಪಾಲ್ ಹೊರೆಯಾಲ

ಗುಂಡ್ಲುಪೇಟೆ: ಅಧಿಕಾರ ಇರಲಿ ಅಥವಾ ಇಲ್ಲದಿರಲಿ, ನಾನು ತಾಲೂಕಿನ ಜನತೆಯೊಂದಿಗೆ ಸದಾ ಇರುತ್ತೇನೆ. ನನ್ನ ಬಳಿ ಬರುವ ಜನರಿಗೆ ನನ್ನ ಕೈಲಾದ ಮಟ್ಟಿಗೆ ಸಹಾಯ ಮಾಡುತ್ತಲೇ ಬಂದಿದ್ದೇನೆ. ಜನಸೇವೆ ಮಾಡಲು ಅಧಿಕಾರವೇ ಇರಬೇಕೆಂದಿಲ್ಲ" ಎಂದು ಮುಖಂಡ ಗೋಪಾಲ್ ಹೊರೆಯಾಲ ಹೇಳಿದರು.

ಪಟ್ಟಣದ ಅಂಬೇಡ್ಕರ್ ಭವನದಲ್ಲಿ ದಲಿತ ಸಮುದಾಯದ ಸಾಧಕ-ಬಾಧಕಗಳ ಕುರಿತು ಆಯೋಜಿಸಿದ್ದ ಸಭೆಯಲ್ಲಿ ಅವರು ಮಾತನಾಡಿದರು.

ಜಿಲ್ಲೆಯಲ್ಲಿ ಡಾ. ಬಿ.ಆರ್. ಅಂಬೇಡ್ಕರ್ ಅವರ ಪ್ರತಿಮೆಗಳಿಗೆ ಮಸಿ ಬಳಿಯುವಂತಹ ಅಹಿತಕರ ಘಟನೆಗಳು ಹೆಚ್ಚಾಗುತ್ತಿರುವುದು ಆತಂಕಕಾರಿ ಬೆಳವಣಿಗೆಯಾಗಿದೆ. ಇಂತಹ ಘಟನೆಗಳನ್ನು ತಡೆಗಟ್ಟಲು ಅಗತ್ಯ ಕ್ರಮಗಳನ್ನು ಕೈಗೊಳ್ಳುವ ಜೊತೆಗೆ, ಸಮುದಾಯದ ಹಿತರಕ್ಷಣೆಗೆ ಎಲ್ಲರೂ ಒಗ್ಗಟ್ಟಿನಿಂದ ಮುಂದಾಗಬೇಕಿದೆ ಎಂದು ಕರೆ ನೀಡಿದರು. ಸಭೆಯಲ್ಲಿ ಮಾಜಿ ಜಿಲ್ಲಾ ಪಂಚಾಯಿತಿ ಸದಸ್ಯ ಬೊಮ್ಮಯ್ಯ, ಕಬ್ಬಹಳ್ಳಿ ನಂಜುಂಡಸ್ವಾಮಿ, ರಾಘವಾಪುರ ಮಹೇಶ್, ಕುನ್ನಭೋಗಯ್ಯ, ಪುರಸಭೆಯ ಮಾಜಿ ಸದಸ್ಯ ಮಲ್ಲರಾಜು, ಅರ್ ಸೋಮಣ್ಣ, ಮುತ್ತಣ್ಣ, ಹಿರಿಕಾಟಿ ಶಿವು, ಸಿದ್ದರಾಜು, ಕೆಂಪರಾಜು, ರಾಜಣ್ಣ, ರಾಜೇಂದ್ರ ಹಂಗಳ, ಮುರುಳಿ ಸೋಮಹಳ್ಳಿ, ನಾಗೇಶ್, ಶಿವಲಿಂಗ, ಸುನಿಲ್, ಪ್ರಕಾಶ್, ಪಾಳ್ಯ ನಾಗರಾಜು, ಮಂಜು (ಚನ್ನವಡೆಯನಪುರ) ಸೇರಿದಂತೆ ವಿವಿಧ ಗ್ರಾಮಗಳಿಂದ ಆಗಮಿಸಿದ್ದ ಗ್ರಾಮಸ್ಥರು ಉಪಸ್ಥಿತರಿದ್ದರು



## ಕಂಬಳ ವಿರೋಧಿಸಿ ವಾಟಾಳ್ ಪ್ರತಿಭಟನೆ

ಮೈಸೂರು: ಈ ಬಾರಿಯ ದಸರಾ ಮಹೋತ್ಸವದಲ್ಲಿ ಕಂಬಳ ಆಯೋಜನೆ ವಿರೋಧಿಸಿ ಮೈಸೂರಿನಲ್ಲಿ ಕನ್ನಡ ಚಳವಳಿ ವಾಟಾಳ್ ಪಕ್ಷದ ಅಧ್ಯಕ್ಷ ವಾಟಾಳ್ ನಾಗರಾಜ್ ನೇತೃತ್ವದಲ್ಲಿ ಪ್ರತಿಭಟನೆ ನಡೆಸಲಾಯಿತು.

ನಗರದ ಹಾರ್ಡಿಂಗ್ ವೃತ್ತದಲ್ಲಿ ಪ್ರತಿಭಟನೆ ನಡೆಸಿ ಮಾತನಾಡಿದ ಅವರು, ಕಂಬಳಕ್ಕೆ ತನ್ನದೇ ಆದ ವಿಶಿಷ್ಟ ಮಹತ್ವವಿದೆ. ಕಂಬಳ ದಕ್ಷಿಣ ಕನ್ನಡದ ಪ್ರಮುಖ ಆಚರಣೆಯಾಗಿದೆ. ಇದನ್ನು ಮೈಸೂರು ದಸರಾ ಮಹೋತ್ಸವದಲ್ಲಿ ಆಯೋಜಿಸುವುದು ಸರಿಯಲ್ಲ. ಮೈಸೂರು ದಸರಾಗೂ ಐತಿಹಾಸಿಕ ಹಿನ್ನೆಲೆ ಇದೆ. ದಸರಾ ಸಾಂಪ್ರದಾಯಿಕ ಆಚರಣೆಗೆ ಸೀಮಿತ ಆಗಬೇಕು. ಯುವ ದಸರಾ ಹೆಸರಿನಲ್ಲಿ ಪರಭಾಷೆಯ ಹಾಡುಗಾರರನ್ನು ಕರೆಸಿ ಹಾಡಿಸುವುದು ಸರಿಯಲ್ಲ ಎಂದರು.

ಫುಟ್ ಪಾತ್ ಒತ್ತುವರಿ ತೆರವಿಗೆ ಮುಂದಾಗಿರುವುದನ್ನು ಖಂಡಿಸಿ, ಏಕಾಏಕಿ ಫುಟ್ ಪಾತ್ ಒತ್ತುವರಿ ತೆರವಿಗೆ ಮುಂದಾಗಿರೋದು ಸರಿಯಲ್ಲ. ಸಿಎಂ ಡಿ ಕೆ ಶಿವಕುಮಾರ್ ಶ್ರೀಮಂತರ ಪರವಾಗಿದ್ದಾರೆ. ಇವರಿಗೆ ಬಡವರ ಕಷ್ಟ ಗೊತ್ತಿಲ್ಲ. ಮೊದಲು ಫುಟ್ ಪಾತ್ ವ್ಯಾಪಾರಿಗಳಿಗೆ ಪರ್ಯಾಯ ವ್ಯವಸ್ಥೆ ಕಲ್ಪಿಸಬೇಕು. ಬೆಂಗಳೂರಿನ ಸದಾಶಿನಗರದಲ್ಲಿ ರಾಜಕಾರಣಿಗಳು ಮಾಡಿಕೊಂಡಿರುವ ಒತ್ತುವರಿ ತೆರವು ಮಾಡಬೇಕು ಎಂದು ಆಗ್ರಹಿಸಿದರು.



## ಕಂಬಳಕ್ಕೆ ಖರ್ಚು ಮಾಡುವ ಹಣದಲ್ಲಿ, ರಸ್ತೆ ಗುಂಡಿ ಮುಚ್ಚಿ

ಚಾಮರಾಜನಗರ, ಮೈಸೂರು ದಸರಾದಲ್ಲಿ ಕಂಬಳ ಮಾಡಲು ಸಿದ್ಧ ಪಡಿಸುತ್ತಿರುವ ಜಾಗಕ್ಕೆ ಖರ್ಚು ಮಾಡುವ ಹಣವನ್ನು ಚಾಮರಾಜನಗರದಲ್ಲಿ ಹಳ್ಳ ಬಿದ್ದಿರುವ ರಸ್ತೆಗಳನ್ನು ಮುಚ್ಚಿಸುವುದಕ್ಕೆ ಖರ್ಚು ಮಾಡಲಿ ಎಂದು ವಿರೋಧ ಪಕ್ಷದ ನಾಯಕ ಆರ್.ಅಶೋಕ್ ಹೇಳಿದರು.



ನಗರದ ಪತ್ರಕರ್ತರ ಭವನದಲ್ಲಿ ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಒಂದೊಂದು ಜಿಲ್ಲೆಗೆ ಒಂದೊಂದು ಸಾಂಸ್ಕೃತಿಕ ಹಿನ್ನೆಲೆ ಇದೆ. ಕಂಬಳ ಉಡುಪಿ, ಮಂಗಳೂರು, ಕಾರವಾರ ಭಾಗದಲ್ಲಿದೆ. ಮೈಸೂರು ದಸರಾ ವಿಜಯನಗರ ಅರಸರ ಕಾಲದಿಂದಲೂ ನಡೆಯುತ್ತಿದೆ. ಇಲ್ಲಿ ಕುಸ್ತಿ, ಚಾಮುಂಡೇಶ್ವರಿ ತಾಯಿ ಪೂಜೆ ಪ್ರಸಿದ್ಧಿಯಾಗಿದೆ. ಮಂಗಳೂರಿನಲ್ಲಿ ದಸರಾ ಮಾಡಿ ಈ ಪದ್ಧತಿಗಳನ್ನೆಲ್ಲ ಹೇರಿಕೆ ಮಾಡಬಾರದು ಎಂದರು. ಈ ಬಾರಿಯ ಮೈಸೂರು ದಸರಾ ಕಾರ್ಯಕ್ರಮದಲ್ಲಿ ಕಂಬಳ ಮಾಡಲು ಸುಮಾರು 10 ಕೋಟಿ ರೂ, ಖರ್ಚು ಮಾಡಲು ಸರ್ಕಾರ ಮುಂದಾಗುತ್ತಿದೆ. ಕಂಬಳಕ್ಕೆ ಹಳ್ಳ ತೋಡಲು ಹಣವನ್ನು ಖರ್ಚು ಮಾಡುವ ಬದಲು ಚಾಮರಾಜನಗರದಲ್ಲಿ ಗುಂಡಿ ಬಿದ್ದಿರುವ ರಸ್ತೆಗಳ ಅಭಿವೃದ್ಧಿಗೆ ಬಳಕೆ ಮಾಡಲಿ ಎಂದು ತಿಳಿಸಿದರು.

## ಆಷಾಢ: ಬೆಟ್ಟದ ಮೆಟ್ಟಿಲು ಸ್ವಚ್ಛಗೊಳಿಸಿದ ಯುವಕರು

**ಮೈಸೂರು:** ಆಷಾಢ ಮಾಸದ ಹಿನ್ನೆಲೆಯಲ್ಲಿ ಚಾಮುಂಡಿ ಬೆಟ್ಟಕ್ಕೆ ಆಗಮಿಸುವ ಲಕ್ಷಾಂತರ ಭಕ್ತರಿಗೆ ಸ್ವಚ್ಛ ಹಾಗೂ ಸುಂದರ ವಾತಾವರಣ ಕಲ್ಪಿಸುವ ಉದ್ದೇಶದಿಂದ ಚಾಮುಂಡಿ ಬೆಟ್ಟದ ಮೆಟ್ಟಲುಗಳು ಮತ್ತು ಗೋಪುರಗಳಿಗೆ ಬಣ್ಣ ಹಾಗೂ ಸುಣ್ಣ ಬಳಿಯುವ ಕಾರ್ಯ ಕೈಗೊಳ್ಳಲಾಗಿದೆ.

ಶ್ರೀ ಚಾಮುಂಡೇಶ್ವರಿ ಅರಳಿಕಟ್ಟೆ ಸೇವಾ ಟ್ರಸ್ಟ್ ನ ಯುವಕರು ಕಳೆದ ಆರು ವರ್ಷಗಳಿಂದ ನಿರಂತರವಾಗಿ ಈ ಸೇವಾ ಕಾರ್ಯವನ್ನು ನಡೆಸುತ್ತಿದ್ದು, ಈ ಬಾರಿಯೂ ಮೆಟ್ಟಲುಗಳು ಹಾಗೂ ಗೋಪುರಗಳನ್ನು ಸ್ವಚ್ಛಗೊಳಿಸಿ ಬಣ್ಣ, ಸುಣ್ಣ ಬಳಿದು ಆಕರ್ಷಕವಾಗಿ ಸಜ್ಜುಗೊಳಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಟ್ರಸ್ಟ್ ಅಧ್ಯಕ್ಷ ಜಿ.ಯದುನಂದನ್, ಆಷಾಢ ಮಾಸದಲ್ಲಿ ಸಾವಿರಾರು ಭಕ್ತರು ಹರಕೆ ತೀರಿಸಲು ಮೆಟ್ಟಲುಗಳ ಮೂಲಕ ತಾಯಿ ಚಾಮುಂಡೇಶ್ವರಿಯ ದರ್ಶನ ಪಡೆಯುತ್ತಾರೆ. ಭಕ್ತಾದಿಗಳು ಬೆಟ್ಟದ ಸ್ವಚ್ಛತೆಯನ್ನು





ಕಾಪಾಡಬೇಕು ಎಂದು ಮನವಿ ಮಾಡಿದರು. ಸ್ನೇಹಿತರೆಲ್ಲರೂ ಸೇರಿ ತಾಯಿ ಚಾಮುಂಡೇಶ್ವರಿ ಸೇವೆ ಮಾಡುವ ಮೂಲಕ ಅಳಿಲು ಸೇವೆ ಸಲ್ಲಿಸುತ್ತಿದ್ದೇವೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಶಿವ ನಾಯಕ್, ಕೃಷ್ಣ, ವೆಂಕಟೇಶ್, ಪಾಪಣ್ಣ, ಧನು, ಮಾದೇಶ್, ವೀರು, ಗಣೇಶ್, ಆಟೋ ಸ್ವಾಮಿ, ಎಂ. ಆರ್.ನಾಗೇಶ್ ಸೇರಿ ಹಲವರು ಭಾಗವಹಿಸಿದ್ದರು.

ಚಾಮರಾಜನಗರ ರೋಟರಿ ಕ್ಲಬ್ ನೂತನ ಅಧ್ಯಕ್ಷ ಅಬ್ದುಲ್ ಅಜೀಜ್ ದೀನಾ ಪದಗ್ರಹಣ

# ಸಮಾಜಸೇವೆಯೇ ರೋಟರಿ ಧ್ಯೇಯ: ಯಶಸ್ವಿ ಎಸ್.ಸೋಮಶೇಖರ್

ಚಾಮರಾಜನಗರ: ರೋಟರಿ ಕ್ಲಬ್‌ನ 2026-27ನೇ ಸಾಲಿನ ನೂತನ ಅಧ್ಯಕ್ಷ ಅಬ್ದುಲ್ ಅಜೀಜ್, ಕಾರ್ಯದರ್ಶಿ ಜಿ.ಅಂಕಶೆಟ್ಟಿ ಮತ್ತು ಪದಾಧಿಕಾರಿಗಳ ಪದಗ್ರಹಣ ನಗರದ ವರನಟ ಡಾ.ರಾಜ್ ಕುಮಾರ್ ಜಿಲ್ಲಾ ರಂಗಮಂದಿರದಲ್ಲಿ ನಡೆಯಿತು.

ಜಿಲ್ಲಾ ಗವರ್ನರ್ ಯಶಸ್ವಿ ಎಸ್. ಸೋಮಶೇಖರ್ ನೂತನ ಅಧ್ಯಕ್ಷ ಅಬ್ದುಲ್ ಅಜೀಜ್ ದೀನಾ ಅವರಿಗೆ ಪದವಿಪ್ರಧಾನ ಮಾಡಿದರು. ಪದಾಧಿಕಾರಿಗಳಾದ ನಿಕಟಪೂರ್ವ ಅಧ್ಯಕ್ಷ ಕಾಗಲವಾಡಿ ಚಂದ್ರು, ಕಾರ್ಯದರ್ಶಿ ಸಿದ್ದರಾಜು, ಜಂಟಿ ಕಾರ್ಯದರ್ಶಿ ಮಹದೇವಪ್ರಸಾದ್, ಖಜಾಂಚಿ ಆರ್.ಎಂ.ಸ್ವಾಮಿ, ದಂಡಾಯುಧಪಾಣಿ, ಎಂ.ರಮೇಶ್, ನಿರ್ದೇಶಕ ರಾದ ಸಂಘ ಸೇವೆ ಜಿ.ಡಿ. ನೇಮಿರಾಜ್, ವೃತ್ತಿ ಸೇವೆ ಬಿ.ರತ್ನಮ್ಮ ಬಸವರಾಜು, ಸಮುದಾಯ ಸೇವೆ ಅರ್.ಎನ್.ರಾಮು, ಅಂತರಾಷ್ಟ್ರೀಯ ಸೇವೆ ರಾಜುವರ್ಗೀಸ್, ಯುವಜನಸೇವೆ ಮಹಾದೇವಸ್ವಾಮಿ ಪದವಿ ಸ್ವೀಕರಿಸಿದರು.

ಸಮಾಜಸೇವೆಯೇ ರೋಟರಿ ಧ್ಯೇಯ: ಪದವಿ ಪ್ರಧಾನ ಮಾಡಿದ ಜಿಲ್ಲಾ ಗವರ್ನರ್ ಯಶಸ್ವಿ ಎಸ್.




ಸೋಮಶೇಖರ್ ಮಾತನಾಡಿ, ಗುಣಮಟ್ಟದ ಶಿಕ್ಷಣ, ಪ್ರಕೃತಿ-ಪರಿಸರ ಸಂರಕ್ಷಣೆ, ಮಹಿಳಾ ಸಬಲೀಕರಣ, ಶುದ್ಧ ಕುಡಿಯುವ ನೀರು ಪೂರೈಕೆ, ಯುವಜನರಿಗೆ ನಾಯಕತ್ವ ತರಬೇತಿ, ಆರೋಗ್ಯ ರಕ್ಷಣೆ ಮೊದಲಾದ ಶಾಶ್ವತ ಪರಿಣಾಮಗಳ ಸೇವಾ ಕಾರ್ಯಗಳನ್ನು ರೋಟರಿ ಕ್ಲಬ್‌ಗಳು ಮಾಡಬೇಕು ಎಂದು ಹೇಳಿದರು. ಅಂತಾರಾಷ್ಟ್ರೀಯ ಸೇವಾ ಸಂಸ್ಥೆಯಾಗಿರುವ ರೋಟರಿ ಸಂಸ್ಥೆಯು 120 ವರ್ಷಗಳ ಇತಿಹಾಸವಿದೆ.

200 ದೇಶಗಳಲ್ಲಿ 35,000 ಕ್ಲಬ್‌ಗಳ ಮೂಲಕ ಸಮಾಜ ಸೇವಾ ಕಾರ್ಯಗಳನ್ನು ಮಾಡುತ್ತಿದೆ. ಕಾಲಕ್ಕೆ ತಕ್ಕಂತೆ ಸೇವೆಯ ದೃಷ್ಟಿಕೋನ ಮತ್ತು ಕಾಳಜಿ ಬದಲಾಗಿದ್ದು ದೀನ-ದಲಿತರು, ನಿರ್ಗತಿಕರ ಮುಖದಲ್ಲಿ ಮಂದಹಾಸ ಮೂಡಿ ಸಮಾಜದಲ್ಲಿ ಶಾಶ್ವತ ಸುಖ-ಶಾಂತಿ, ನೆಮ್ಮದಿ ನೆಲೆಸುವಂತೆ ಮಾಡುವುದೇ ರೋಟರಿ ಕ್ಲಬ್‌ಗಳ ಧ್ಯೇಯವಾಗಿದೆ ಎಂದು ಹೇಳಿದರು.

ನಿರ್ಗಮಿತ ಅಧ್ಯಕ್ಷ ಕಾಗಲವಾಡಿ ಚಂದ್ರು ಮಾತನಾಡಿ, 2025-26ನೇ ಸಾಲಿನ ರೋಟರಿ ಚಾಮ ರಾಜನಗರದ ಅಧ್ಯಕ್ಷರಾಗಿ ಯಶಸ್ವಿಯಾಗಿ ಕಾರ್ಯ ನಿರ್ವಹಿಸಿರುವುದು ಹೆಮ್ಮೆಯ ವಿಷಯವಾಗಿದೆ. ಉಚಿತ ಆರೋಗ್ಯ ತಪಾಸಣಾ ಶಿಬಿರ, ಕಣ್ಣಿನ ತಪಾಸಣೆ ಹಾಗೂ ಶಸ್ತ್ರ ಚಿಕಿತ್ಸಾ ಶಿಬಿರ, ಪ್ರತಿಭಾ ಪುರಸ್ಕಾರ, ಉಚಿತ ಕೃತಕ ಕೈ-ಕಾಲು ಜೋಡಣಾ ಶಿಬಿರ, ಮಹಿಳಾ ಸಬಲೀಕರಣ ಕಾರ್ಯಕ್ರಮ, ಫಲ್ಸ್ ಪೊಲಿಯೋ ಹಾಗೂ ಟಿ.ಆರ್.ಎಫ್. ಗೆ ದೇಣಿಗೆ ಹಾಗೂ ಇತರ ಸಮಾಜಮುಖಿ ಕಾರ್ಯಕ್ರಮಗಳನ್ನು ಗುರುತಿಸಿ ಜಿಲ್ಲೆಯಲ್ಲಿಯೆ ಅತಿ ಹೆಚ್ಚು ಸೇವಾ ಕಾರ್ಯಕ್ರಮಗಳನ್ನು ನಡೆಸಿದ್ದಕ್ಕೆ ನಮ್ಮ ಸಂಸ್ಥೆಗೆ 3181 ಹೈಯೆಸ್ಟ್ ಪ್ರಾಜೆಕ್ಟ್ ಪ್ರಶಸ್ತಿ ಬಂದಿರುವುದಾಗಿ ಹೇಳಿದರು.

ರೋಟರಿ ಸಂಸ್ಥೆ ನೂತನ ಅಧ್ಯಕ್ಷ ಅಬ್ದುಲ್ ಅಜೀಜ್ ಮಾತನಾಡಿ, ನನ್ನ ಒಂದು ಅವಧಿಯಲ್ಲಿ ಅತಿ ಹೆಚ್ಚು ಸೇವಾ ಕಾರ್ಯಕ್ರಮಗಳನ್ನು ಮಾಡುವ ಜೊತೆಗೆ ಚಾಮರಾಜನಗರ ರೋಟರಿ ಕಣ್ಣಿನ ಆಸ್ಪತ್ರೆ ಮಾಡುವ ಗುರಿಯಿಟ್ಟುಕೊಳ್ಳಲಾಗಿದೆ ಎಂದರು. ಕಾರ್ಯಕ್ರಮದಲ್ಲಿ ಸಹಾಯಕ ಜಿಲ್ಲಾ ಗೌರ್ನರ್ ಎಸ್.ರಮೇಶ್, ವಲಯ ಪ್ರತಿನಿಧಿ ಹೆಚ್.ಎಂ.ಅಜೇಯ ಮಾತ ನಾಡಿ, ರೋಟರಿ ಸಂಸ್ಥೆಯ ನೂತನ ಪದಾಧಿಕಾರಿಗಳಿಗೆ ಶುಭ ಕೋರಿದರು. ರೋಟರಿ ಉಚಿತ ಡಯಾಲಿಸಸ್ ಸೇವೆಗೆ ಡಿಯುಡಬ್ಲ್ಯೂಜೆಯಿಂದ 10 ಸಾವಿರದ ಚೆಕ್ : ರೋಟರಿ ಸಂಸ್ಥೆ ಚಾಮರಾಜನಗರ ವತಿಯಿಂದ ನಡೆಸುತ್ತಿರುವ ಉಚಿತ ಡಯಾಲಿಸಿಸ್ ಸೇವೆಗೆ ಒಂದು ದಿನದ ಖರ್ಚು ರೂ. 10,000 ರೂ.ಗಳ ಚೆಕ್ ನ್ನು ಜುಲೈ.1 ರ ಪತ್ರಿಕಾ ದಿನಾಚರಣೆ ಅಂಗವಾಗಿ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘ, ಚಾಮರಾಜನಗರದ ವತಿಯಿಂದ ಸಂಘದ ಅಧ್ಯಕ್ಷ ಆರ್.ಎನ್.ಸಿದ್ದಲಿಂಗಸ್ವಾಮಿ, ರಾಜ್ಯ ಪರಿಷತ್ ಸದಸ್ಯ ಮಹೇಂದ್ರ ರೋಟರಿ ಜಿಲ್ಲಾ ಗೌರ್ನರ್ ಯಶಸ್ವಿ ಎಸ್.ಸೋಮಶೇಖರ್ ಅವರ ಮುಖಾಂತರ ಹಸ್ತಾಂತರ ಮಾಡಿದರು.

### ಸನ್ಮಾನ

ಎಸ್‌ಎಸ್‌ಎಲ್ ಸಿ , ಪಿಯುಸಿ ಪರೀಕ್ಷೆಯ ಹೆಚ್ಚು ಅಂಕ ಪಡೆದಿದ್ದ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ನೀಡಿ ಸನ್ಮಾನಿಸಲಾಯಿತು. ಇದೇ ಸಂದರ್ಭದಲ್ಲಿ ವಿವಿಧ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸಿದ ಸುಹಾಸ್, ಇಮ್ರಾನ್, ಎಸ್.ಪ್ರಸಾದ್, ಡಾ.ಶೈಲಜ ಕೃಪಾನಿಧಿ ಅವರನ್ನು ಸನ್ಮಾನಿಸಲಾಯಿತು. ಕಾರ್ಯಕ್ರಮದಲ್ಲಿ ರೋಟರಿ ಸಂಸ್ಥೆಯ ಪದಾಧಿಕಾರಿಗಳು, ಸದಸ್ಯರು ಭಾಗವಹಿಸಿದ್ದರು.

## ಪೊಲೀಸರ ಕಾರ್ಯಾಚರಣೆ ಸರಗಳ್ಳನ ಬಂಧನ, ಮಾಲು ವಶ"

**ಮಂಡ್ಯ:** ದಿನಾಂಕ:01/07/2026 ರಂದು ಸಂಜೆ 05-45 ಗಂಟೆಯ ಸಮಯದಲ್ಲಿ ಶ್ರೀಮತಿ ಭಾಗ್ಯ.ಎನ್ಕೊಂ ಪಾಂಡು.ಸಿ.ಎಸ್, 63 ವರ್ಷ, ಚೀಣ್ಯಗ್ರಾಮ, ನಾಗಮಂಗಲ ತಾಲ್ಲೂಕುರವರುಚೀಣ್ಯಗ್ರಾಮದ ಹತ್ತಿರಇರುವ ಸೋಮನಳಮ್ಮ ದೇವಸ್ಥಾನದ ಬಳಿ ವಾಕಿಂಗ್ ಮಾಡಿಕೊಂಡು ಹೋಗುತ್ತಿದ್ದಾಗ ಹಿಂದಿನಿಂದ ಮೋಟಾರ್ ಬೈಕ್‌ನಲ್ಲಿ ಬಂದ ವ್ಯಕ್ತಿಯುಅವರಕತ್ತಿನಲ್ಲಿದ್ದ 97 ಗ್ರಾಂತೂಕದಚಿನ್ನದ ಮಾಂಗಲ್ಯ ಸರವನ್ನುಕಿತ್ತುಕೊಂಡು ಹೋಗಿರುತ್ತಾನೆಂದು ನೀಡಿದದೂರಿನ ಮೇರೆಗೆ ನಾಗಮಂಗಲ ಗ್ರಾಮಾಂತರ ಪೊಲೀಸ್‌ಠಾಣೆಯಲ್ಲಿ ಮೊ.ಸಂಖ್ಯೆ 130/2026 ಕಲಂ 309(4) ಬಿ.ಎನ್.ಎಸ್-2023 ರೀತ್ಯಾ ಪ್ರಕರಣದಾಖಲು ಮಾಡಿತನಿಖೆ ಕೈಗೊಳ್ಳಲಾಗಿತ್ತು.

ಈ ಪ್ರಕರಣದ ಆರೋಪಿಗಳ ಪತ್ತೆಯ ಬಗ್ಗೆ ಮಾನ್ಯ ಮಂಡ್ಯಜಿಲ್ಲಾ ಪೊಲೀಸ್‌ಅಧೀಕ್ಷಕರಾದಡಾ.ವಿ.ಜೆ. ಶೋಭಾರಾಣಿಐಪಿಎಸ್‌ರವರ ಮಾರ್ಗದರ್ಶನದಲ್ಲಿ ಮಾನ್ಯ ಶ್ರೀ ತಿಮ್ಮಯ್ಯ ಸಿ.ಈ, ಅಪರಜಿಲ್ಲಾ ಪೊಲೀಸ್‌ಅಧೀಕ್ಷಕರು, ಮಂಡ್ಯಜಿಲ್ಲೆ, ಹಾಗೂ ಶ್ರೀ ಚಲುವರಾಜು.ಬಿ, ಆರಕ್ಷಕಉಪ-ಅಧೀಕ್ಷಕರು, ನಾಗಮಂಗಲ ಉಪವಿಭಾಗರವರ ಮೇಲುಸ್ತುವಾರಿಯಲ್ಲಿ ಹೇಮಂತ್‌ಕುಮಾರ್. ಆರ್ ಸಿಪಿಐ, ನಾಗಮಂಗಲ ಗ್ರಾಮಾಂತರಿ ವೃತ್ತ, ನಾಗಮಂಗಲ ಗ್ರಾಮಾಂತರಠಾಣಾ ಪಿ.ಎಸ್.ಐರವರಾದ ಶ್ರೀ ರಾಜೇಂದ್ರಜೆ, ಶ್ರೀ ಲಕ್ಷಣಕಾಮಣ್ಣನವರ್(ಅಪರಾಧ) ಶ್ರೀ ರವಿ ಅರಳಿಕಟ್ಟಿ, ಪ್ರೋಬೇಷನರಿ ಪಿ.ಎಸ್.ಐ, ಸಿಹೆಚ್ ಸಿಯವರಾದ ಇಂದ್ರಕುಮಾರ್, ಲೋಕೇಶ ಬನವಾಸಿ, ಓಂ ಪ್ರದೀಪ, ಸಿದ್ದೇಗೌಡ, ರವಿಕಿರಣ್, ಲೋಕೇಶ್, ಸಿಪಿಸಿಯವರಾದ ರವಿ, ಸಿದ್ದಪ್ಪ, ಎಂ, ಹನುಮಪ್ಪ ನಾಗೂರ ರವರನ್ನೊಳಗೊಂಡ ತಂಡರಚನೆ ಮಾಡಲಾಗಿತ್ತು.

ಸದರಿ ಪತ್ತೆಕಾರ್ಯದತಂಡವು ದಿನಾಂಕ:08/07/2026 ರಂದು ಬೆಳಿಗ್ಗೆ 08-30 ಗಂಟೆಯ ಸಮಯದಲ್ಲಿ ನಾಗಮಂಗಲ ತಾಲ್ಲೂಕಿನ ತಟ್ಟಹಳ್ಳಿ ಗ್ರಾಮದ ಹತ್ತಿರಅರಣ್ಯ ಪ್ರದೇಶದಲ್ಲಿ ಹಾದು ಹೋಗಿರುವ ಮಾಗಡಿ -ಜಲಸೂರುರಸ್ತೆಯಲ್ಲಿಆರೋಪಿ ವಿನಯ್ ಕುಮಾರ್.ಜಿ.ಸಿ ಬಿನ್ ಚಂದ್ರಶೇಖರ್.ಜಿ.ಬಿ, 21 ವರ್ಷ, ಒಕ್ಕಲಿಗರು, ಬ್ಲಿಂಕಿಟ್‌ನಲ್ಲಿ ಡಿಲಿವರಿ ಕೆಲಸ, ಗಣಿಗೆಗ್ರಾಮ, ಬಸರಾಳು ಹೋಬಳಿ, ಮಂಡ್ಯತಾಲ್ಲೂಕುಈತನನ್ನು ವಶಕ್ಕೆ ಪಡೆದುಕೊಂಡುಆರೋಪಿತನಿಂದ 97.400 ಗ್ರಾಂತೂಕದಚಿನ್ನದ ಮಾಂಗಲ್ಯ ಸರವನ್ನು&ಕೃತ್ಯವೆಸಗಲು ಬಳಸಿದ್ದ ಹಿರೋ ಹೊಂಡಾ ಸಿಡಿ ಡಿಲಕ್ಸ್ ಮೋಟಾರ್ ಬೈಕ್‌ಅನ್ನು ವಶಪಡಿಸಿಕೊಂಡಿದ್ದು, ಇವುಗಳ ಒಟ್ಟು ಮೌಲ್ಯ ಸುಮಾರುರೂ. 10,00,000/-(ಹತ್ತು ಲಕ್ಷರೂ) ರೂ, ಗಳಾಗಿರುತ್ತದೆ.

ನಾಗಮಂಗಲ ಗ್ರಾಮಾಂತರ ಪೊಲೀಸರಅಧಿಕಾರಿ/ಸಿಬ್ಬಂಧಿಯವರನ್ನು ಡಾ. ಶೋಭಾರಾಣಿ ವಿ.ಜೆ.ಐಪಿಎಸ್, ಜಿಲ್ಲಾ ಪೊಲೀಸ್‌ಅಧೀಕ್ಷರು ಮೆಚ್ಚುಗೆ ವ್ಯಕ್ತಪಡಿಸಿರುತ್ತಾರೆ.

## ಬೆಳೆ ರಕ್ಷಣೆಗಾಗಿ ನಾಲೆಗಳಿಗೆ ನೀರು ಬಿಡಿ

# ಮಂಡ್ಯದಲ್ಲಿ ಜೆಡಿಎಸ್ ಪ್ರತಿಭಟನೆ

**ಮಂಡ್ಯ :** ಕೆ.ಆರ್.ಎಸ್ ಅಚ್ಚುಕಟ್ಟು ವ್ಯಾಪ್ತಿಯಲ್ಲಿ ಬೆಳೆದು ನಿಂತಿರುವ ಬೆಳೆಗಳ ರಕ್ಷಣೆಗೆ ಆಗ್ರಹಿಸಿ ಮಂಡ್ಯದಲ್ಲಿ ಜೆಡಿಎಸ್ ಪಕ್ಷದ ನಾಯಕರು ಹಾಗೂ ಕಾರ್ಯಕರ್ತರು ಪತ್ಯೇಕವಾಗಿ ಪ್ರತಿಭಟನೆ ನಡೆಸಿದರು.



ಮಂಡ್ಯನಗರದ ಸಂಜಯ ವೃತ್ತದಲ್ಲಿ ರೈತಸಂಘ ಪ್ರತಿಭಟಿಸಿದರು. ಅರೆಬೆತ್ತಲೆಯಾಗಿ ಕೆಲ ರೈತರು ಪಾಲ್ಗೊಂಡಿದ್ದರು. ಡ್ಯಾಂನಲ್ಲಿ 92 ಅಡಿ ನೀರಿದ್ರು ನಾಲೆಗೆ ನೀರು ಬಿಡುತ್ತಿಲ್ಲ. ಇದರಿಂದಾಗಿ ಕಬ್ಬು ಸೇರಿದಂತೆ ಹಲವು ಬೆಳೆಗಳು ಒಣಗುತ್ತಿವೆ. ಹೀಗಾಗಿ ಕೂಡಲೇ ನೀರು ಬಿಡಬೇಕು ಎಂದು ಆಗ್ರಹಿಸಿ ಹೆದ್ದಾರಿ ಮಧ್ಯವೇ ಕುಳಿತು ಪ್ರತಿಭಟನಾಕಾರರು ಸರ್ಕಾರದ ವಿರುದ್ಧ ಹೋರಾಟ ನಡೆಸಿದರು.

ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ಮಾತನಾಡಿ, ಇವತ್ತು ಸಂಜೆಯೊಳಗೆ ನೀರು ಬಿಡದಿದ್ದರೆ ಹೆಚ್.ಡಿ.ಕುಮಾರಸ್ವಾಮಿ ಅವರ ನೇತೃತ್ವದಲ್ಲಿ ಕೆ.ಆರ್.ಎಸ್ ಗೆ ಮುತ್ತಿಗೆ ಹಾಕಲಾಗುವುದು ಎಂದು ಎಚ್ಚರಿಕೆ ನೀಡಿದರು.

ನಾಲೆಗಳ ವ್ಯಾಪ್ತಿಯಲ್ಲಿ ಈಗ ಕಾಮಗಾರಿ ನಡೆಸಲಾಗುತ್ತಿದೆ, ಯಾರಿಗೋ ದುಡ್ಡು ಮಾಡಿಕೊಡಲು ಕಾಮಗಾರಿ ಕೈಗೊಳ್ಳಲಾಗಿದೆ ಎಂದು ದೂರಿದ ಅವರು, ಬೆಂಗಳೂರಿಗೆ 6ನೇ ಹಂತದಲ್ಲಿ ಕಾವೇರಿ ನೀರು ಕೊಡುವ ಪ್ರಮೇಯವೇ ಇಲ್ಲ, ಕೂಡಲೇ ನಾಲೆಗಳಿಗೆ ನೀರು ಹರಿಸಬೇಕು ಇಲ್ಲವಾದಲ್ಲಿ ಉಗ್ರವಾದ ಪ್ರತಿಭಟನೆ ನಡೆಸಲಾಗುವುದು ಎಂದರು.

ಜೆಡಿಎಸ್ ನಾಯಕ ರವೀಂದ್ರ ಶ್ರೀಕಂಠಯ್ಯ ಮಾತನಾಡಿ, ಸರ್ಕಾರ ಮಾಡಿದ್ದು ಸಾಕು, ಕೂಡಲೇ ನೀರು ಹರಿಸಬೇಕು. ಈ ಹಿಂದೆ ಅಣೆಕಟ್ಟೆಯಲ್ಲಿ 70 ಅಡಿ ನೀರಿದ್ದಾಗಲೂ ನಾಲೆಗಳಿಗೆ ನೀರು ಹರಿಸಿದ ಇತಿಹಾಸವಿದೆ. ಪ್ರಸ್ತುತ 92 ಅಡಿ ನೀಡಿದೆ, ಈಗ ನೀರು ಬಿಡಲು ಸರ್ಕಾರಕ್ಕೆ ಏನು ತೊಂದರೆಯಾಗಿದೆ. ಜಲ ಸಂಪನ್ಮೂಲ ಸಚಿವ ರಾಮಲಿಂಗರೆಡ್ಡಿ ಅವರ ಬಗ್ಗೆ ನಮಗೆ ಗೌರವಿದೆ, ಅವರು ಕೂಡಲೇ ರೈತ ಪರವಾದ ನಿಲು ಪ್ರಕಟಿಸಬೇಕೆಂದು ಆಗ್ರಹಿಸಿದರು.

ಪ್ರತಿಭಟನೆಯಲ್ಲಿ ಶಾಸಕ ಹೆಚ್.ಟಿ.ಮಂಜು, ಮಾಜಿ ಶಾಸಕ ಸುರೇಶ್ ಗೌಡ, ಜೆಡಿಎಸ್ ಮುಖಂಡರಾದ ಬಿ.ಆರ್.ರಾಮಚಂದ್ರು, ಡಿ.ರಮೇಶ್ ಮತ್ತಿತರರು ಭಾಗವಹಿಸಿದ್ದರು.

## ಮಳೆ ಕೊರತೆ ಪರಿಸ್ಥಿತಿ ಎದುರಿಸಲು ಸಿದ್ಧರಾಗಿ

**ರಾಮನಗರ:** ಪ್ರಸಕ್ತ ಮುಂಗಾರಿನಲ್ಲಿ ಮಳೆ ಕೊರತೆ ಉಂಟಾಗುತ್ತಿರುವ ಹಿನ್ನೆಲೆಯಲ್ಲಿ ಜಿಲ್ಲೆಯಲ್ಲಿನ ಪರಿಸ್ಥಿತಿಯನ್ನು ಸಮರ್ಥವಾಗಿ ಎದುರಿಸಲು ಅಗತ್ಯ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳುವಂತೆ ಜಲಸಂಪನ್ಮೂಲ ಸಚಿವ ಹಾಗೂ ಮಂಡ್ಯ ಮತ್ತು ಬೆಂಗಳೂರು ದಕ್ಷಿಣ ಜಿಲ್ಲಾ ಉಸ್ತುವಾರಿ ಸಚಿವ ರಾಮಲಿಂಗಾರೆಡ್ಡಿ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಜಿಲ್ಲಾ ಪಂಚಾಯಿತಿ ಸಭಾಂಗಣದಲ್ಲಿ ಸೋಮವಾರ ನಡೆದ ವಿಪತ್ತು ನಿರ್ವಹಣೆ ಕುರಿತ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಕುಡಿಯುವ ನೀರಿನ ಪೂರೈಕೆ, ಜಾನುವಾರುಗಳಿಗೆ ಮೇವು, ರೈತರಿಗೆ ಅಗತ್ಯ ಕೃಷಿ ಸೌಲಭ್ಯಗಳು ಹಾಗೂ ಬೆಳೆ ವಿಮೆ ಸೇರಿದಂತೆ ಎಲ್ಲ ವಿಷಯಗಳಲ್ಲಿ ಸಂಬಂಧಿತ ಇಲಾಖೆಗಳು ಸಮನ್ವಯದಿಂದ ಕಾರ್ಯನಿರ್ವಹಿಸಬೇಕು ಎಂದರು.

ಬೆಂಗಳೂರು ದಕ್ಷಿಣ ಜಿಲ್ಲೆಯಲ್ಲಿ ಮುಂಗಾರು ಮಳೆಯಲ್ಲಿ ಶೇ.13ರಷ್ಟು ಕೊರತೆ ದಾಖಲಾಗಿದ್ದು, ಮುಂದಿನ ದಿನಗಳಲ್ಲಿ ಪರಿಸ್ಥಿತಿ ಮತ್ತಷ್ಟು ಗಂಭೀರವಾಗುವ ಸಾಧ್ಯತೆ ಇರುವುದರಿಂದ ಗ್ರಾಮೀಣ ಹಾಗೂ ನಗರ ಪ್ರದೇಶಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಉಂಟಾಗದಂತೆ ಅಧಿಕಾರಿಗಳು ಎಚ್ಚರಿಕೆಯಿಂದ ಕಾರ್ಯನಿರ್ವಹಿಸಬೇಕು ಎಂದು ಸೂಚಿಸಿದರು.



## ಅರ್ಜಿ ಆಹ್ವಾನ

ರಾಮನಗರ: 2026-27ನೇ ಸಾಲಿನ ಜಿಲ್ಲಾ ವಲಯ ಫಲಾನುಭವಿ ಆಧಾರಿತ ಯೋಜನೆಗಳಿಗೆ ಸಂಬಂಧಿಸಿದಂತೆ, ಸಹಾಯಧನಕ್ಕೆ ಅರ್ಹ ಫಲಾನುಭವಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ಬೆಂಗಳೂರು ದಕ್ಷಿಣ ಜಿಲ್ಲೆಯ ಮೀನುಗಾರಿಕೆ ಇಲಾಖೆಯಿಂದ ಜಿಲ್ಲಾ ವಲಯದಡಿ ಮೀನುಗಾರಿಕೆ ಸಲಕರಣೆ ಕಿಟ್ಟು ವಿತರಣೆ (ಮೀನು ಹಿಡಿಯುವ ಬಲೆ, ಫೈಬರ್ ಗ್ಲಾಸ್ ಹರಿಗೋಲು ಇತ್ಯಾದಿ), ಮೀನು ಮಾರುಕಟ್ಟೆಗಳ ನಿರ್ಮಾಣ ಮತ್ತು ಮೀನು ಮಾರಾಟಕ್ಕೆ ಸಹಾಯ ಯೋಜನೆಯಡಿ ದ್ವಿಚಕ್ರ ವಾಹನ ಮತ್ತು ಶಾಖ ನಿರೋಧಕ ಪೆಟ್ಟಿಗೆ ಮತ್ತು ತ್ರಿಚಕ್ರ/ನಾಲ್ಕು ಚಕ್ರ ವಾಹನ ಖರೀದಿಗೆ ಸಹಾಯಧನ, ಮೀನುಮರಿ ಖರೀದಿಗೆ ಸಹಾಯಧನ, ಕೆರೆ/ಜಲಾಶಯಗಳ ಅಂಚಿನಲ್ಲಿ ನಿರ್ಮಿಸಿರುವ ಕೊಳಗಳಲ್ಲಿ ಮೀನುಮರಿ ಪಾಲನೆಗೆ ಸಹಾಯಧನ, ಗ್ರಾಮ ಪಂಚಾಯಿತಿ ಕೆರೆಗಳಿಗೆ ಉಚಿತವಾಗಿ ಮೀನುಮರಿ ವಿತರಣೆ, ಕೃಷಿ ಹೊಂಡಗಳಿಗೆ ಉಚಿತವಾಗಿ ಮೀನುಮರಿ ವಿತರಣೆ ಯೋಜನೆಗಳಿಗೆ ಸಹಾಯಧನಕ್ಕಾಗಿ ಅರ್ಹ ಫಲಾನುಭವಿಗಳು ಅರ್ಜಿ ಸಲ್ಲಿಸಬಹುದು.

ಅರ್ಹ ಫಲಾನುಭವಿಗಳು ಅರ್ಜಿಯನ್ನು ಅಗತ್ಯ ದಾಖಲಾತಿಗಳೊಂದಿಗೆ 2026ರ ಆಗಸ್ಟ್ 31 ರೊಳಗೆ ಸಂಬಂಧಪಟ್ಟ ತಾಲ್ಲೂಕು ಮಟ್ಟದ ಮೀನುಗಾರಿಕೆ ಸಹಾಯಕ ನಿರ್ದೇಶಕರ ಕಚೇರಿಗೆ ಸಲ್ಲಿಸಬೇಕು.

## ಆನ್‌ಲೈನ್ ಮೂಲಕ ಅರ್ಜಿ ಆಹ್ವಾನ

**ರಾಮನಗರ:** ಬೆಂಗಳೂರು ದಕ್ಷಿಣ ಜಿಲ್ಲೆಯ ಬರಡನಹಳ್ಳಿಯಲ್ಲಿರುವ ಜವಾಹರ ನವೋದಯ ವಿದ್ಯಾಲಯದಲ್ಲಿ 2027-28ನೇ ಸಾಲಿಗೆ 6ನೇ ತರಗತಿಗೆ ದಾಖಲಾತಿಗಾಗಿ 2026ರ ನವೆಂಬರ್ 28 ರಂದು ನಡೆಯುವ ಜವಾಹರ ನವೋದಯ ವಿದ್ಯಾಲಯದ ಪ್ರವೇಶ ಪರೀಕ್ಷೆಗೆ ಪ್ರಸ್ತುತ 5ನೇ ತರಗತಿಯಲ್ಲಿರುವ ಅರ್ಹ ಅಭ್ಯರ್ಥಿಗಳಿಂದ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ.

ಅರ್ಜಿ ಸಲ್ಲಿಸಲು ಜು. 31 ಕೊನೆಯ ದಿನವಾಗಿದೆ. ಮೀಸಲಾತಿಯು ಕೇಂದ್ರ ಸರ್ಕಾರದ ನಿಯಮದಂತೆ ಅನ್ವಯ. ಅರ್ಜಿಯನ್ನು ವೆಬ್‌ಸೈಟ್ https://cbseitms.rcil.gov.in/nvs/Index/Registration ಮೂಲಕ ಉಚಿತವಾಗಿ ಅರ್ಜಿ ಸಲ್ಲಿಸಬಹುದು.

ಹೆಚ್ಚಿನ ಮಾಹಿತಿಗೆ www.navodaya.gov.inಗೆ ಭೇಟಿ ನೀಡಬಹುದು ಅಥವಾ ಸಹಾಯವಾಣಿ ಸಂಖ್ಯೆ: 8897920060, 9972830864, 9481530823 ಅನ್ನು ಸಂಪರ್ಕಿಸುವಂತೆ ಜವಾಹರ ನವೋದಯ ವಿದ್ಯಾಲಯದ ಪ್ರಾಚಾರ್ಯರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



# ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆ (SIR) ಪ್ರಗತಿ ಪರಿಶೀಲನಾ ಸಭೆ




**ಮಂಡ್ಯ:** ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆ (Special Intensive Revision - SIR) ಕಾರ್ಯದಪ್ರಗತಿಪರಿಶೀಲನಾಸಭೆಯುಇಂದು ಕೆ.ಆರ್.ಪೇಟೆಯಲ್ಲಿ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ನಡೆಯಿತು.

ಸಭೆಯಲ್ಲಿ ಎಸ್‌ಐಆರ್‌ಕಾರ್ಯದ ಪ್ರಗತಿ, ಮನೆ-ಮನೆಗೆ ಭೇಟಿ ನೀಡಿ ಮಾಹಿತಿ ಸಂಗ್ರಹಿಸುವ ಕಾರ್ಯ, ಅರ್ಜಿಗಳ ವಿಲೇವಾರಿ ಹಾಗೂ ಮತದಾರರ ಪಟ್ಟಿಯ ನಿಖರತೆಯನ್ನುಖಚಿತಪಡಿಸುವಕುರಿತು ಜಿಲ್ಲಾಧಿಕಾರಿಗಳು ಅಧಿಕಾರಿಗಳೊಂದಿಗೆ ಸಮಗ್ರವಾಗಿ ಪರಿಶೀಲನೆ ನಡೆಸಿದರು.

ಬಿಎಲ್‌ಒಗಳು, ಬಿಎಲ್‌ಒ ಮೇಲ್ವಿಚಾರಕರು ಹಾಗೂ ಸಂಬಂಧಿಸಿದ ಅಧಿಕಾರಿಗಳು ಭಾರತ ಚುನಾವಣಾ ಆಯೋಗದ ಮಾರ್ಗಸೂಚಿಗಳನ್ನು ಕಟ್ಟುನಿಟ್ಟಾಗಿ ಪಾಲಿಸಿ, ನಿಗದಿತ ಅವಧಿಯೊಳಗೆ ಗುಣಮಟ್ಟದೊಂದಿಗೆಎಸ್‌ಐಆರ್‌ಕಾರ್ಯವನ್ನು ಪೂರ್ಣಗೊಳಿಸಬೇಕು.ಮತದಾರರ ಪಟ್ಟಿಯ ಪರಿಷ್ಕರಣೆಕಾರ್ಯದಲ್ಲಿಯಾವುದೇ ನಿರ್ಲಕ್ಷ್ಯಕ್ಕೆ ಅವಕಾಶ ನೀಡದೆ, ನಿಖರತೆ ಹಾಗೂ ಪಾರದರ್ಶಕತೆ ಯನ್ನುಕಾಪಾಡಿಕೊಂಡುಕಾರ್ಯನಿರ್ವಹಿಸುವಂತೆ ಜಿಲ್ಲಾಧಿಕಾರಿಗಳು ಸೂಚಿಸಿದರು.

ಸಭೆಯಲ್ಲಿಯೋಜನಾ ನಿರ್ದೇಶಕರು, ಜಿಲ್ಲಾ ನಗರಾಭಿವೃದ್ಧಿ ಕೋಶ (PD, DUDC), ಕೆ.ಆರ್.ಪೇಟೆ ವಿಧಾನಸಭಾಕ್ಷೇತ್ರದಚುನಾವಣಾ ನೋಂದಣಾಧಿಕಾರಿ (ERO), ತಹಶೀಲ್ದಾರ್, ಚುನಾವಣಾ ಶಾಖೆಯ ಅಧಿಕಾರಿಗಳು, ಬಿಎಲ್‌ಒ ಮೇಲ್ವಿಚಾರಕರು ಹಾಗೂ ಸಂಬಂಧಿಸಿದ ಅಧಿಕಾರಿಗಳು ಉಪಸ್ಥಿತರಿದ್ದರು.

## ಸಮಾಜಸೇವಾ ಪ್ರಶಸ್ತಿ ಪ್ರದಾನ ಸಮಾರಂಭ ಜು.15ಕ್ಕೆ



**ಮಂಡ್ಯ:** ಜನತಾ ಶಿಕ್ಷಣ ಟ್ರಸ್ಟ್‌ನಿಂದ ನಿತ್ಯ ಸಚಿವ ಕೆ.ವಿ.ಶಂಕರಗೌಡರ 111ನೇ ಜನ್ಮದಿನಾಚರಣೆ ಹಿನ್ನಲೆ ರಾಜ್ಯ ಮಟ್ಟದ ಕೆ.ವಿ.ಶಂಕರಗೌಡ ಮತ್ತು ಕೆ.ಎಸ್.ಸಚ್ಚಿದಾನಂದ ರಂಗಭೂಮಿ ಮತ್ತು ಸಮಾಜಸೇವಾ ಪ್ರಶಸ್ತಿ ಪ್ರದಾನ ಸಮಾರಂಭವನ್ನು ಜು.15ರಂದು ಬೆಳಗ್ಗೆ 11 ಗಂಟೆಗೆ ನಗರದ ಪಿಇಎಸ್ ಇಂಜಿನಿಯರಿಂಗ್ ಕಾಲೇಜಿನ ನಿತ್ಯಸಚಿವ ಕೆ.ವಿ.ಶಂಕರಗೌಡ ತರಬೇತಿ ಮತ್ತು ಉದ್ಯೋಗ ಕೇಂದ್ರದ ಸಭಾಂಗಣದಲ್ಲಿ ಆಯೋಜಿಸಲಾಗಿದೆ ಎಂದು ಟ್ರಸ್ಟಿನ ಟ್ರಸ್ಟಿ ರಾಮಲಿಂಗೇಗೌಡ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಾರ್ಯಕ್ರಮವನ್ನು ಪದ್ಮಶ್ರೀ ಪುರಸ್ಕೃತ ಪುಸ್ತಕ ಮನೆ ಎಂ.ಅಂಕೇಗೌಡ ಅವರು ಉದ್ಘಾಟಿಸಿ ಪ್ರಶಸ್ತಿ ಪ್ರದಾನ ಮಾಡುವರು. ಟ್ರಸ್ಟ್‌ನ ಅಧ್ಯಕ್ಷ ಕೆ.ಎಸ್.ವಿಜಯ್ ಆನಂದ್ ಅಧ್ಯಕ್ಷತೆ ವಹಿಸುವರು. ಕಾರ್ಯದರ್ಶಿ ಎಸ್.ಲ್.ಶಿವಪ್ರಸಾದ್, ಖಜಾಂಚಿ ಚಂದ್ರಕಲಾ ಶಿವಾನಂದ ಉಪಸ್ಥಿತರಿರುವರು.

ರಾಜ್ಯಮಟ್ಟದ ರಂಗಭುಮಿ ಪ್ರಶಸ್ತಿಗೆ ಡಾ.ಎ.ವಿ.ಉಮೇಶ್, ಸಮಾಜಸೇವ ಪ್ರಶಸ್ತಿಗೆ ಡಾ.ಬಿ.ಸುಜಯ್‌ಕುಮಾರ್ ಅವರನ್ನು ಆಯ್ಕೆ ಮಾಡಲಾಗಿದೆ ಎಂದು ಮಾಹಿತಿ ನೀಡಿದರು.


ಗೋಷ್ಠಿಯಲ್ಲಿ ಟ್ರಸ್ಟ್‌ನ ಉಪಾಧ್ಯಕ್ಷ ಎಂ.ಬಿ.ಶ್ರೀಧರ್ ಹಾಜರಿದ್ದರು.

# ರಾಜ್ಯ ದತ್ತಾಂಶದ ಸುರಕ್ಷತೆ, ಸೈಬರ್ ಭದ್ರತಾ ಚೌಕಟ್ಟು ಬಲಪಡಿಸುವುದು ವಿಷಯದ ಕುರಿತು ರಾಜ್ಯ ಮಟ್ಟದ ಕಾರ್ಯಾಗಾರ

**ಬೆಂಗಳೂರು:** ಕರ್ನಾಟಕ ಸರ್ಕಾರದ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ (ಇ-ಆಡಳಿತ), ಇ-ಆಡಳಿತ ಕೇಂದ್ರ (CeG), ಕರ್ನಾಟಕದ ಸೈಬರ್ ಭದ್ರತಾ ಉತ್ಕೃಷ್ಟತಾ ಕೇಂದ್ರ (CySecK)ಮತ್ತು ರಾಷ್ಟ್ರೀಯ ಇ-ಆಡಳಿತ ವಿಭಾಗದ ಸಹಯೋಗದೊಂದಿಗೆ ಬೆಂಗಳೂರಿನ ದಿ ಲಲಿತ್ ಅಶೋಕ್ ಹೋಟೆಲ್‌ನಲ್ಲಿ ರಾಜ್ಯ ದತ್ತಾಂಶಕ್ಕಾಗಿ ಸೈಬರ್ ಭದ್ರತಾ ಚೌಕಟ್ಟನ್ನು ಬಲಪಡಿಸುವುದು ಎಂಬ ವಿಷಯದ ಕುರಿತು ರಾಜ್ಯ ಮಟ್ಟದ ಮಹತ್ವದ ಕಾರ್ಯಾಗಾರವನ್ನು ಹಮ್ಮಿಕೊಳ್ಳಲಾಗಿತ್ತು.

ಕರ್ನಾಟಕದ ಡಿಜಿಟಲ್ ಆಡಳಿತ ವ್ಯವಸ್ಥೆಯಲ್ಲಿ ಸೈಬರ್ ಭದ್ರತೆಯನ್ನು ಬಲಪಡಿಸುವ ಕಾರ್ಯತಂತ್ರಗಳ ಕುರಿತು ಚರ್ಚಿಸಲು 30ಕ್ಕೂ ಹೆಚ್ಚು ಇಲಾಖೆಗಳು, ನಿಗಮಗಳು, ಮಂಡಳಿಗಳು ಮತ್ತು ರಾಜ್ಯ ಸಂಸ್ಥೆಗಳ 80ಕ್ಕೂ ಹೆಚ್ಚು ಹಿರಿಯ ಸರ್ಕಾರಿ ಅಧಿಕಾರಿಗಳು ಈ ಕಾರ್ಯಾಗಾರದಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದರು.

CySecK ಸಂಸ್ಥೆಯ ಕೇಂದ್ರ ಮುಖ್ಯಸ್ಥರಾದ ರಂಜಿತ್ ಮಿಶ್ರಾ ಅವರ ಸ್ವಾಗತ ಭಾಷಣದೊಂದಿಗೆ ಕಾರ್ಯಕ್ರಮ ಆರಂಭವಾಯಿತು. ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯ (ಇ-ಆಡಳಿತ) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳಾದ ಪಂಕಜ್ ಕುಮಾರ್ ಪಾಂಡೆ (IAS), ಕರ್ನಾಟಕ ಇನ್ನೊವೇಶನ್ ಆಂಡ್ ಟೆಕ್ನಾಲಜಿ ಸೊಸೈಟಿಯ (KITS) ವ್ಯವಸ್ಥಾಪಕ ನಿರ್ದೇಶಕರಾದ ಡಾ. ಅವಿನಾಶ್ ಮೆನನ್ ರಾಜೇಂದ್ರನ್ (IAS)ಹಾಗೂ ವಿವಿಧ ಇಲಾಖೆಗಳ ಹಿರಿಯ ಅಧಿಕಾರಿಗಳು ಕಾರ್ಯಕ್ರಮವನ್ನು ಜಂಟಿಯಾಗಿ ಉದ್ಘಾಟಿಸಿದರು.




ಕಾರ್ಯಾಗಾರದಲ್ಲಿ ಭವಿಷ್ಯಕ್ಕಾಗಿ ಸೈಬರ್ ಸನ್ನದ್ಧ ಕರ್ನಾಟಕ ಮತ್ತು ಇ-ಆಡಳಿತಕ್ಕಾಗಿ ಸೈಬರ್ ಸ್ಥಿತಿಸ್ಥಾಪಕತ್ವ ಎಂಬ ಪ್ರಮುಖ ವಿಷಯಗಳ ಕುರಿತು ದಿಕ್ಸೂಚಿ ಭಾಷಣಗಳು ನಡೆದವು. ಇದೇ ಸಮಯದಲ್ಲಿ ನಾಗರಿಕರ ದತ್ತಾಂಶವನ್ನು ರಕ್ಷಿಸುವುದು, ಸೈಬರ್ ಸ್ಥಿತಿಸ್ಥಾಪಕತ್ವವನ್ನು ಬಲಪಡಿಸುವುದು ಮತ್ತು ಸರ್ಕಾರದ ಡಿಜಿಟಲ್ ಮೂಲಸೌಕರ್ಯದ ಭದ್ರತೆಯನ್ನು ಹೆಚ್ಚಿಸಲು ಸಂಘಟಿತ ಕ್ರಮಗಳ ಅಗತ್ಯತೆಯನ್ನು ಈ ವೇಳೆ ಪ್ರಮುಖವಾಗಿ ಒತ್ತಿಹೇಳಲಾಯಿತು.

ತಾಂತ್ರಿಕ ಅವಧಿಗಳಲ್ಲಿ ರಾಜ್ಯ ದತ್ತಾಂಶ ಕೇಂದ್ರದ (State Data Centre) ಸೈಬರ್ ಭದ್ರತೆಯ ಅತ್ಯುತ್ತಮ ಅಭ್ಯಾಸಗಳು ಹಾಗೂ ಕರ್ನಾಟಕದ ಏಕೀಕೃತ ಸೈಬರ್ ಭದ್ರತಾ ಕಾರ್ಯತಂತ್ರದ ಕುರಿತು ಸುದೀರ್ಘ ಚರ್ಚೆ ನಡೆಸಲಾಯಿತು. ಜೊತೆಗೆ, ಪಾಲ್ಗೊಂಡಿದ್ದ ವಿವಿಧ ಇಲಾಖೆಗಳು ತಮ್ಮ ಪ್ರಸ್ತುತ ಸೈಬರ್ ಭದ್ರತಾ ಉಪಕ್ರಮಗಳು ಮತ್ತು ಎದುರಿಸುತ್ತಿರುವ ಕಾರ್ಯಾಚರಣೆಯ ಸವಾಲುಗಳ ಕುರಿತು ಪ್ರಸ್ತುತಿಗಳನ್ನು ನೀಡಿದವು.

ಈ ಕಾರ್ಯಕ್ರಮದ ಪ್ರಮುಖ ಆಕರ್ಷಣೆಯಾಗಿ ಆರು ವಿಶೇಷ ವಿಷಯಾಧಾರಿತ ಚರ್ಚಾಗೋಷ್ಠಿಗಳನ್ನು ಆಯೋಜಿಸಲಾಗಿದ್ದು, ಅಪಾಯ-ಆಧಾರಿತ ಭದ್ರತಾ ಮೇಲ್ವಿಚಾರಣೆ,
SDC ಮತ್ತು KSWAN ಭದ್ರತೆ,
ಸೆಕ್ಯುರಿಟಿ ಆಪರೇಷನ್ಸ್ ಸೆಂಟರ್ (SOC)ಮತ್ತು ರಾಜ್ಯ CSIRT, ಸುರಕ್ಷಿತ ವಿನ್ಯಾಸ ಮತ್ತು ಶೂನ್ಯ ನಂಬಿಕೆ (Zero Trust) ತತ್ವಗಳು, ದತ್ತಾಂಶ ವರ್ಗೀಕರಣ ಹಾಗೂ DPDP ಸನ್ನದ್ಧತೆ ಮತ್ತು ಸೈಬರ್ ಭದ್ರತಾ ಸಾಮರ್ಥ್ಯ ವೃದ್ಧಿ ವಿಷಯಗಳ ಕುರಿತು ವಿಸ್ತ್ರತವಾಗಿ ಚರ್ಚಿಸಲಾಯಿತು:

ಈ ಎಲ್ಲಾ ಚರ್ಚೆಗಳ ಮುಕ್ತಾಯದಲ್ಲಿ, ಸರ್ಕಾರಿ ಇಲಾಖೆಗಳಲ್ಲಿ ಸೈಬರ್ ಭದ್ರತೆಯನ್ನು ಮತ್ತಷ್ಟು ಬಲಪಡಿಸಲು ಆದ್ಯತೆಯ ಶಿಫಾರಸುಗಳು ಮತ್ತು ಅನುಷ್ಠಾನ ಕ್ರಮಗಳನ್ನು ಒಳಗೊಂಡ ಮಹತ್ವದ *"ಜಂಟಿ ಕ್ರಿಯಾ ಯೋಜನೆ"ಯನ್ನು (Joint Action Plan)* ಸಿದ್ಧಪಡಿಸಲಾಯಿತು.

ಸಹಯೋಗ, ಜ್ಞಾನ ಹಂಚಿಕೆ ಮತ್ತು ನಿರಂತರ ಸಾಮರ್ಥ್ಯ ವೃದ್ಧಿಯ ಮೂಲಕ ಸುರಕ್ಷಿತ, ಸ್ಥಿತಿಸ್ಥಾಪಕ ಹಾಗೂ ಭವಿಷ್ಯಕ್ಕೆ ಸನ್ನದ್ಧವಾದ ಡಿಜಿಟಲ್ ಆಡಳಿತ ವ್ಯವಸ್ಥೆಯನ್ನು ನಿರ್ಮಿಸಲು ಕರ್ನಾಟಕ ಸರ್ಕಾರವು ಸಂಪೂರ್ಣ ಬದ್ಧವಾಗಿದೆ ಎಂದು ಕಾರ್ಯಾಗಾರದಲ್ಲಿ ಪುನರುಚ್ಚರಿಸಲಾಯಿತು

## ಜಿಲ್ಲೆಯ ಅಭಿವೃದ್ಧಿಗಾಗಿ ಕಾಂಗ್ರೆಸ್ ಸೇರ್ಪಡೆಯಾಗಿದ್ದೇವೆ: ಪಿ.ಅಶ್ವತ್

**ರಾಮನಗರ:** ಜಿಲ್ಲೆಯ ಸರ್ವಾಂಗೀಣ ಅಭಿವೃದ್ಧಿ ಹಾಗೂ ಜನಪರ ರಾಜಕಾರಣದ ಆಶಯದೊಂದಿಗೆ ಜೆಡಿಎಸ್ ಮುಖಂಡ ಪಿ.ಅಶ್ವತ್ಥ್ ಅವರ ಬೆಂಬಲಿಗರು ಮಾಜಿ ಶಾಸಕ ಕೆ.ರಾಜು ಅವರ ನೇತೃತ್ವದಲ್ಲಿ ಸೋಮವಾರ ಕಾಂಗ್ರೆಸ್ ಪಕ್ಷಕ್ಕೆ ಸೇರ್ಪಡೆಯಾದರು.

ನಗರದ ಜಿಲ್ಲಾ ಕಾಂಗ್ರೆಸ್ ಕಚೇರಿಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಜೆಡಿಎಸ್‌ನ ಹಲವು ಮುಖಂಡರು ಹಾಗೂ ಕಾರ್ಯಕರ್ತರು ಕಾಂಗ್ರೆಸ್ ಪಕ್ಷದ ಬಾವುಟ ಸ್ವೀಕರಿಸಿ ಅಧಿಕೃತವಾಗಿ ಸದಸ್ಯತ್ವ ಪಡೆದರು.

ಈ ಸಂದರ್ಭದಲ್ಲಿ ಮಾತನಾಡಿದ ಪಿ.ಅಶ್ವತ್ಥ್, ಜಿಲ್ಲೆಯ ಅಭಿವೃದ್ಧಿಗಾಗಿ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹಾಗೂ ಮಾಜಿ ಸಂಸದ ಡಿ.ಕೆ.ಸುರೇಶ್ ಅವರ ಜನಪರ ಕಾರ್ಯಗಳು ಪ್ರೇರಣೆಯಾಗಿದ್ದು, ಅವರ ನಾಯಕತ್ವದಲ್ಲಿ ಜಿಲ್ಲೆಯ ಅಭಿವೃದ್ಧಿಗೆ ಕೈಜೋಡಿಸುವ ಉದ್ದೇಶದಿಂದ ಕಾಂಗ್ರೆಸ್ ಸೇರ್ಪಡೆಯಾಗಿದ್ದೇವೆ ಎಂದು ಹೇಳಿದರು.

ಡಿ.ಕೆ.ಸಹೋದರರು ಸಾಮಾನ್ಯ ಕಾರ್ಯಕರ್ತರನ್ನೂ ಗುರುತಿಸಿ ಗೌರವಿಸುವ ನಾಯಕರು. ವಿಶ್ವಾಸ, ನಂಬಿಕೆ ಹಾಗೂ ಪ್ರೀತಿಗೆ ಮೌಲ್ಯ ನೀಡುವ ನಾಯಕತ್ವದೊಂದಿಗೆ ಕೆಲಸ ಮಾಡುವ ಅವಕಾಶ ದೊರೆತಿರುವುದು ಸಂತಸದ ಸಂಗತಿಯಾಗಿದೆ. ಮುಂಬರುವ ಚುನಾವಣೆಯಲ್ಲಿ ಜಿಲ್ಲೆಯ ನಾಲ್ಕೂ ಕ್ಷೇತ್ರಗಳಲ್ಲಿ ಕಾಂಗ್ರೆಸ್ ಅಭ್ಯರ್ಥಿಗಳ ಗೆಲುವಿಗೆ ಶ್ರಮಿಸುವುದಾಗಿ ತಿಳಿಸಿದರು.

ತಾವು ಹಿಂದೆ ಇದ್ದ ಪಕ್ಷದ ಬಗ್ಗೆ ಟೀಕೆ ಮಾಡುವ ಅಗತ್ಯವಿಲ್ಲ. ಜಿಲ್ಲೆಯ ಅಭಿವೃದ್ಧಿ ಮತ್ತು ತಮ್ಮ ಸ್ವಾಭಿಮಾನದ ರಾಜಕಾರಣಕ್ಕೆ ಗೌರವ ಸಿಗುವ ಕಾರಣ ಕಾಂಗ್ರೆಸ್ ಸೇರಿದ್ದೇವೆ ಎಂದು ಹೇಳಿದರು.

ಮಾಜಿ ಶಾಸಕ ಕೆ.ರಾಜು ಮಾತನಾಡಿ, ಪಿ.ಅಶ್ವತ್ ಅವರು ವಿವಿಧ ಕ್ಷೇತ್ರಗಳಲ್ಲಿ ಉತ್ತಮ ಸೇವೆ ಸಲ್ಲಿಸಿ ರಾಮನಗರ ತಾಲ್ಲೂಕಿನಲ್ಲಿ ತಮ್ಮದೇ ಆದ ಜನಬೆಂಬಲ ಗಳಿಸಿದ್ದಾರೆ. ಅವರ ಕಾಂಗ್ರೆಸ್ ಸೇರ್ಪಡೆಯಿಂದ ಪಕ್ಷ ಮತ್ತಷ್ಟು ಬಲಿಷ್ಠವಾಗಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಕಾರ್ಯಕ್ರಮದಲ್ಲಿ ರಾಮನಗರ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಚೇತನ್ ಕುಮಾರ್, ಜಿಲ್ಲಾ ಕಾರ್ಮಿಕ ಘಟಕದ ಅಧ್ಯಕ್ಷ ಪುಟ್ಟರಾಜು, ಮುಖಂಡರಾದ ವಿ.ಎಚ್. ರಾಜು, ರೈಡ್ ನಾಗರಾಜು, ಜಯಣ್ಣ, ರವಿಕುಮಾರ್, ಗೋಪಿ ಸೇರಿದಂತೆ ಹಲವರು ಉಪಸ್ಥಿತರಿದ್ದರು.






## ಎಸ್‌ಐಆರ್ ಪ್ರಗತಿ ಪರಿಶೀಲನೆ, ಗುಣಮಟ್ಟದ ಅನುಷ್ಠಾನಕ್ಕೆ ಸೂಚನೆ

**ಮೈಸೂರು:** ರಾಜ್ಯ ಸ್ವೀಪ್ ನೋಡಲ್ ಅಧಿಕಾರಿ ಪಿ.ಸ್.ವಸ್ತ್ರದ್, ಐಎಎಸ್ ಅವರು ಸೋಮವಾರ ನರಸಿಂಹರಾಜ ವಿಧಾನಸಭಾ ಕ್ಷೇತ್ರದ ವಾರ್ಡ್ ಸಂಖ್ಯೆ 39ರ ಎನ್‌ಸಿಸಿ ಕಾಲೋನಿಯಲ್ಲಿ ಸ್ಥಾಪಿಸಲಾಗಿರುವ ಮತದಾರರ ಸೌಲಭ್ಯ ಕೇಂದ್ರಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಮತಗಟ್ಟೆ ಸಂಖ್ಯೆ 144, 145, 146 ಹಾಗೂ 147 ವ್ಯಾಪ್ತಿಯಲ್ಲಿ ನಡೆಯುತ್ತಿರುವ ವಿಶೇಷ ತೀವ್ರ ಪರಿಷ್ಕರಣೆ ಕಾರ್ಯಕ್ರಮದ ಅಂಗವಾಗಿ ಸ್ಥಾಪಿಸಿರುವ ಕೇಂದ್ರದಲ್ಲಿನ ಸಾರ್ವಜನಿಕರಿಗೆ ಒದಗಿಸಲಾಗುತ್ತಿರುವ ಸೌಲಭ್ಯಗಳು, ಅರ್ಜಿಗಳ ಸ್ವೀಕಾರ, ದಾಖಲೆಗಳ ಪರಿಶೀಲನೆ ಹಾಗೂ ಎಸ್‌ಐಆರ್ ಕಾರ್ಯದ ಪ್ರಗತಿಯನ್ನು ಅವಲೋಕಿಸಿದರು.

ಮತದಾರರೊಂದಿಗೆ ನೇರವಾಗಿ ಸಂವಾದ ನಡೆಸಿದ ಅವರು, ಕೇಂದ್ರದಲ್ಲಿ ದೊರೆಯುತ್ತಿರುವ ಸೇವೆಗಳ ಕುರಿತು ಮಾಹಿತಿ ಪಡೆದು ಸಾರ್ವಜನಿಕರ ಅಭಿಪ್ರಾಯಗಳನ್ನು ಆಲಿಸಿದರು. ಅಲ್ಲದೆ, ಬೂತ್ ಮಟ್ಟದ ಅಧಿಕಾರಿಗಳು (ಬಿಎಲ್‌ಒ), ಬಿಎಲ್‌ಒ ಮೇಲ್ವಿಚಾರಕರು ಹಾಗೂ ಸಹಾಯಕ ಮತದಾರರ ನೋಂದಣಿ ಅಧಿಕಾರಿಗಳೊಂದಿಗೆ ಸಭೆ ನಡೆಸಿ, ಎಸ್‌ಐಆರ್ ಕಾರ್ಯವನ್ನು ಗುಣಮಟ್ಟದಿಂದ, ಪಾರದರ್ಶಕವಾಗಿ ಹಾಗೂ ನಿಗದಿತ ಅವಧಿಯೊಳಗೆ ಪೂರ್ಣಗೊಳಿಸುವಂತೆ ಅಗತ್ಯ ಮಾರ್ಗದರ್ಶನ ನೀಡಿದರು.

ಈ ಸಂದರ್ಭದಲ್ಲಿ ನರಸಿಂಹರಾಜ ವಿಧಾನಸಭಾ ಕ್ಷೇತ್ರದ ಮತದಾರರ ನೋಂದಣಿ ಅಧಿಕಾರಿ ವೆಂಕಟೇಶ್ ಸಿ., ಸಹಾಯಕ ಮತದಾರರ ನೋಂದಣಿ ಅಧಿಕಾರಿಗಳು, ಕಂದಾಯ ಇಲಾಖೆ ಅಧಿಕಾರಿಗಳು, ಬಿಎಲ್‌ಒ ಮೇಲ್ವಿಚಾರಕರು, ಜಿಲ್ಲಾ ಪಂಚಾಯಿತಿ ಅಧಿಕಾರಿಗಳು ಹಾಗೂ ಇತರ ಸಿಬ್ಬಂದಿ ಉಪಸ್ಥಿತರಿದ್ದರು.

# ವೀರ ಶರಣ... ಮೊಲ್ಲೆ ಬೊಮ್ಮಯ್ಯ

ಉಪೇಕ್ಷಿತ ವಚನಕಾರರು



| ವೀಣಾ ಹೇಮಂತ್‌ಗೌಡ ಪಾಟೀಲ್

ಕಲ್ಯಾಣ ಕ್ರಾಂತಿಗೆ ಕಾರಣವಾದದ್ದು ಬಿಜ್ಜಳ ಮಹಾರಾಜನ ಹತ್ಯೆ. ಹಾಗೆ ಬಿಜ್ಜಳ ಮಹಾರಾಜರನ್ನು ಹತ್ಯೆಗೈದ ಇಬ್ಬರು ಸ್ನೇಹಿತರಲ್ಲಿ ಒಬ್ಬಾತ ಶರಣ ಮೊಲ್ಲೆ ಬೊಮ್ಮಯ್ಯನಾದರೆ ಇನ್ನೊಬ್ಬರು ಬೊಮ್ಮಯ್ಯನ ಪ್ರಾಣ ಸ್ನೇಹಿತ ಸೋವಿದೇವ.


ಮೊಲ್ಲೆ ಬೊಮ್ಮಯ್ಯನವರು ಇಂದಿನ ಕೊಪ್ಪಳ ಜಿಲ್ಲೆಯ ಯಲಬುರ್ಗಾ ತಾಲೂಕಿನ ರೇವಣಕಿ ಗ್ರಾಮದವರು. ತಮ್ಮ ಇಷ್ಟದೇವವಾದ ಕಲ್ಲೂರಿನ ಕಲ್ಮೇಶ್ವರ ದೇಗುಲಕ್ಕೆ ಪ್ರತಿದಿನವೂ ಹೂವಿನ ಮಾಲೆಯನ್ನು ತಯಾರಿಸಿ ನೀಡುತ್ತಿದ್ದ ಕಾರಣ ಅವರಿಗೆ ಮೊಲ್ಲೆ ಬೊಮ್ಮಯ್ಯ ಎಂಬ ಹೆಸರಾಯಿತು ಎಂದು ಹೇಳುತ್ತಾರೆ. ಮೂಲತಹ ಹೂಗಾರ ವೃತ್ತಿಯನ್ನು ಅವರು ಕೈಗೊಂಡಿದ್ದರೂ ಕೂಡ ವೇದಶಾಸ್ತ್ರಗಳನ್ನು ಓದಿಕೊಂಡವರಾಗಿದ್ದು ಶಾಲೆಯೊಂದನ್ನು ತೆರೆದಿದ್ದರು. ಅವರ ಜ್ಞಾನದ ಕುರಿತು ನಾಡಿನ ಉದ್ದಗಲಕ್ಕೂ ಖ್ಯಾತಿ ಹಬ್ಬಿದ್ದು ಇದು ಕಲ್ಯಾಣಕ್ಕೂ ತಲುಪಿತ್ತು. ಅಂತೆಯೇ ಬಿಜ್ಜಳ ಮಹಾರಾಜನು ಅವರಿಗೆ ಸಾಕಷ್ಟು ಜಮೀನನ್ನು ಉಂಬಳಿಯಾಗಿ ನೀಡಿ ಶೈಕ್ಷಣಿಕ ಅಭಿವೃದ್ಧಿಗೆ ಸಹಾಯಕವಾಗಿದ್ದರು.... ಆ ಕಾರಣದಿಂದಾಗಿ ಮೊಲ್ಲೆ ಬೊಮ್ಮಯ್ಯನವರು ಕಲ್ಯಾಣದಲ್ಲಿ ನೆಲೆ ನಿಂತಿದ್ದರು.

ಮೊಲ್ಲೆ ಬೊಮ್ಮಯ್ಯನ ಸ್ನೇಹಿತ ಸೋವಿದೇವನ ತಾಯಿ

ಉನ್ನತ ಧ್ಯೇಯಗಳನ್ನು ಹೊಂದಿದ ಹೆಣ್ಣು ಮಗಳು. ಮೊಲ್ಲೆ ಬೊಮ್ಮಯ್ಯನವರಿಗೂ ಕೂಡ ಮಾತೃ ಸ್ವರೂಪಿಯಾಗಿದ್ದಾಕೆ.

ಶರಣ ಸಂಕುಲದಲ್ಲಿ ನಡೆದ ವರ್ಣಸಂಕರ ವಿವಾಹದ ನಂತರ ಉಂಟಾದ ಪ್ರಕ್ಷುಬ್ಧ ಪರಿಸ್ಥಿತಿಯಲ್ಲಿ ನವದಂಪತಿಗಳಾದ ಲಾವಣ್ಯವತಿ ಹಾಗೂ ಶೀಲವಂತರ ಜೊತೆಗೆ ಮಧುವರಸ ಹಾಗೂ ಹರಳಯ್ಯನವರಿಗೆ ಬಿಜ್ಜಳ ಅರಸನ ಮಗ ಯುವರಾಜ ಸೋವಿದೇವ ಎಳೆ ಹೂಟೆ ಶಿಕ್ಷೆಯನ್ನು ನೀಡಿದ. ಇದು ಬಹುತೇಕ ಕಲ್ಯಾಣದ ಜನರಲ್ಲಿ ನೋವನ್ನುಂಟು ಮಾಡಿತು. ಆದರೂ ಅರಸೊತ್ತಿಗೆಯ ಅಧಿಕಾರ ದರ್ಪದ ಮುಂದೆ ಅವರ ಸೊಲ್ಲಡಗಿ ಹೋಗಿತ್ತು.

ಮೊಲ್ಲೆ ಬೊಮ್ಮಯ್ಯನ ಸ್ನೇಹಿತ ಸೋವಿದೇವ ಮೂಲತಃ ಇಂದಿನ ವಿಜಯಪುರ ಜಿಲ್ಲೆಯ ಸಿಂದಗಿ ತಾಲೂಕಿನ ಅಲಮೇಲದ ನಿವಾಸಿಯಾಗಿದ್ದರು. ವರ್ಣಸಂಕರ ಪ್ರಕರಣದ ನಂತರ ಸೋವಿದೇವನ ತಾಯಿ ಸೋವಿ ದೇವ ಹಾಗೂ ಮೊಲ್ಲೆ ಬೊಮ್ಮಯ್ಯನವರಿಗೆ ಅದೊಂದು ದಿನ ಸಾರಿಸಿದ ನೆಲದ ಮೇಲೆ ಊಟವನ್ನು ನೀಡಿ ನಾಯಿ ಉಣ್ಣುವ ರೀತಿಯಲ್ಲಿ ಊಟ ಮಾಡಲು ಹೇಳುತ್ತಾರೆ. ಆಕೆಯ ಈ ಮಾತು ಅವರಿಬ್ಬರಿಗೂ ಶೂಲದಂತೆ ಭಾಸವಾಗುತ್ತದೆ. ಈ ಕುರಿತು ಸೋವಿದೇವನ ತಾಯಿಯನ್ನು ಪ್ರಶ್ನಿಸಿದಾಗ




ಬಿಜ್ಜಳ ಮಹಾರಾಜನು ಮಾಡಿದ ತಪ್ಪನ್ನು ನೋಡಿಯೂ ಕೂಡ ನೀವಿಬ್ಬರೂ ಸುಮ್ಮನೆ ಇರುವುದಕ್ಕೆ ಇದನ್ನು ನಿಮಗೆ ಶಿಕ್ಷೆಯ ರೂಪದಲ್ಲಿ ನಾನು ನೀಡುತ್ತಿರುವೆ. ನೀವಿಬ್ಬರೂ ಸ್ನೇಹಿತರು ಬಿಜ್ಜಳ ಮಹಾರಾಜನ ತಪ್ಪಿಗೆ ಸರಿಯಾದ ಶಿಕ್ಷೆ ನೀಡಿ ಹತ್ಯೆ ಮಾಡಿದ ನಂತರವೇ ನಿಮಗೆ ತಣಿಗೆಯಲ್ಲಿ ಊಟ ನೀಡುತ್ತೇನೆ ಎಂದು ಹೇಳಿದಳು.

ತಾಯಿಯ ಮಾತನ್ನು ಕೇಳಿದ ಮೊಲ್ಲೆ ಬೊಮ್ಮಯ್ಯ ಹಾಗೂ ಸೋವಿದೇವರು ಸಮಯವನ್ನು ಸಾಧಿಸಿದರು. ಅಂದು ಇಳಿ ಸಂಜೆಯ ಹೊತ್ತಿಗೆ ಕಲ್ಯಾಣದ ಅರಮನೆಯ ಮುಂದೆ ಶಿವಶರಣರೆಲ್ಲರೂ ಬಿಜ್ಜಳ ಮಹಾರಾಜನ ವಿರುದ್ಧದ ಶಾಂತಿಯುತ ಪ್ರತಿಭಟನೆ ಕೈಗೊಳ್ಳುವ ನಿರ್ಧಾರದಿಂದ ಮಹಾರಾಜರನ್ನು ಭೇಟಿಯಾಗಲು ಬಂದಿದ್ದರು. ಈಗಾಗಲೇ ಪರಿಸ್ಥಿತಿ ಕೈಮೀರಿ ಹೋಗಿದೆ ಎಂಬುದನ್ನು ಬಿಜ್ಜಳ ಮಹಾರಾಜನು ಅರಿತಿದ್ದನು. ಅದೇ ಸಮಯದಲ್ಲಿ ತಂದೆಯವರನ್ನು ಸುಮ್ಮನಿರಿಸಿದ ಯುವರಾಜ ಸೋವಿದೇವ ಮಂತ್ರಿ ಕೊಂಡೆಯ ಮಂಚಣ್ಣನವರ ಸಲಹೆಯ ಮೇರೆಗೆ ಆಡಳಿತ ಸೂತ್ರಗಳನ್ನು ತನ್ನ ಹಿಡಿತದಲ್ಲಿ ಇಟ್ಟುಕೊಂಡಿದ್ದನು.

ಶರಣರು ಮಹಾರಾಜ ಬಿಜ್ಜಳನನ್ನು ಭೇಟಿಯಾಗಿ ತಮ್ಮ ಅಹವಾಲನ್ನು ಸಲ್ಲಿಸಲು ಬಂದ ಆ ಸೂಕ್ತ ಸಮಯವನ್ನು ಸಾಧಿಸಿ ಅರಮನೆಯ ಒಳಹೊಕ್ಕ ಸೋವಿ ದೇವ ಹಾಗೂ ಮೊಲ್ಲೆ ಬೊಮ್ಮಯ್ಯನವರು ಬಿಜ್ಜಳ ಮಹಾರಾಜನನ್ನು ಖಡ್ಗದಿಂದ ಇರಿದು ಕೊಂದು ಹಾಕಿದರು.

ನಂತರ ಇಬ್ಬರೂ ಸ್ನೇಹಿತರು ಆಗಲಿ ತಮ್ಮ ತಮ್ಮ ಊರುಗಳಿಗೆ ನಡೆದರು. ಆ ಕೂಡಲೇ ಕುದುರೆಯನ್ನು ಏರಿದ ಮೊಲ್ಲೆ ಬೊಮ್ಮಯ್ಯನವರು ತಮ್ಮ ಹುಟ್ಟು ಊರಾದ



ರೇವಣಕಿ ಗ್ರಾಮಕ್ಕೆ ಮರಳಿದರು. ಹಾಗೆ ಅವರು ಮರಳಿ ಬಂದ ನಂತರ ತಮ್ಮ ಖಡ್ಗವನ್ನು ತೊಳೆದ ಸ್ಥಳ ಹಾಗೂ ಅವರು ದಣಿವಾರಿಸಿಕೊಳ್ಳಲು ಕುಳಿತ ಕಟ್ಟೆಯನ್ನು ಇಂದಿಗೂ ಆ ಗ್ರಾಮಗಳ ಜನರು ತೋರಿಸುತ್ತಾರೆ. ಮುಂದೆ ತಮ್ಮ ಬದುಕಿನ ಕೊನೆಯವರೆಗೂ ರೇವಣಕಿ ಪಕ್ಕದ ಕಲ್ಲೂರಿನ ಕಲ್ಮೇಶ್ವರ ದೇಗುಲದಲ್ಲಿ ಬೊಮ್ಮಯ್ಯನವರು ಪೂಜೆ ಪ್ರವಚನ ಹಾಗೂ ಶರಣತತ್ವ ಪ್ರಸಾರ ಕಾರ್ಯಗಳಲ್ಲಿ ತೊಡಗಿಕೊಂಡಿದ್ದರು.

ಇಂದಿಗೂ ಕೂಡ ಕಲ್ಲೂರಿನ ದೇಗುಲದ ಹಿಂಭಾಗದಲ್ಲಿ ಇವರ ಮನೆಯಿದ್ದು ಬೊಮ್ಮಯ್ಯನವರ ಸಂಬಂಧಿಗಳು ತಾವೆಂಬ ಹೆಮ್ಮೆಯನ್ನು ಆ ಕುಟುಂಬದವರು ಹೊಂದಿದ್ದಾರೆ. ಬೊಮ್ಮಯ್ಯನವರು ಬಿಜ್ಜಳ ಮಹಾರಾಜನ ಹತ್ಯೆಗೆ ಬಳಸಿದ ಖಡ್ಗ ಇದೆಂದು ತಮ್ಮ ಬಳಿಯ ಖಡ್ಗ ಒಂದನ್ನು ಅವರು ತೋರುತ್ತಾರೆ.

ಕಲ್ಯಾಣದ ಉಪೇಕ್ಷಿತ ಶರಣರಲ್ಲಿ ಒಬ್ಬರಾಗಿರುವ ಮೊಲ್ಲೆಯ ಬೊಮ್ಮಯ್ಯನವರು ಹಲವಾರು ವಚನಗಳನ್ನು ರಚಿಸಿದ್ದು ಅವರ ವಚನಗಳ ಅಂಕಿತನಾಮ ಕಲದೇವರದೇವ ಎಂದಾಗಿದೆ.

ಇವರ ವಚನಗಳಲ್ಲಿ ಭಕ್ತಿ ಶರಣರ ನಡವಳಿಕೆ ಮತ್ತು ನಿಷ್ಠೆ ಹೇಗಿರಬೇಕು ಎಂಬುದನ್ನು ನಾವು ಕಾಣಬಹುದು.

**ಮಹಾಮಹಿಮ ಶರಣ ಮೊಲ್ಲೆ ಬೊಮ್ಮಯ್ಯನಿಗೆ ಶರಣು ಶರಣಾರ್ಥಿ**

---

# ಕೃಷಿಕರಿಗೆ ಶುಭಾರಂಭ ಮಣ್ಣೆತ್ತಿನ ಅಮವಾಸ್ಯೆ



**ಮಣ್ಣನ್ನು ನಂಬಿ ಮಣ್ಣಿಂದ ಬದುಕೀನ ಮಣ್ಣಿನಗೆ ಮುಂದೆ ಹೊನ್ನು ಅಣ್ಣಯ್ಯ ಮಣ್ಣೇ ಲೋಕದಲ್ಲಿ ಬೆಲೆಯಾದ್ದು.**



| ಗಿರಿಜಾ.ಎಸ್. ದೇಶಪಾಂಡೆ. ಬೆಂಗಳೂರು.

ಎಂಬ ನುಡಿ ಓದಿದಾಗ ನಮ್ಮ ದೇಶದ ಬೆನ್ನೆಲಬಾದ ಪ್ರತಿಯೊಬ್ಬ ಕೃಷಿಕನ ಬದುಕಿನ ಮೂಲ ಈ ಭೂಮಿತಾಯಿ ಅಥವಾ ಅವಳ ಪವಿತ್ರ ಮಣ್ಣು ಎನ್ನಬಹುದು. ವರ್ಷಾವಧಿಯಲ್ಲಿ ಬರುವ 5 ಬಗೆಯ ಮಣ್ಣಿನ ಪೂಜೆಯ ಪ್ರಸಂಗಗಳು ಸಾಮಾನ್ಯವಾಗಿ ಭೂದೇವಿಯ ಆರಾಧನೆಯ ದ್ಯೋತ್ಯಕವಾಗಿದ್ದು ಅದರಲ್ಲಿ ಮಣ್ಣೆತ್ತಿನ ಪೂಜೆಯು ಸರ್ವ ಪ್ರಥಮ ಎನಿಸಿದ ಮಣ್ಣಿನ ಪೂಜೆಯ ಹಬ್ಬವಾಗಿದೆ. ಜೇಷ್ಠ ವದ್ಯ ಬಹುಳ ಅಮವಾಸ್ಯೆಯೆಂದು ವಿಶೇಷವಾಗಿ ಉತ್ತರಕರ್ನಾಟಕದಲ್ಲಿ ,ಮಹಾರಾಷ್ಟ್ರ,ಆಂದ್ರಪ್ರದೇಶದಲ್ಲಿ ವೈಭವಪೂರ್ಣ ಆಚರಿಸಲ್ಪಡುವ ಈ ಹಬ್ಬವನ್ನು ಜಾನಪದ ಹಬ್ಬವೆಂದೂ ಕರೆಯುತ್ತೇವೆ.ಪಂಚಾಂಗದಲ್ಲಿ ಈ ಹಬ್ಬವನ್ನು 'ಮೃತಿಕಾ ವೃಷಭ ಪೂಜಾ' ಎಂದು ಕರೆಯಲಾಗಿದೆ. ಸಕಲ ಜೀವರಾಶಿಗೆ ಅನ್ನ ಹಾಕುವ ಬೂಮಿತಾಯಿಯ ಮಣ್ಣಿನೊಡನೆ ಬೆರೆತು ಮಣ್ಣಾಗಿ ದುಡಿಯುವ ನಮ್ಮ ಬಸವಣ್ಣನಿಗೆ ತಮ್ಮ ಕೃತಜ್ಞತೆ ಸೂಚಿಸಲು ಒಕ್ಕಲು ಮಕ್ಕಳು ಆ ದಿವಸ ಮಣ್ಣಿನಿಂದ ತಯಾರಿಸಿದ ಬಸವಣ್ಣನ ಪೂಜೆ ನೆರವೇರಿಸುತ್ತಾರೆ.


ಭೂಮಿಯಲ್ಲಿ ಬೀಜ ಬಿತ್ತಲು ಬಿತ್ತಿದ ಫಸಲು ಬಂದಮೇಲೆ ಧಾನ್ಯ ರೂಪದಲ್ಲಿ ನಾವು ಪಡೆಯಲು ವೃಷಭನ ಸೇವೆ ಅತ್ಯಂತ ಅವಶ್ಯಕ. ವೃಷಭವು ಶಿವನ ವಾಹನವಾದ್ದರಿಂದ ಶಿವನು ನಂದೀಶನೆಂದು ಪ್ರಶಿದ್ಧನಾಗಿದ್ದಾನೆ.

ಮಹತ್ವ– ಮಣ್ಣೆತ್ತು ಎನ್ನುವ ಪದ ಪ್ರಯೋಗದಲ್ಲಿ ಕಾಣಿಸಿಕೊಳ್ಳುವದು 12 ನೇಯ ಶತಮಾನದ ಶರಣರ ವಚನಗಳಲ್ಲಿ. ವಚನಗಳಲ್ಲಿ ಮಣ್ಣೆತ್ತಿನ ಬಗ್ಗೆ ಪೂಜೆಯ ವಿವರ ಇಲ್ಲದಿದ್ದರೂ ಅವರ ಜೀವಿತ ಕಾಲದಲ್ಲಿ ಮಣ್ಣಿನಿಂದ ಬಸವಣ್ಣನನ್ನು ಸಿದ್ಧಪಡಿಸುವ ಪದ್ಧತಿ ಇತ್ತೆಂಬ ಪುರಾವೆಗಳು ಕಂಡುಬರುತ್ತವೆ. ಅದಕ್ಕೆ ಸಂಭಂದಿಸಿದ ಅನೇಕ ಪುರಾಣ ಕಥೆಗಳೂ ಇವೆ.

*ಪೂಜಾವಿವರ– ಬಸವಣ್ಣನ ಮೂರ್ತಿಗಳನ್ನು ಮಣ್ಣಿನಲ್ಲಿ ತಯಾರಿಸಿ ಅದಕ್ಕೆ ಸುಂದರ ಆಕಾರ,ಮತ್ತು ಬಣ್ಣಗಳಿಂದ ಅಲಂಕೃತನಾದ ಮಣ್ಣೆತ್ತುಗಳಿಗೆ ಹೆಣ್ಣುಮಕ್ಕಳು ಎಲೆಯಲ್ಲಿ ಮಂಟಪದಲ್ಲಿ ಶೃಂಗಾರ ಮಾಡಿ ಊರ ಮಂಟಪದಲ್ಲಿಟ್ಟು ಪೂಜಿಸಿ, ಕಾಯಿ,ಕರ್ಪೂರ,ಊದುಬತ್ತಿ,ಲೋಭಾನ ಹಾಕಿ,ಸಡಗರದಿಂದ ,ಸಂಭ್ರಮದಿಂದ ಕಡಬು,ಪಾಯಸ ನೇವೇದ್ಯ ಮಾಡಿ ಆರತಿ ಬೆಳಗುತ್ತಾರೆ.ತಮ್ಮ ಸಂಸಾರ ಸಮೇತ ಸಂತೋಷದಿಂದ ಊಟ ಮಾಡುತ್ತಾರೆ. ಕೆಲವರ ಮನೆಯಲ್ಲಿ ಮಣ್ಣಿನ ಎತ್ತುಗಳನ್ನು ಕೂಡಿಸಿ ಭಕ್ತಿಯಿಂದ ಪೂಜಿಸಿ ಹಬ್ಬದ ಅಡುಗೆ ಮಾಡಿ ನೇವೇದ್ಯ ಮಾಡಿ ಊಟ ಮಾಡುತ್ತಾರೆ.

ಮಣ್ಣೆತ್ತಿನ ವಿಸರ್ಜನೆ– ಅಮವಾಸ್ಯೆಯ ಮರುದಿನ ಶೇಂಗಾ,ಜೋಳ,ಮೆಣಸಿನಕಾಯಿ ಬೆಳೆದ ಹೊಲಗಳಿಗೆ ಅಡುಗೆಯ ಜೊತೆಗೆ ಮಣ್ಣಿನ ಬಸವಣ್ಣನನ್ನು ತೆಗೆದುಕೊಂಡು ಹೊಲದಲ್ಲಿ ಇರುವ ಮರದಡಿ ಪೂರ್ವಾಭಿಮುಖವಾಗಿ ಪೂಜೆಮಾಡಿ ನೇವೇದ್ಯ ಮಾಡಿ ಬೆಳೆತುಂಬಿದ ಹೊಲದಲ್ಲಿ ಅಡ್ಡಾಡಿ ಚರಗ ಚೆಲ್ಲುವರು.ಇದರಿಂದ ಹೊಲದಲ್ಲಿ ಫಸಲು ಚೆನ್ನಾಗಿ ಬರುವದೆಂಬ ನಂಬಿಕೆ ಇದೆ.ಹೊಲಕ್ಕೆ ಹೋಗಲು ಆಗದವರು ಭಾವಿ,ನದಿ,ಕೆರೆಯಲ್ಲಿ ವಿಸರ್ಜನೆ ಮಾಡುತ್ತಾರೆ. ಮುಂಗಾರು ಬೆಳೆಗಳೆಲ್ಲ ಹುಲುಸಾಗಿ ಬರಲೆಂದು ಹಾರೈಸಿ ಅದರ ಸಮೃದ್ಧಿಗೆ ಎತ್ತುಗಳೇ ಕಾರಣವೆಂದು ಕೃತಜ್ಞತೆಯಿಂದ ಮಣ್ಣೆತ್ತನ್ನು ಅಮವಾಸ್ಯೆಯೆಂದು ಪೂಜಿಸುವ ವಾಡಿಕೆ ಇದೆ.

ಉದ್ದೇಶ– ಭೂಮಿ ಸೇವೆಯನ್ನು ಮನಮುಟ್ಟಿ ಮಾಡುವ ಬಸವಣ್ಣಗಳ ವಿಷಯದಲ್ಲಿ ಕೃತಜ್ಞತೆ ತೋರುವದೇ ಈ ಹಬ್ಬದ ಉದ್ದೇಶ.ತಮ್ಮಲ್ಲಿಯ ಹೊಲಗಳಲ್ಲಿಯ ಬೆಳೆ ಸಮೃದ್ಧವಾಗಿ ಬೆಳೆಯುವದೆಂದೂ ಪಶು ಸಂಪತ್ತಿ ಹೆಚ್ಚುವದೆಂದೂ ಕೃಷಿಕರ ದೃಢವಾದ ನಂಬಿಕೆ.ಈ ಆಚರಣೆ ನಮ್ಮ ಸಂಸ್ಕೃತಿಯ ದೃಷ್ಟಿಯಿಂದ ಬಹು ಅರ್ಥಪೂರ್ಣ ಹಾಗೂ ಔಚಿತ್ಯಪೂರ್ಣ ಹಬ್ಬವಾಗಿದೆ.ನಮ್ಮ ದೇಶದ ಬೆನ್ನೆಲಬಾದ ಕೃಷಿಕರ ಭವಿಷ್ಯ ಮಣ್ಣೆತ್ತಿನ ಬಸವಣ್ಣನಿಂದ ಭವ್ಯವಾಗಲಿ.ದೇಶದಲ್ಲಿ ಬೆಳೆಗಳು ಸಮೃದ್ಧವಾಗಿ ಬಂದು ಅನ್ನದಾತನನ್ನು ರಕ್ಷಿಸಲಿ.




---

# ಮೋಹದ ಯುಗದಲ್ಲಿ ಪರಿಶುದ್ಧ ಪ್ರೀತಿಯ ಅಪರೂಪದ ಕಥೆ



ಇನ್‌ಸ್ಟಾಗ್ರಾಮ್‌ನಲ್ಲಿ ರೀಲ್‌ಗಳನ್ನು ಸ್ಕ್ರೋಲ್ ಮಾಡುತ್ತಿದ್ದ ನನಗೆ, ಹೆಂಡತಿ ದಪ್ಪ ಇದ್ದಾಳೆ ಎಂಬ ಕಾರಣಕ್ಕೆ ಆಕೆಯನ್ನು ಕೊಲೆ ಮಾಡಿದ ಗಂಡನ ಕುರಿತ ಸುದ್ದಿಗಳು ಪದೇ ಪದೇ ಕಾಣಿಸುತ್ತಿದ್ದವು. ಮೊದಲೇ ಇಂದಿನ ಯುವಜನತೆಗೆ ಮದುವೆ ಮತ್ತು ಸಂಸಾರದ ಬಗ್ಗೆ ಅಷ್ಟಾಗಿ ಆಸಕ್ತಿ ಇಲ್ಲಾ.. ಈ ಸಂದರ್ಭದಲ್ಲಿ ಇಂತಹ ಘಟನೆಗಳು ಅವರ ಆತಂಕವನ್ನು ಮತ್ತಷ್ಟು ಹೆಚ್ಚಿಸುತ್ತವೆ.

ಈ ಜಗತ್ತಿನಲ್ಲಿ ಪ್ರೀತಿಗಾಗಿ ಬೆಟ್ಟದಷ್ಟು ಸಾದಿಸಿದವರನ್ನು ನೋಡಿದ್ದೇವೆ, ಹಾಗೆಯೇ ಮೋಹಕ್ಕಾಗಿ ಬೆಟ್ಟದಿಂದ ಕೆಳಗೆ ತಳ್ಳುವವರನ್ನೂ ನೋಡುತ್ತಿದ್ದೇವೆ. ಆದರೆ ಪ್ರೀತಿಗಾಗಿ ಬೆಟ್ಟವನ್ನೇ ಕೊರೆದು ಪುಡಿ ಮಾಡಿ ದಾರಿ ಮಾಡಿದ ಪ್ರೇಮಿಯೊಬ್ಬನ ಕಥೆ ಕೇಳಿದಾಗ, ಆತನ ಪ್ರೀತಿಯೂ ಪ್ರೀತಿಗಾಗಿ ಕಟ್ಟಿದ ಸ್ಮಾರಕಗಳಷ್ಟೇ ಪವಿತ್ರವೆಂದು ನನಗನಿಸಿತು.



| ಅಪೂರ್ವ ಸಾಲ್ಯಾನ್ ಪೆರಿಂಜೆ

ಬಿಹಾರದ ಗಯಾ ಜಿಲ್ಲೆಯ ಗೆಹಲೋರ್ ಎಂಬುದು ಕಲ್ಲು ಬೆಟ್ಟಗಳಿಂದ ಆವೃತವಾದ ಒಂದು ಸಣ್ಣ ಹಳ್ಳಿ. 1934ರಲ್ಲಿ ಆ ಹಳ್ಳಿಯಲ್ಲಿ ದಶರಥ ಮಾಂಜಿ ಎಂಬ ಬಡ ವ್ಯಕ್ತಿ ಜೀವನ ಸಾಗಿಸುತ್ತಿದ್ದರು. ಹಳ್ಳಿಯು ಅಭಿವೃದ್ಧಿ ಹೊಂದಿರದ ಕಾರಣ ಅಲ್ಲಿನ ಜನರು ಅಪಾರ ಕಷ್ಟ ಅನುಭವಿಸುತ್ತಿದ್ದರು. ಮಕ್ಕಳು ಶಾಲೆಗೆ ಹೋಗಬೇಕಾದರೆ ಸುಮಾರು ಎಂಟು ಕಿಲೋಮೀಟರ್ ಕಲ್ಲುಬಂಡೆಗಳ ಹಾದಿಯನ್ನು ದಾಟಬೇಕಾಗಿತ್ತು. ಆಸ್ಪತ್ರೆಗೆ ಹೋಗಬೇಕಾದರೆ ಬೆಟ್ಟವನ್ನು ಸುತ್ತಿ ಸುಮಾರು 75 ಕಿಲೋಮೀಟರ್ ದೂರದ ವಜೀರ್‌ಗಂಜ್ ತಲುಪಬೇಕಾಗುತ್ತಿತ್ತು. ದುಡಿಯಲು ಹೊಲಗಳಿಗೆ ತೆರಳಬೇಕಾದರೂ ಬೆಟ್ಟ ಹತ್ತಿ ಕಲ್ಲುಗಳ ನಡುವೆ ಸಾಹಸಮಯ ನಡಿಗೆ ನಡೆಸಬೇಕಾಗುತ್ತಿತ್ತು.

ದಶರಥರು ಸ್ಥಳೀಯ ಜಮೀನ್ದಾರರ ಹೊಲಗಳಲ್ಲಿ ಕಡಿಮೆ ಕೂಲಿಗೆ ಕೆಲಸ ಮಾಡುತ್ತಿದ್ದರು. ಪ್ರತಿದಿನ ಅವರ ಪ್ರೀತಿಯ ಪತ್ನಿ ಪಾಲ್ಗುಣಿ, ಊಟ ಮತ್ತು ಕುಡಿಯುವ ನೀರನ್ನು ಹೊತ್ತು ಬೆಟ್ಟಗಳನ್ನು ದಾಟಿ ಗಂಡನ ಬಳಿಗೆ ಬರುತ್ತಿದ್ದಳು. ಒಂದು ದಿನ ಆಕೆ ಬೆಟ್ಟದ ಹಾದಿಯಲ್ಲಿ ಜಾರಿ ಬಿದ್ದು ಗಂಭೀರವಾಗಿ ಗಾಯಗೊಂಡಳು. ಅಂದೇ ಆ ಬೆಟ್ಟವನ್ನು ಪುಡಿಮಾಡುವ ಶಪಥವನ್ನು ದಶರಥರು ಕೈಗೊಂಡರು. ತಮ್ಮ ಆಡುಗಳನ್ನು ಮಾರಿ ಉಳಿ ಮತ್ತು ಸುತ್ತಿಗೆಯನ್ನು ಖರೀದಿಸಿದ ಅವರು ಬೆಟ್ಟವನ್ನು ಕೊರೆದು ದಾರಿ ಮಾಡುವ ಕಾಯಕದಲ್ಲಿ ತೊಡಗಿದರು. ಆದರೆ ಪಾಲ್ಗುಣಿ ಕಾಯಿಲೆಯಿಂದ ನಿಧನರಾದಳು. ಆಸ್ಪತ್ರೆ ಹತ್ತಿರದಲ್ಲಿದ್ದರೆ ತನ್ನ ಪತ್ನಿಯನ್ನು ಉಳಿಸಿಕೊಳ್ಳಬಹುದಿತ್ತು ಎಂಬ ನೋವು ದಶರಥರನ್ನು ಇನ್ನಷ್ಟು ದೃಢಗೊಳಿಸಿತು. ಅವರು ಬರೋಬ್ಬರಿ 22 ವರ್ಷಗಳ ಕಾಲ ದೈತ್ಯಾಕಾರದ ಬೆಟ್ಟವನ್ನು ಉಳಿ ಮತ್ತು ಸುತ್ತಿಗೆಯಿಂದ ಕೊರೆದು, 1960ರಲ್ಲಿ ಆರಂಭಿಸಿದ ಕೆಲಸವನ್ನು 1982ರಲ್ಲಿ ಪೂರ್ಣಗೊಳಿಸಿ ಪ್ರೀತಿಯ ನಿಜವಾದ ಅರ್ಥವನ್ನು ಜಗತ್ತಿಗೆ ತೋರಿಸಿದರು.


ಅವರ ಹಳ್ಳಿಯ ಜನರು ಅವರನ್ನು "ಬೆಟ್ಟವನ್ನು ಚಲಿಸಿದ ಮನುಷ್ಯ" ಎಂದು ಕರೆದರು. ಇಂದು ಆ ಹಳ್ಳಿಗೆ "ದಶರಥ್ ನಗರ" ಎಂಬ ಹೆಸರೂ ಬಂದಿದೆ. ಇದು ಕೇವಲ ಪ್ರೀತಿಯ ಕಥೆಯಲ್ಲ; ಮಾನವೀಯತೆ, ಸಂಕಲ್ಪ ಮತ್ತು ಶ್ರಮದ ಅಪೂರ್ವ ದ್ಯೋತಕವಾಗಿದೆ.

ನೇಮಿಚಂದ್ರರ ಬದುಕು ಬದಲಾಯಿಸಬಹುದು 3 ಪುಸ್ತಕದಲ್ಲಿ ಈ ಕಥೆಯನ್ನು ಓದಿ ತಿಳಿದುಕೊಂಡೆ. ಈ ಜಗತ್ತಿನಲ್ಲಿ ಇಂತಹ ಪರಿಶುದ್ಧ ಪ್ರೀತಿಯೂ ಇದೆ ಎಂಬುದನ್ನು ತಿಳಿದು ಮನಸ್ಸಿಗೆ ಅಪಾರ ಸಂತೋಷವಾಯಿತು. ಇಲ್ಲಿ ಪ್ರೀತಿ ಮಾತ್ರವಲ್ಲ, ಮಾನವೀಯತೆ ಮತ್ತು ಪರಿಶ್ರಮದ ಅಸಾಧಾರಣ ಶಕ್ತಿಯೂ ಅಡಗಿದೆ.



---

# ಕಾಡಿನ ದನಿಗೆ ಸಂದ ಗೌರವ



| ಡಾ.ಸುಧಾಕರ.ಜಿ.ಲಕ್ಕವಳ್ಳಿ

ಸ್ಫೂರ್ತಿ ಸುಧೆ - 67

ಜಾರ್ಖಂಡ್‌ನ ಬೆಟ್ಟ–ಕಾಡುಗಳ ನೋವಿಗೆ ಒಂದು ದನಿ ಇತ್ತು. ಅದಕ್ಕೆ ಹೆಸರು – ಶಿಬು ಸೋರೆನ್. 2026ರ ಪದ್ಮಭೂಷಣ ಈಗ ಆ ದನಿಗೆ ಸಂದಿದೆ.ಲಕ್ಷಾಂತರ ಆದಿವಾಸಿಗಳ ಪಾಲಿಗೆ ಇವರು ಕೇವಲ ನಾಯಕರಲ್ಲ, ?ದಿಶೋಮ್ ಗುರು?– ದಾರಿ ತೋರುವ ತಂದೆ. ಸಾಲಗಾರರ ದಬ್ಬಾಳಿಕೆ,ಕಾಡಿನ ಕಾನೂನಿನ ಅನ್ಯಾಯ ಕಂಡಾಗ ಯುವಕನಾಗಿಯೇ ಕೈಗೆ ಕೋಲು ಹಿಡಿದರು.ನೀರು, ಕಾಡು, ಭೂಮಿ – ಇದು ನಮ್ಮ ಹಕ್ಕು ಎಂದು ಬದುಕನ್ನೇ ಹೋರಾಟಕ್ಕೆ ಮುಡಿಪಾಗಿಟ್ಟರು.

ಮಹುವಾ ಮರದ ಕೆಳಗೆ ಅಕ್ಷರ ಕಲಿಸಿದರು. ಕುಡಿತದ ಚಟದ ವಿರುದ್ಧ ಹಳ್ಳಿ ಹಳ್ಳಿಗೆ ಜಾಗೃತಿ ಮೂಡಿಸಿದರು. ಕಾಡಿನ ಮಕ್ಕಳ ಕಣ್ಣಲ್ಲಿ ಸ್ವಾಭಿಮಾನದ ಬೆಳಕು ಹಚ್ಚಿದರು. ಆ ಹೋರಾಟ ಸುಮ್ಮನೆ ನಿಲ್ಲಲಿಲ್ಲ. ವರ್ಷಗಳ ಹಠದ ಫಲವಾಗಿ ಪ್ರತ್ಯೇಕ ಜಾರ್ಖಂಡ್ ರಾಜ್ಯ ಹುಟ್ಟಿತು. ಹಳ್ಳಿಯ ಗುಡಿಸಲಿನ ನೋವು ಮೊದಲ ಬಾರಿಗೆ ದೆಹಲಿಯ ಸಂಸತ್ತಿನವರೆಗೆ ಕೇಳಿಸಿತು. ಬಡತನದ ನೆಲದಿಂದ ಹೊರಟ ದನಿ, ದೇಶದ ಆಡಳಿತದ ಮಧ್ಯದಲ್ಲಿ ಮೊಳಗಿತು.

ಮೂರು ಬಾರಿ ಮುಖ್ಯಮಂತ್ರಿ, ಹಲವು ಬಾರಿ ಸಂಸದ, ಕೇಂದ್ರ ಕಲ್ಲಿದ್ದಲು ಸಚಿವ. ಆದರೆ ಕುರ್ಚಿಯನ್ನು ಅವರು ಸೇವೆಯ ಸಾಧನವನ್ನಾಗಿ ಮಾಡಿದರು. ಕಾನೂನಿನ ಪುಸ್ತಕವನ್ನು ಬಡವರ ಬಾಗಿಲಿಗೆ ತೆಗೆದುಕೊಂಡು ಹೋದರು. ಅಧಿಕಾರ ಎಂದರೆ ಫೋಟೋ ಅಲ್ಲ, ಅದು ಬಡವರ ಕಣ್ಣೀರು ಒರೆಸುವ ಕೆಲಸ ಎಂದು ತೋರಿಸಿಕೊಟ್ಟರು.

ಈ ಪದ್ಮಭೂಷಣ ಒಬ್ಬ ವ್ಯಕ್ತಿಗೆ ಮಾತ್ರವಲ್ಲ. ಇದು ಕಾಡಿನ ಹೋರಾಟಕ್ಕೆ, ಆದಿವಾಸಿ ಸಂಸ್ಕೃತಿಗೆ, ಮಣ್ಣಿನ ಮಕ್ಕಳ ಹಕ್ಕಿಗೆ ಸಂದ ಗೌರವ. ಶಿಬು ಸೋರೆನ್ ಅವರ ಬದುಕು ಹೇಳುವ ಪಾಠ ಸ್ಪಷ್ಟ: ಆಡಳಿತದ ಸ್ಥಾನ ಜನರ ನೋವಿಗೆ ಉತ್ತರವಾಗಬೇಕು. ಆಗ ಮಾತ್ರ ಕಾಡಿನ ದಾರಿಯೇ ದೇಶದ ದಾರಿಯಾಗುತ್ತದೆ.



---

# ಕ್ಷೇತ್ರದ ವ್ಯಾಪ್ತಿಯ ಗ್ರಾಮಗಳ ಅಭಿವೃದ್ಧಿಗೆ ಪ್ರಾಮಾಣಿಕ ಪ್ರಯತ್ನ

**ಮೈಸೂರು:** ಚಾಮುಂಡೇಶ್ವರಿ ಕ್ಷೇತ್ರದ ವ್ಯಾಪ್ತಿಗೆ ಬರುವ ಗ್ರಾಮಗಳ ಸರ್ವಾಂಗೀಣ ಅಭಿವೃದ್ಧಿಗೆ ಪ್ರಾಮಾಣಿಕ ಪ್ರಯತ್ನ ಮಾಡುತ್ತಿದ್ದು, ಪ್ರತಿಯೊಂದು ಗ್ರಾಮಗಳಿಗೂ ಮೂಲ ಸೌಕರ್ಯ ಒದಗಿಸಲಾಗುವುದು ಎಂದು ಶಾಸಕ ಜಿ.ಟಿ.ದೇವೇಗೌಡ ಭರವಸೆ ನೀಡಿದರು.

ಕೆಲ್ಲಹಳ್ಳಿ ಮತ್ತು ಗುಜ್ಜೇಗೌಡನಪುರ ಗ್ರಾಮಗಳ ಸಮಗ್ರ ಅಭಿವೃದ್ಧಿಗೆ 3 ಕೋಟಿ ರೂ. ವೆಚ್ಚದಲ್ಲಿ ಕೈಗೊಂಡಿರುವ ರಸ್ತೆ ಮತ್ತು ಚರಂಡಿ ಕಾಮಗಾರಿಗಳಿಗೆ ಶಾಸಕರು ಚಾಲನೆ ನೀಡಿದರು.

ಕೆಲ್ಲಹಳ್ಳಿ ಗ್ರಾಮದಲ್ಲಿ 50 ಲಕ್ಷ ರೂ.ವೆಚ್ಚದ ರಸ್ತೆ ಮತ್ತು ಚರಂಡಿ ಕಾಮಗಾರಿಗೆ ಚಾಲನೆ ನೀಡಿ ಮಾತನಾಡಿದ ಅವರು, ಗ್ರಾಮದಲ್ಲಿ ಈಗಾಗಲೇ 3 ಕೋಟಿ ರೂ.ವೆಚ್ಚದಲ್ಲಿ ರಸ್ತೆ ಮತ್ತು ಚರಂಡಿ ಕಾಮಗಾರಿ ಕೈಗೊಳ್ಳಲಾಗಿದೆ. ಬಾಕಿ ಇರುವ ರಸ್ತೆ ಅಭಿವೃದ್ಧಿ ಕಾಮಗಾರಿಯೂ ಶೀಘ್ರದಲ್ಲಿ ನಡೆಯಲಿದೆ ಎಂದು ತಿಳಿಸಿದರು.

ಕೆರೆಗೆ ನೀರು ಬಿಡಲು ಹಾಕಿದ್ದ ಪೈಪ್ ಲೈನ್ ಹಾಳಾಗಿತ್ತು. ಹೊಸದಾಗಿ ಪೈಪ್ ಲೈನ್ ಅಳವಡಿಸಲು ಟೆಂಡರ್ ಆಗಿದ್ದು, ಕೂಡಲೇ ಕಾಮಗಾರಿ ಪ್ರಾರಂಭಿಸಿ ಶೀಘ್ರವಾಗಿ ಕೆರೆಗೆ ನೀರು ತುಂಬಿಸಲು ಕ್ರಮ ಕೈಗೊಳ್ಳಲಾಗುವುದು ಎಂದು ಭರವಸೆ ನೀಡಿದರು.



ಗ್ರಾಮದ ಚಾಮುಂಡೇಶ್ವರಿ ದೇವಸ್ಥಾನ ನವೀಕರಣಕ್ಕೆ ಈಗಾಗಲೇ 10 ಲಕ್ಷ ರೂ.ಅನುದಾನ ನೀಡಲಾಗಿದೆ. ಬಾಕಿ ಕಾಮಗಾರಿ ಕೈಗೊಳ್ಳಲು 8 ಲಕ್ಷ ರೂ.ಮಂಜೂರು ಮಾಡಲಾಗಿದ್ದು, ಕೂಡಲೇ ಕಾಮಗಾರಿ ಪೂರ್ಣಗೊಳಿಸಲಾಗುವುದು ಎಂದು ಹೇಳಿದರು.

ಗುಜ್ಜೇಗೌಡನಪುರದಲ್ಲಿ 50 ಲಕ್ಷ ಕಾಮಗಾರಿ:
ನಂತರ ಗುಜ್ಜೇಗೌಡನಪುರ ಗ್ರಾಮದಲ್ಲಿ 50 ಲಕ್ಷ ರೂ.ವೆಚ್ಚದಲ್ಲಿ ಚರಂಡಿ ಮತ್ತು ರಸ್ತೆ ನಿರ್ಮಾಣ ಕಾಮಗಾರಿಗೆ ಚಾಲನೆ ನೀಡಿದರು. ಗ್ರಾಮದಲ್ಲಿ ಇನ್ನೂ ಮೂರು ರಸ್ತೆಗಳು ಬಾಕಿ ಇದ್ದು, ಈ ಅನುದಾನದಲ್ಲೇ ಆ ರಸ್ತೆಗಳನ್ನು ಕೈಗೊಳ್ಳಲಾಗುವುದು. ಇದರಿಂದ ಗುಜ್ಜೇಗೌಡನಪುರ ಗ್ರಾಮವು ಪೂರ್ಣ ಪ್ರಮಾಣದಲ್ಲಿ ಅಭಿವೃದ್ಧಿಯಾಗಲಿದೆ ಎಂದು ತಿಳಿಸಿದರು.

ಗ್ರಾಮಸ್ಥರು ಶ್ರೀ ಬಸವೇಶ್ವರ ದೇವಸ್ಥಾನ ನವೀಕರಣಕ್ಕೆ ಅನುದಾನ ನೀಡುವಂತೆ ಕೋರಿದರು. ಇದಕ್ಕೆ ಸ್ಪಂದಿಸಿದ ಶಾಸಕರು ಕೂಡಲೇ ಅಂದಾಜು ಪಟ್ಟಿ ಸಲ್ಲಿಸುವಂತೆ ಸಂಬಂಧಿಸಿದ ಇಲಾಖೆಯ ಅಧಿಕಾರಿಗಳಿಗೆ ಸೂಚಿಸಿದರು.

ಮದ್ದೂರಿನಲ್ಲಿ ಅಂಗನವಾಡಿ ಉದ್ಘಾಟನೆ, ದೇವಸ್ಥಾನಕ್ಕೆ ಚಾಲನೆ: ಮದ್ದೂರು ಗ್ರಾಮದಲ್ಲಿ ಶಾಸಕರ ಅನುದಾನದಲ್ಲಿ ನಿರ್ಮಾಣಗೊಂಡಿರುವ ಅಂಗನವಾಡಿ ಕಟ್ಟಡವನ್ನು ಉದ್ಘಾಟಿಸಿದರು. ಬಳಿಕ 50 ಲಕ್ಷ ರೂ.ವೆಚ್ಚದಲ್ಲಿ ಶ್ರೀ ಸಿದ್ದಪ್ಪಾಜಿ ದೇವಸ್ಥಾನ ನಿರ್ಮಾಣ ಕಾಮಗಾರಿಗೆ ಚಾಲನೆ ನೀಡಿದರು.

Published by Mihir Akash K.R Printed by M.S.Shivaprakash on behalf of Mihir Akash K.R. Printed at M.S. Shivaprakash, IDEAL OFFSET PRINTERS, #337, SLJ Temple Street, Old Town Mandya Dist-571401, Karnataka. Published from No 170, Nirvikalpa Road, E&F block, Ramakrishna Nagar, Mysore - 570022, Editor K.N Ravi,